ಮಾರ್ಚ್ 1, 2026
41ನೇ ವರ್ಷದಲ್ಲಿ
http//policenews.news https://www.facebook.com/profile.php?id=61579674874846
https://www.instagram.com/police_news?igsh=MWJ6bHJwZDRmZDc1aQ==
ಸ್ಥಾಪಕ ಸಂಪಾದಕ : ದಿ|| ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2026
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹ 20/-



## ಡಿಕೆಗೆ ದಕ್ಕುತ್ತಾ ಸಿಎಂ ಖುರ್ಚಿ?



## ಸಿಎಂ ಸಿದ್ದರಾಮಯ್ಯಗೆ ವಿರೋಧಿಗಳು ಯಾರು?

## ಪತ್ನಿಯನ್ನು ಕೊಂದ ನಿವೃತ್ತ ಇಸ್ರೋ ನೌಕರ!





## ಮದುವೆಗೆ ಒಪ್ಪದ ಸ್ಟಾಫ್ ನರ್ಸ್ ಕೊಲೆ!

## ಸಾಕು ಮಗ & ಸಹೋದರಿಯಿಂದಲೇ ಹತ್ಯೆಯಾದ ಜಯ!



## ಜಿಮ್ ತರಬೇತುದಾರರಿಂದ ಎಚ್ಚರಿಕೆ!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)
**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)
**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)
**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)
**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)
**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)
**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)
**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)
**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)
**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)
**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)
**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)
**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

### ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94
**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)
**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)
**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)
**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)
**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)
**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)
**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)
**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)
**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# ದಲಿತ ಮುಖ್ಯಮಂತ್ರಿಯ ಇತಿಹಾಸ ಕಾಂಗ್ರೆಸ್‌ಗೇ ಸೇರಿದ್ದು; ವಿಪಕ್ಷಗಳ ಅಪಪ್ರಚಾರಕ್ಕೆ ತಿರುಗೇಟು: ಜಿ. ಪರಮೇಶ್ವರ

ದಲಿತ ಮುಖ್ಯಮಂತ್ರಿ ವಿಚಾರವನ್ನು ಮುಂದಿಟ್ಟು ಕೊಂಡು ನಡೆಯುತ್ತಿರುವ ರಾಜಕೀಯ ಚರ್ಚೆಗಳು ಸಂಪೂರ್ಣವಾಗಿ ವಿರೋಧ ಪಕ್ಷಗಳ ಅಪಪ್ರಚಾರದ ಭಾಗವಾಗಿದ್ದು, ಆಡಳಿತದ ವೈಫಲ್ಯಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಉದ್ದೇಶದಿಂದಲೇ ಈ ವಿಷಯವನ್ನು ಅನಗತ್ಯವಾಗಿ ಕೆದಕಲಾಗುತ್ತಿದೆ ಎಂದು ರಾಜ್ಯದ ಗೃಹ ಸಚಿವ ಜಿ ಪರಮೇಶ್ವರ ಆರೋಪಿಸಿದ್ದಾರೆ. ದಲಿತ ಸಮುದಾಯದ ನಾಯಕರನ್ನು ಉನ್ನತ ಹುದ್ದೆಗಳಿಗೆ ಏರಿಸುವ ನೈಜ ರಾಜಕೀಯ ಇಚ್ಛಾಶಕ್ತಿ ಹಾಗೂ ಇತಿಹಾಸ ಕಾಂಗ್ರೆಸ್ ಪಕ್ಷಕ್ಕೇ ಸೇರಿದ್ದು, ಈ ವಿಚಾರದಲ್ಲಿ ಬೇರೆ ಯಾವ ಪಕ್ಷಗಳಿಗೂ ನೈತಿಕ ಹಕ್ಕಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಪರಮೇಶ್ವರ, ದಲಿತ ಮುಖ್ಯಮಂತ್ರಿ ಕುರಿತ ಚರ್ಚೆಗಳು ಏಕಾಏಕಿ ಹೆಚ್ಚಾಗಿರುವುದಕ್ಕೆ ವಿರೋಧ ಪಕ್ಷಗಳ ರಾಜಕೀಯ ಉದ್ದೇಶವೇ ಕಾರಣ ಎಂದು ಹೇಳಿದರು. ತಮ್ಮ ಸ್ವಂತ ವೈಫಲ್ಯಗಳನ್ನು ಮುಚ್ಚಿಹಾಕಲು ಹಾಗೂ ಸರ್ಕಾರದ ಕಾರ್ಯಕ್ಷಮತೆ ಬಗ್ಗೆ ತಪ್ಪು ಭಾವನೆ ಮೂಡಿಸಲು ವಿರೋಧ ಪಕ್ಷಗಳು ಈ ವಿಷಯವನ್ನು ಮುಂದಿಟ್ಟು ಕೊಂಡಿವೆ ಎಂದು ಅವರು ಆರೋಪಿಸಿದರು. ''ಆಡಳಿತ ಸುಗಮವಾಗಿ ನಡೆಯುತ್ತಿಲ್ಲವೇ? ಮುಖ್ಯ ಮಂತ್ರಿ ಕೆಲಸ ಮಾಡುತ್ತಿಲ್ಲವೇ?'' ಎಂದು ಪ್ರಶ್ನಿಸಿದ ಅವರು, ವಾಸ್ತವದಲ್ಲಿ ಸರ್ಕಾರ ತನ್ನ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಕಳೆದ 10 ರಿಂದ 12 ದಿನಗಳ ಅವಧಿಯಲ್ಲಿ ವಿವಿಧ ಇಲಾಖೆಗಳೊಂದಿಗೆ ಬಜೆಟ್ ಕುರಿತು ವಿವರ ವಾದ ಚರ್ಚೆಗಳು ನಡೆದಿದ್ದು, ಆಡಳಿತಾತ್ಮಕ ಪ್ರಕ್ರಿಯೆ ಗಳು ಸರಾಗವಾಗಿ ಸಾಗುತ್ತಿವೆ ಎಂದು ಗೃಹ ಸಚಿವರು ವಿವರಿಸಿದರು. ಅಭಿವೃದ್ಧಿ ಯೋಜನೆಗಳು, ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳು ಮತ್ತು ನೀತಿ ನಿರ್ಧಾರಗಳ ಅನುಷ್ಠಾನದಲ್ಲಿ ಸರ್ಕಾರ ಯಾವುದೇ ರೀತಿಯ ಅಸ್ಥಿರತೆ ಎದುರಿಸುತ್ತಿಲ್ಲ ಎಂದು ಅವರು ಹೇಳಿದರು. ಇಂತಹ ಸಂದರ್ಭದಲ್ಲಿ ದಲಿತ ಮುಖ್ಯಮಂತ್ರಿ ವಿಚಾರವನ್ನು



ರಾಜಕೀಯ ಅಸ್ತ್ರವಾಗಿ ಬಳಸುವುದು ಜನರಲ್ಲಿ ಗೊಂದಲ ಮೂಡಿಸುವ ಪ್ರಯತ್ನ ಮಾತ್ರ, ಎಂದು ಅವರು ಅಭಿಪ್ರಾಯಪಟ್ಟರು.

ದಲಿತರನ್ನು ಮುಖ್ಯಮಂತ್ರಿ ಮಾಡುವ ವಿಚಾರ ದಲ್ಲಿ ಕಾಂಗ್ರೆಸ್ ಪಕ್ಷಕ್ಕಿರುವ ಇತಿಹಾಸವನ್ನು ಸ್ಮರಿಸಿದ ಪರಮೇಶ್ವರ, ಸಾಮಾಜಿಕ ನ್ಯಾಯವನ್ನು ಕೇವಲ ಘೋಷಣೆಯ ಮಟ್ಟದಲ್ಲೇ ಅಲ್ಲ, ಆಡಳಿತದ ಮಟ್ಟ ದಲ್ಲೂ ಜಾರಿಗೆ ತಂದಿರುವುದು ಕಾಂಗ್ರೆಸ್ ಪಕ್ಷವೇ ಎಂದು ಹೇಳಿದರು. ದಲಿತ ನಾಯಕತ್ವಕ್ಕೆ ಅವಕಾಶ ನೀಡುವ ವಿಷಯದಲ್ಲಿ ಕಾಂಗ್ರೆಸ್ ಪಕ್ಷದ ಬದ್ಧತೆ ಪ್ರಶ್ನಾತೀತವಾಗಿದೆ ಎಂದು ಅವರು ಅಭಿಪ್ರಾಯ ಪಟ್ಟರು. ಈ ಹಿನ್ನೆಲೆಯಲ್ಲಿ, ದಲಿತ ಮುಖ್ಯಮಂತ್ರಿ ವಿಚಾರದಲ್ಲಿ ಕಾಂಗ್ರೆಸ್ ಪಕ್ಷವನ್ನು ಪ್ರಶ್ನಿಸುವ ನೈತಿಕತೆ ಬೇರೆ ಯಾರಿಗೂ ಇಲ್ಲ ಎಂದು ಅವರು ಹೇಳಿದರು.

ಈ ವಿಷಯದಲ್ಲಿ ಯಾವುದೇ ಅಂತಿಮ ತೀರ್ಮಾನವನ್ನು ವ್ಯಕ್ತಿಗತ ನಾಯಕರು ತೆಗೆದು ಕೊಳ್ಳುವುದಿಲ್ಲ; ಅದು ಸಂಪೂರ್ಣವಾಗಿ ಪಕ್ಷದ ಹೈಕಮಾಂಡ್ ವ್ಯಾಪ್ತಿಗೆ ಒಳಪಟ್ಟ ವಿಚಾರ ಎಂದು ಗೃಹ ಸಚಿವರು ಸ್ಪಷ್ಟಪಡಿಸಿದರು. ''ದಲಿತ ನಾಯಕನನ್ನು ಮುಖ್ಯಮಂತ್ರಿ ಮಾಡುವ ಪಕ್ಷ ಕಾಂಗ್ರೆಸ್‌ವೇ ಆಗಿರಬೇಕು. ಆದರೆ ಅಂತಹ ನಿರ್ಧಾರವನ್ನು ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುತ್ತದೆ'' ಎಂದು ಅವರು ಹೇಳಿದರು. ಈ

☞ 3

# ಎಐ: ಉದ್ಯೋಗ ಭೀತಿಯಾಚೆ ಭಾರತದ ಭವಿಷ್ಯ



ಸಂಪಾದಕ
ಎಂ. ರಾಹುಲ್

ಕೃತಕ ಬುದ್ಧಿಮತ್ತೆ ಎಂಬುದು ಇಂದು ಕೇವಲ ತಂತ್ರಜ್ಞಾನ ಪದವಾಗಿಲ್ಲ; ಅದು ಮಾನವ ಸಮಾಜದ ಆರ್ಥಿಕ, ಉದ್ಯೋಗ ಮತ್ತು ನಿರ್ವಹಣಾ ವ್ಯವಸ್ಥೆಗಳನ್ನೇ ಆಮೂಲಾಗ್ರವಾಗಿ ಬದಲಾಯಿಸುತ್ತಿರುವ ಶಕ್ತಿಯಾಗಿ ಹೊರಹೊಮ್ಮಿದೆ. ಇತಿಹಾಸವನ್ನು ಗಮನಿಸಿದರೆ, ಪ್ರತಿಯೊಂದು ಕೈಗಾರಿಕಾ ಕ್ರಾಂತಿಯೂ ಆರಂಭದಲ್ಲಿ ಆತಂಕ, ಗೊಂದಲ ಮತ್ತು ಉದ್ಯೋಗ ನಷ್ಟದ ಭೀತಿಯನ್ನು ಹುಟ್ಟುಹಾಕಿದೆ. ಆದರೆ ಕಾಲಕ್ರಮೇಣ ಅದೇ ಕ್ರಾಂತಿಗಳು ಹೊಸ ಉದ್ಯೋಗಗಳು, ಹೊಸ ಕೌಶಲ್ಯಗಳು ಮತ್ತು ಹೊಸ ಆರ್ಥಿಕ ಅವಕಾಶಗಳನ್ನು ಸೃಷ್ಟಿಸಿವೆ. ಇಂದಿನ ಎಐ ಕ್ರಾಂತಿಯೂ ಅದೇ ಹಾದಿಯಲ್ಲಿ ಸಾಗುತ್ತಿದೆ. ಆದರೆ ಇದರ ವೇಗ ಮತ್ತು ವ್ಯಾಪ್ತಿ ಇತಿಹಾಸದಲ್ಲೇ ಕಾಣದಷ್ಟು ತೀವ್ರವಾಗಿರುವುದರಿಂದ, ಇದಕ್ಕೆ ಸಿದ್ಧರಾಗದ ಸಮಾಜಗಳು ಮತ್ತು ವ್ಯಕ್ತಿಗಳು ಹಿಂದೆ ಬೀಳುವ ಅಪಾಯವನ್ನು ಎದುರಿಸುತ್ತಿದ್ದಾರೆ.

ನಾವು ಈಗ ಒಂದು ನಿರ್ಣಾಯಕ ಸಂಕ್ರಮಣ ಕಾಲಘಟ್ಟದಲ್ಲಿದ್ದೇವೆ. ಹಳೆಯ ಕೌಶಲ್ಯಗಳು ದಿನದಿಂದ ದಿನಕ್ಕೆ ಮೌಲ್ಯ ಕಳೆದುಕೊಳ್ಳುತ್ತಿವೆ. ಪುನರಾವರ್ತಿತ ಮತ್ತು ನಿಯಮಾಧಾರಿತ ಕೆಲಸಗಳನ್ನು ಯಂತ್ರಗಳು ಸುಲಭವಾಗಿ ನಿರ್ವಹಿಸಬಲ್ಲ ಸ್ಥಿತಿಗೆ ತಲುಪಿವೆ. ಇದರಿಂದಾಗಿ 'ಒಮ್ಮೆ ಕಲಿತರೆ ಸಾಕು' ಎಂಬ ಮನಸ್ಥಿತಿ ಸಂಪೂರ್ಣವಾಗಿ ಅರ್ಥ ಕಳೆದುಕೊಂಡಿದೆ. ನಿರಂತರ ಕಲಿಕೆ, ಹೊಸ ಕೌಶಲ್ಯಗಳ ಅಳವಡಿಕೆ ಮತ್ತು ತಂತ್ರಜ್ಞಾನ ಬದಲಾವಣೆಗೆ ಮಾನಸಿಕ ಸಿದ್ಧತೆಯೇ ಮುಂದಿನ ದಿನಗಳಲ್ಲಿ ಉದ್ಯೋಗ ಭದ್ರತೆಯನ್ನು ನಿರ್ಧರಿಸುವ ಅಂಶಗಳಾಗಿವೆ.

**'ಟ್ಯಾಲೆಂಟ್ ಟ್ರಾನ್ಸ್‌ಫರ್ಮೇಶನ್' ಎಂಬ ಎಚ್ಚರಿಕೆ**

ಈ ಬದಲಾವಣೆಯನ್ನು Infosys ಸಹ ಸಂಸ್ಥಾಪಕರಾದ ನಂದನ್ ನಿಲೇಕಣಿ 'ಟ್ಯಾಲೆಂಟ್ ಟ್ರಾನ್ಸ್‌ಫರ್ಮೇಶನ್' ಎಂದು ವಿವರಿಸುತ್ತಾರೆ. ಅವರ ದೃಷ್ಟಿಯಲ್ಲಿ ಇದು ಕೇವಲ ತಂತ್ರಜ್ಞಾನ ಬದಲಾವಣೆ ಅಲ್ಲ; ಇದು ಮಾನವ ಸಂಪನ್ಮೂಲದ ಮರುಸಂರಚನೆ. ಆಧಾರ್ ಮತ್ತು UPI ಹಿನ್ನೆಲೆಯಲ್ಲಿ ನಿಂತಿರುವ ನಿಲೇಕಣಿ ಅವರ ಮಾತುಗಳಿಗೆ ಇಂದು ಜಾಗತಿಕ ಮಟ್ಟದಲ್ಲಿ ತೂಕವಿದೆ. ಎಐ ಯಾವ ಉದ್ಯೋಗಗಳನ್ನು ಕಿತ್ತುಕೊಳ್ಳುತ್ತದೆ ಎಂಬ ಪ್ರಶ್ನೆಯಿಗಿಂತ, ನಾವು ಯಾವ ಹೊಸ ಕೌಶಲ್ಯಗಳನ್ನು ಬೆಳೆಸುತ್ತೇವೆ ಎಂಬುದೇ ಮುಖ್ಯ ಎಂದು ಅವರು ಪುನಃ ಪುನಃ ಎಚ್ಚರಿಸುತ್ತಿದ್ದಾರೆ.

ಎಐ ಪ್ರಭಾವದಿಂದಾಗಿ ಐಟಿ ಕ್ಷೇತ್ರದಲ್ಲಿ ಕೆಲವು ಸಾಂಪ್ರದಾಯಿಕ ಹುದ್ದೆಗಳು ಈಗಾಗಲೇ ಒತ್ತಡಕ್ಕೆ ಒಳಗಾಗಿವೆ. ಫ್ರಂಟ್‌ಎಂಡ್ ವೆಬ್ ಡೆವಲಪರ್ಸ್, ಕ್ಯೂಎ ಟೆಸ್ಟರ್ಸ್, ಐಟಿ ಸಪೋರ್ಟ್ ಸಿಬ್ಬಂದಿ ಮತ್ತು ಕೆಲವು ಬ್ಲಾಕ್‌ಚೈನ್ ಸಂಬಂಧಿತ ಹುದ್ದೆಗಳು ನಿಧಾನವಾಗಿ ಹಿಂಜರಿಯುತ್ತಿರುವುದು ಸ್ಪಷ್ಟವಾಗಿದೆ. ಇದಕ್ಕೆ ಕಾರಣ ಎಐ ಈ ಕೆಲಸಗಳನ್ನು ವೇಗವಾಗಿ, ಕಡಿಮೆ ವೆಚ್ಚದಲ್ಲಿ ಮತ್ತು ಹೆಚ್ಚಿನ ನಿಖರತೆಯೊಂದಿಗೆ ನಿರ್ವಹಿಸುವ ಸಾಮರ್ಥ್ಯ ಹೊಂದಿರುವುದೇ. ಆದರೆ ಈ ಸ್ಥಿತಿಯನ್ನು ಕೇವಲ ಉದ್ಯೋಗ ನಷ್ಟದ ದೃಷ್ಟಿಯಿಂದ ನೋಡುವುದು ಅಪೂರ್ಣ ವಿಶ್ಲೇಷಣೆಯಾಗುತ್ತದೆ.

**ಹೊಸ ಉದ್ಯೋಗಗಳ ಉದಯ: ಭರವಸೆಯ ಚಿತ್ರ**



ಒಂದು ಕಡೆ ಹಳೆಯ ಉದ್ಯೋಗಗಳು ನಶಿಸುತ್ತಿದ್ದರೆ, ಮತ್ತೊಂದು ಕಡೆ ಹಿಂದೆ ಅಸ್ತಿತ್ವದಲ್ಲೇ ಇಲ್ಲದ ಹೊಸ ಉದ್ಯೋಗಗಳು ವೇಗವಾಗಿ ಉದಯಿಸುತ್ತಿವೆ. ಡೇಟಾ ಅನ್ನೋಟೇಟರ್ಸ್, ಎಐ ಎಂಜಿನಿಯರ್ಸ್, ಎಐ ಲೀಡ್ಸ್, ಎಐ ಫೋರೆನ್ಸಿಕ್ ಅನಾಲಿಸ್ಟ್ಸ್ ಮತ್ತು ಫಾರ್ವರ್ಡ್ ಡಿಪ್ಲಾಯ್ ಎಂಜಿನಿಯರ್ಸ್ ಹುದ್ದೆಗಳು ಇಂದು ಜಾಗತಿಕವಾಗಿ ಬೇಡಿಕೆಯಲ್ಲಿವೆ. ಈ ಉದ್ಯೋಗಗಳು ಕೇವಲ ಐಟಿ ಕ್ಷೇತ್ರಕ್ಕೆ ಸೀಮಿತವಾಗಿಲ್ಲ; ಆರೋಗ್ಯ, ಶಿಕ್ಷಣ, ಕಾನೂನು, ಕೃಷಿ ಮತ್ತು ಆಡಳಿತ ಕ್ಷೇತ್ರಗಳಲ್ಲಿಯೂ ಎಐ ಆಧಾರಿತ ಹೊಸ ಪಾತ್ರಗಳು ರೂಪುಗೊಳ್ಳುತ್ತಿವೆ. ಆದರೆ ಈ ಅವಕಾಶಗಳನ್ನು ಪಡೆದುಕೊಳ್ಳಲು ಹಳೆಯ ಮನಸ್ಥಿತಿಯನ್ನು ಬಿಟ್ಟು ಹೊಸದನ್ನು ಕಲಿಯುವ ಧೈರ್ಯ ಅನಿವಾರ್ಯ.

ಎಐ ಅನುಷ್ಠಾನದಲ್ಲಿಯೂ ಸಂಸ್ಥೆಗಳು ದೊಡ್ಡ ಸವಾಲುಗಳನ್ನು ಎದುರಿಸುತ್ತಿವೆ. ಹೊಸದಾಗಿ ಎಐ ಸಿಸ್ಟಮ್ ನಿರ್ಮಿಸುವ ಗ್ರೀನ್‌ಫೀಲ್ಡ್ ವಿಧಾನ ತಾಂತ್ರಿಕವಾಗಿ ಸುಲಭವಾದರೂ, ಬಹುತೇಕ ಸಂಸ್ಥೆಗಳು ಈಗಾಗಲೇ ಹಳೆಯ ವ್ಯವಸ್ಥೆಗಳೊಂದಿಗೆ ಬಂಧಿತವಾಗಿವೆ. ಬ್ರೌನ್‌ಫೀಲ್ಡ್ ವಿಧಾನದಲ್ಲಿ ಹಳೆಯ ಸಿಸ್ಟಮ್‌ಗಳಿಗೆ ಎಐ, ಮೆಷಿನ್ ಲರ್ನಿಂಗ್ ಮತ್ತು ಆಟೋಮೇಶನ್ ಸೇರಿಸುವುದು ಸಂಕೀರ್ಣ, ದುಬಾರಿ ಮತ್ತು ಸಮಯ ತೆಗೆದುಕೊಳ್ಳುವ ಪ್ರಕ್ರಿಯೆ. ಆದರೆ ದೀರ್ಘಕಾಲೀನ ಲಾಭ, ನಿಜವಾದ ನಾವೀನ್ಯತೆ ಮತ್ತು ಸ್ಪರ್ಧಾತ್ಮಕ ಶಕ್ತಿ ಈ ಮಾರ್ಗದಲ್ಲಿಯೇ ಅಡಗಿದೆ.



ಇನ್ನೊಂದು ಪ್ರಮುಖ ಪ್ರಶ್ನೆ ಎಂದರೆ ಎಐ ಬಳಕೆಯ ಅರ್ಥವೇನು ಎಂಬುದು. ಕೇವಲ ಎರಡು ಪ್ಯಾರಾಗ್ರಾಫ್ ಇಮೇಲ್ ಅನ್ನು ಹತ್ತು ಪ್ಯಾರಾಗ್ರಾಫ್ ಮಾಡುವುದು ಅಥವಾ ಅದನ್ನು ಮತ್ತೆ ಕಡಿಮೆ ಮಾಡುವುದನ್ನು ಉತ್ಪಾದಕತೆ ಎಂದು ಕರೆಯಲಾಗುವುದಿಲ್ಲ. ಇದು ನಕಲಿ ಉತ್ಪಾದಕತೆ. ನಿಜವಾದ ಉತ್ಪಾದಕತೆ ಎಂದರೆ ಎಐ ಮಾನವನ ಸಮಯವನ್ನು ಉಳಿಸಿ, ನಿರ್ಧಾರಗಳನ್ನು ಸುಧಾರಿಸಿ ಮತ್ತು ಮೌಲ್ಯ ಸೃಷ್ಟಿಸುವ ಪ್ರಕ್ರಿಯೆಯನ್ನು ಹೇಗೆ ಬಲಪಡಿಸುತ್ತದೆ ಎಂಬುದು. ಟ್ರಿಲಿಯನ್‌ಗಳಷ್ಟು ಹೂಡಿಕೆ ಮತ್ತು ಭಾರೀ ತಾಂತ್ರಿಕ ಸಾಲಗಳನ್ನು ಹೊತ್ತುಕೊಂಡಿರುವ ಕಂಪನಿಗಳು ಈ ಪ್ರಶ್ನೆಗೆ ಉತ್ತರ ಹುಡುಕಲೇಬೇಕು.

**ಭಾರತದ ಶಕ್ತಿ: ಅನುಷ್ಠಾನದ ಕಲೆ**

ಭಾರತದ ಶಕ್ತಿ ಇಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಭಾರತದ ಬಲ ಕೇವಲ ಸಂಶೋಧನೆಯಲ್ಲಿ ಅಲ್ಲ; ಸಂಶೋಧನೆಯನ್ನು ದೊಡ್ಡ ಪ್ರಮಾಣದಲ್ಲಿ ಜನಸಾಮಾನ್ಯರಿಗೆ ತಲುಪಿಸುವ ಅನುಷ್ಠಾನದಲ್ಲಿದೆ. ದೊಡ್ಡ ಜನಸಂಖ್ಯೆಯ ದೇಶದಲ್ಲಿ ತಂತ್ರಜ್ಞಾನ ಅಳವಡಿಕೆ ಎಂದರೆ ಅದು ಕೇವಲ ವಿಜ್ಞಾನವಲ್ಲ; ಅದು ನೀತಿ, ವಿಶ್ವಾಸ, ಆಡಳಿತ ಮತ್ತು ಸಮಾಜದ ಒಪ್ಪಿಗೆಯ ಸಂಯೋಜನೆಯಾಗಿದೆ. ಈ ಕಲೆ ಮತ್ತು ವಿಜ್ಞಾನದ ಸಂಗಮವೇ ಭಾರತವನ್ನು ವಿಭಿನ್ನವಾಗಿಸುತ್ತದೆ.

ಈ ಹಿನ್ನೆಲೆಯಲ್ಲಿ ಭಾರತ ಎಐ ಹೂಡಿಕೆಗಳ ಪ್ರಮುಖ ಕೇಂದ್ರವಾಗಿ ಹೊರಹೊಮ್ಮುತ್ತಿದೆ. Google ಮತ್ತು Microsoft ಭಾರತದ ಎಐ ಸಾಮರ್ಥ್ಯದಲ್ಲಿ ಭವಿಷ್ಯ ನೋಡುತ್ತಿವೆ. ಗೂಗಲ್ ಸಿಇಒ Sundar Pichai ಅವರ ಮಾರ್ಗಸೂಚಿಯೊಂದಿಗೆ ಎಐ ಹಬ್‌ಗಳ ಸ್ಥಾಪನೆ ನಡೆಯುತ್ತಿದ್ದು, Adani Group ಎಐ ಡೇಟಾ ಮೂಲಸೌಕರ್ಯಕ್ಕೆ ಭಾರೀ ಹೂಡಿಕೆ ಘೋಷಿಸಿದೆ. ಕೇಂದ್ರ ಸರ್ಕಾರವೂ ದೀರ್ಘಾವಧಿಯ ತೆರಿಗೆ ಸೌಲಭ್ಯಗಳ ಮೂಲಕ ಈ ಕ್ಷೇತ್ರಕ್ಕೆ ಬೆಂಬಲ ನೀಡುತ್ತಿದೆ.

ಸಾಗರದಾಳದ ಫೈಬರ್‌ಆಪ್ಟಿಕ್ ಕೇಬಲ್ ಜಾಲಗಳು ಭಾರತವನ್ನು ಜಾಗತಿಕ ಡಿಜಿಟಲ್ ಆರ್ಥಿಕತೆಯ ಕೇಂದ್ರದೊಂದಿಗೆ ನೇರವಾಗಿ ಸಂಪರ್ಕಿಸುತ್ತಿವೆ. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಇತರ ರಾಜ್ಯಗಳಲ್ಲಿ ಡೇಟಾ ಸೆಂಟರ್‌ಗಳ ಭಾರಿ ಅಭಿವೃದ್ಧಿ ನಡೆಯುತ್ತಿದೆ. ಜಾಗತಿಕ ಡೇಟಾ ವೆಚ್ಚದಲ್ಲಿ ಭಾರತದ ಪಾಲು 20 ಶೇಕಡಾ ತಲುಪುವ ನಿರೀಕ್ಷೆಯಿದ್ದು, ಎಐ ಮೂಲಕ ದೇಶದ ಆರ್ಥಿಕ ಬೆಳವಣಿಗೆಯಲ್ಲಿ 25 ಶೇಕಡಾವರೆಗೆ ಕೊಡುಗೆ ಸಾಧ್ಯವೆಂಬ ಅಂದಾಜು ವ್ಯಕ್ತವಾಗಿದೆ.

ಒಟ್ಟಾರೆಯಾಗಿ, ಎಐ ಎಂಬುದು ಭಯಪಡುವ ವಿಷಯವಲ್ಲ; ಅದು ಸಿದ್ಧರಾಗಬೇಕಾದ ಸತ್ಯ. ಇದನ್ನು ನಿರ್ಲಕ್ಷಿಸಿದರೆ ಅವಕಾಶಗಳು ಕೈ ತಪ್ಪುತ್ತವೆ. ಆದರೆ ವಿವೇಕದಿಂದ, ದೂರದೃಷ್ಟಿಯಿಂದ ಮತ್ತು ಸಮಗ್ರ ನೀತಿಗಳೊಂದಿಗೆ ಅಳವಡಿಸಿಕೊಂಡರೆ, ಇದೇ ಎಐ ಭಾರತದ ಮುಂದಿನ ಆರ್ಥಿಕ, ಸಾಮಾಜಿಕ ಮತ್ತು ಉದ್ಯೋಗ ಕ್ರಾಂತಿಯ ಪ್ರಮುಖ ಚಾಲಕವಾಗಲಿದೆ. ಇಂದು ನಾವು ತೆಗೆದುಕೊಳ್ಳುವ ನಿರ್ಧಾರಗಳೇ ನಾಳೆಯ ಭಾರತದ ದಿಕ್ಕನ್ನು ನಿರ್ಧರಿಸಲಿವೆ.

-ಸಂ.

2 ☞

ಕುರಿತು ಅನಗತ್ಯ ಊಹಾಪೋಹಗಳಿಗೆ ಅವಕಾಶ ನೀಡಬಾರದು ಎಂಬ ಸಂದೇಶವನ್ನೂ ಅವರು ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾಜಿಕ ನ್ಯಾಯದ ವಿಚಾರದಲ್ಲಿ ಜೆಡಿಎಸ್ ಅನ್ನು ಗುರಿಯಾಗಿಸಿಕೊಂಡು ನೀಡಿರುವ ಹೇಳಿಕೆಗಳ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, ಸಿದ್ದರಾಮಯ್ಯ ಅವರ ರಾಜಕೀಯ ಹಿನ್ನೆಲೆಯನ್ನು ಉಲ್ಲೇಖಿಸಿದರು. ಅವರು ಈ ಹಿಂದೆ ಜೆಡಿಎಸ್‌ನ ಭಾಗವಾಗಿದ್ದು, ಉಚ್ಚಾಟನೆಯ ಮೊದಲು ಪಕ್ಷದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು ಎಂದು ಹೇಳಿದರು. ಆದ್ದರಿಂದ ಆ ಪಕ್ಷದ ಆಂತರಿಕ ಇತಿಹಾಸ ಮತ್ತು ಸಾಮಾಜಿಕ ನ್ಯಾಯದ ನಿಲುವುಗಳ ಬಗ್ಗೆ ಅವರಿಗೆ ಸಂಪೂರ್ಣ ಅರಿವು ಇದೆ ಎಂದು ಅವರು ತಿಳಿಸಿದರು.

ಜೆಡಿಎಸ್‌ನ ಆಂತರಿಕ ವಿಚಾರಗಳ ಕುರಿತು ಪ್ರತಿಕ್ರಿಯಿಸಲು ನಿರಾಕರಿಸಿದ ಗೃಹ ಸಚಿವರು, ಸಾಮಾಜಿಕ ನ್ಯಾಯದ ವಿಷಯದಲ್ಲಿ ಸಿದ್ದರಾಮಯ್ಯ ಅವರ ನಿಲುವು ಸದಾ ಸ್ಪಷ್ಟ ಮತ್ತು ನಿರಂತರವಾಗಿದೆ ಎಂದು ಹೇಳಿದರು. ಅವರ ರಾಜಕೀಯ ಜೀವನವು ಆರಂಭದಿಂದಲೂ ಸಾಮಾಜಿಕ ನ್ಯಾಯದ ತತ್ವಗಳ ಮೇಲೆ ನಿಂತಿದ್ದು, ಅದರಲ್ಲಿ ಯಾವುದೇ ಹೊಸತನ ಅಥವಾ ಅವಕಾಶವಾದಿತನ ಇಲ್ಲ ಎಂದು ಅವರು ಅಭಿಪ್ರಾಯಪಟ್ಟರು. ಹಿಂದುಳಿದ ವರ್ಗಗಳು, ದಲಿತರು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಹಕ್ಕುಗಳಿಗಾಗಿ ಅವರು ನಿರಂತರವಾಗಿ ಧ್ವನಿ ಎತ್ತಿಕೊಂಡು ಬಂದಿದ್ದಾರೆ ಎಂದು ಹೇಳಿದರು.

ಒಟ್ಟಿನಲ್ಲಿ, ರಾಜ್ಯದ ಆಡಳಿತ ಸ್ಥಿರವಾಗಿದ್ದು, ಸರ್ಕಾರ ತನ್ನ ಅಭಿವೃದ್ಧಿ ಮತ್ತು ಸಾಮಾಜಿಕ ಕಲ್ಯಾಣ ಕಾರ್ಯಸೂಚಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಪುನರುಚ್ಚರಿಸಿದರು. ದಲಿತ ನಾಯಕತ್ವ ಹಾಗೂ ಸಾಮಾಜಿಕ ನ್ಯಾಯದ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ನಿಲುವು ಸ್ಪಷ್ಟವಾಗಿದ್ದು, ವಿರೋಧ ಪಕ್ಷಗಳ ಅಪಪ್ರಚಾರಕ್ಕೆ ಮಾರು ಹೋಗದೆ ಜನರು ವಾಸ್ತವವನ್ನು ಅರಿಯಬೇಕು ಎಂಬ ಸಂದೇಶವನ್ನು ಅವರು ನೀಡಿದರು.


ರಾಜಕೀಯವಾಗಿ ಸಂವೇದನಾಶೀಲವಾಗಿರುವ ದಲಿತ ಮುಖ್ಯಮಂತ್ರಿ ವಿಚಾರವನ್ನು ಜವಾಬ್ದಾರಿಯುತವಾಗಿ ನೋಡಬೇಕಾದ ಅಗತ್ಯವಿದೆ ಎಂದು ಗೃಹ ಸಚಿವರು ಅಭಿಪ್ರಾಯಪಟ್ಟರು. ಸಾಮಾಜಿಕ ನ್ಯಾಯದಂತಹ ಮಹತ್ವದ ವಿಷಯವನ್ನು ಕೇವಲ ರಾಜಕೀಯ ಲಾಭಕ್ಕಾಗಿ ಬಳಸುವುದು ಸರಿಯಲ್ಲ ಎಂದು ಅವರು ಹೇಳಿದರು. ದಲಿತ ಸಮುದಾಯದ ಆಶಯಗಳು, ಹೋರಾಟಗಳು ಮತ್ತು ಹಕ್ಕುಗಳನ್ನು ಗೌರವಿಸುವ ಮನೋಭಾವದಿಂದಲೇ ಈ ವಿಚಾರವನ್ನು ಚರ್ಚಿಸಬೇಕು ಹೊರತು, ರಾಜಕೀಯ ಗೊಂದಲ ಸೃಷ್ಟಿಸುವ ಉದ್ದೇಶದಿಂದಲ್ಲ ಎಂದು ಅವರು ಹೇಳಿದರು. ರಾಜ್ಯದ ಜನತೆ ಈ ವಾಸ್ತವವನ್ನು ಅರಿತು, ಅಪಪ್ರಚಾರಕ್ಕೆ ಮಾರು ಹೋಗದೆ ಆಡಳಿತದ ನೈಜ ಕಾರ್ಯಕ್ಷಮತೆಯನ್ನು ಗಮನಿಸಬೇಕು ಎಂಬುದು ಅವರ ಮನವಿ.

# ಬೀದರ್: ಸ್ಪಾ ಹೆಸರಿನಲ್ಲಿ ವೇಶ್ಯಾವಾಟಿಕೆ ದಂಧೆ! ಲೋಟಸ್ ಸ್ಪಾ ಮೇಲೆ ಪೊಲೀಸ್ ದಾಳಿ

ಬೀದರ

ವೀರಶೆಟ್ಟಿ ಕುಂಬಾರ

ಬೀದರ್ ಜಿಲ್ಲೆಯಲ್ಲಿ ಮತ್ತೊಮ್ಮೆ ಸಮಾಜದ ನೈತಿಕತೆಯನ್ನು ಪ್ರಶ್ನಿಸುವಂತಹ ಗಂಭೀರ ಅಪರಾಧ ಪ್ರಕರಣ ಬೆಳಕಿಗೆ ಬಂದಿದ್ದು, ಸ್ಪಾ ಹೆಸರಿನಲ್ಲಿ ನಡೆಯುತ್ತಿದ್ದ ವೇಶ್ಯಾವಾಟಿಕೆ ದಂಧೆಯನ್ನು ಪೊಲೀಸರು ಭೇದಿಸಿದ್ದಾರೆ. ಬೀದರ್ ನಗರದ ಶಿವನಗರ ಟ್ರಾಫಿಕ್ ಸಿಗ್ನಲ್ ಸಮೀಪದಲ್ಲಿರುವ ಬ್ಲೂ ಸ್ಟಾರ್ ಲಾಡ್ಜ್ ಕಟ್ಟಡದ ಮೊದಲ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 'ಲೋಟಸ್ ಸ್ಪಾ'ಯಲ್ಲಿ ಅಕ್ರಮ ಲೈಂಗಿಕ ದಂಧೆ ನಡೆಯುತ್ತಿರುವ ಖಚಿತ ಮಾಹಿತಿಯ ಆಧಾರದಲ್ಲಿ ಜಿಲ್ಲಾ ಪೊಲೀಸರು ದಾಳಿ ನಡೆಸಿ, ನಾನಾ ರಾಜ್ಯಗಳ ಐವರು ಮಹಿಳೆಯರನ್ನು ರಕ್ಷಣೆ ಮಾಡಿದ್ದಾರೆ. ಈ ಪ್ರಕರಣವು ಕೇವಲ ಅಕ್ರಮ ವೇಶ್ಯಾವಾಟಿಕೆಗೆ ಮಾತ್ರ ಸೀಮಿತವಾಗದೇ, ಮಾನವ ಕಳ್ಳಸಾಗಣೆ, ಮಹಿಳಾ ಶೋಷಣೆ ಹಾಗೂ ಹಣದ ದಂಧೆಯ ಹಲವು ಆಯಾಮಗಳನ್ನು ಬಹಿರಂಗ ಪಡಿಸಿದೆ.




ಶಿವನಗರದಲ್ಲಿರುವ ಲೋಟರ್ ಸ್ಪಾ

ಕಳೆದ ಕೆಲವು ದಿನಗಳಿಂದ ಶಿವನಗರ ಹಾಗೂ ಅದರ ಸುತ್ತಮುತ್ತಲ ಪ್ರದೇಶದಲ್ಲಿ ಅನುಮಾನಾಸ್ಪದ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಪೊಲೀಸರಿಗೆ ಗುಪ್ತ ಮಾಹಿತಿ ಲಭ್ಯವಾಗಿತ್ತು. ಸ್ಪಾ ಕೇಂದ್ರದ



ಎಸ್ಪಿ ಪ್ರದೀಪ್ ಗುಂಟಿ



ಹೆಚ್ಚುವರಿ ಎಸ್ಪಿ ಚಂದ್ರಕಾಂತ್ ಪೂಜಾರಿ


ಹೆಸರಿನಲ್ಲಿ ಗ್ರಾಹಕರನ್ನು ಸೆಳೆಯಲಾಗುತ್ತಿದ್ದು, ಒಳಗೆ ಅಕ್ರಮ ಲೈಂಗಿಕ ಚಟುವಟಿಕೆಗಳು ನಡೆಯುತ್ತಿವೆ ಎಂಬ ಖಚಿತ ಸುಳಿವಿನ ಮೇರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟೆ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಚಂದ್ರಕಾಂತ ಪೂಜಾರಿರವರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದರು. ಸಾರ್ವಜನಿಕ ಶಾಂತಿ ಮತ್ತು ಮಹಿಳಾ ಸುರಕ್ಷತೆ ದೃಷ್ಟಿಯಿಂದ ಯಾವುದೇ ವಿಳಂಬವಿಲ್ಲದೆ ತಕ್ಷಣ ಕಾರ್ಯಾಚರಣೆಗೆ ಸೂಚನೆ ನೀಡಲಾಯಿತು.

ಅವರ ಮಾರ್ಗದರ್ಶನದಂತೆ ಸೆನ್ ಪೊಲೀಸ್ ಠಾಣೆಯ ಡಿವೈಎಸ್ಪಿ ಎಸ್. ಎನ್. ಸವದಿ ಅವರ ನೇತೃತ್ವದಲ್ಲಿ ನೂತನ ನಗರ ಪೊಲೀಸ್ ಠಾಣೆಯ ಸಿಪಿಐ ವಿಜಯಕುಮಾರ್ ಬಾವಗಿ, ಮಹಿಳಾ ಪೊಲೀಸ್ ಸಿಬ್ಬಂದಿ ಹಾಗೂ ಬೀದರ್ ಡಿಎಸ್‌ಬಿ ಘಟಕದ ಅಧಿಕಾರಿಗಳು ಸೇರಿ ವಿಶೇಷ ತಂಡವನ್ನು ರಚಿಸಲಾಯಿತು. ಸಂಪೂರ್ಣವಾಗಿ ಯೋಜಿತ ಹಾಗೂ ರಹಸ್ಯ ಕಾರ್ಯಾಚರಣೆಯ ಮೂಲಕ ದಿನಾಂಕ 1302 2026ರಂದು ಸಂಜೆ ಸಮಯದಲ್ಲಿ ಪೊಲೀಸರು ಲೋಟಸ್ ಸ್ಪಾ ಮೇಲೆ ದಾಳಿ ನಡೆಸಿದರು. ಗ್ರಾಹಕರಂತೆ ನಡೆದುಕೊಂಡು ಒಳ ಪ್ರವೇಶಿಸಿದ ಪೊಲೀಸರು, ಸ್ಪಾ ಕೇಂದ್ರದ ಒಳಗಿನ ಸ್ಥಿತಿಗತಿಗಳನ್ನು ಪರಿಶೀಲಿಸಿದಾಗ ಆರೋಪಗಳು ಸತ್ಯವೆಂಬುದು ದೃಢಪಟ್ಟಿತು.

ಸ್ಪಾ ಒಳಗಿನ ಕೋಣೆಗಳಿಗೆ ಪ್ರವೇಶಿಸಿದಾಗ ಅಲ್ಲಿ ಎರಡು ಪ್ರತ್ಯೇಕ ಕೊಠಡಿಗಳಲ್ಲಿ ಗಂಡಸರು ಹಾಗೂ ಮಹಿಳೆಯರು ಅರೆಬೆತ್ತಲೆ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಲೈಂಗಿಕ ಕ್ರಿಯೆ ನಡೆಯುತ್ತಿರುವುದು ಸ್ಪಷ್ಟವಾಗಿ ಗೋಚರಿಸಿತು. ಇದರಿಂದ ಸ್ಪಾ ಹೆಸರಿನಲ್ಲಿ ನಡೆಯುತ್ತಿದ್ದ ಅಕ್ರಮ ವೇಶ್ಯಾವಾಟಿಕೆ ದಂಧೆ ಬಯಲಾಗಿದ್ದು, ತಕ್ಷಣವೇ ಪೊಲೀಸರು ಕಾರ್ಯಾಚರಣೆ ಮುಂದುವರಿಸಿದರು. ಸ್ಥಳದಲ್ಲಿದ್ದ ಸ್ಪಾದ ಮಾಲಿಕ ಕರಣ ತಂದೆ ಮಾಣಿಕ ಚವ್ಹಾಣ್ (23) ಹಾಗೂ ಅಲ್ಲೇ ಕೆಲಸ ಮಾಡುತ್ತಿದ್ದ ಸಂದೀಪ್ ತಂದೆ ಸಂತೋಷ್ (21) ಎಂಬ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು.



ಡಿವೈಎಸ್ಪಿ ಎಸ್.ಎನ್. ಸವದಿ



ಸಿಪಿಐ ವಿಜಯ್‌ಕುಮಾರ್ ಬಾವುಗಿ


ಪೊಲೀಸರ ವಿಚಾರಣೆಯಲ್ಲಿ ಭಯಾನಕ ಸತ್ಯಗಳು ಹೊರಬಂದವು. ಆರೋಪಿಗಳು ದೇಶದ ವಿವಿಧ ರಾಜ್ಯಗಳಿಂದ ಮಹಿಳೆಯರನ್ನು ಸಂಪರ್ಕಿಸಿ, ಸ್ಪಾ ಉದ್ಯೋಗದ ಹೆಸರಿನಲ್ಲಿ ಬೀದರ್‌ಗೆ ಕರೆಸಿಕೊಳ್ಳುತ್ತಿದ್ದರು. ಪ್ರತಿ ಗ್ರಾಹಕರಿಂದ 2,500 ರೂ. ವಸೂಲಿ ಮಾಡಲಾಗುತ್ತಿದ್ದು, ಆ ಹಣದಲ್ಲಿ ಕೇವಲ 500 ರೂ. ಮಾತ್ರ ಮಹಿಳೆಯರಿಗೆ ನೀಡಿ ಉಳಿದ ಹಣವನ್ನು ಆರೋಪಿಗಳು ತಮ್ಮಲ್ಲೇ ಇಟ್ಟುಕೊಳ್ಳುತ್ತಿದ್ದರು. ಮಹಿಳೆಯರನ್ನು ದಿನಪೂರ್ತಿ ಕೊಠಡಿಗಳಲ್ಲೇ ಕಾಯಿಸುತ್ತಿದ್ದು, ಗ್ರಾಹಕರು ಬಂದಾಗ ಕೋಣೆ ವ್ಯವಸ್ಥೆ ಮಾಡಿ ಲೈಂಗಿಕ ಕ್ರಿಯೆಗೆ ಬಲವಂತಪಡಿಸಲಾಗುತ್ತಿತ್ತು ಎಂಬುದಾಗಿ ಮಹಿಳೆಯರು ಪೊಲೀಸರಿಗೆ ವಿವರಿಸಿದ್ದಾರೆ.



ಆರೋಪಿಯನ್ನು ವಿಚಾರಿಸುತ್ತಿರುವ ಪೊಲೀಸ್ ಅಧಿಕಾರಿ

ದಾಳಿಯ ಸಂದರ್ಭದಲ್ಲಿ ಐವರು ಮಹಿಳೆಯರನ್ನು ಪೊಲೀಸರು ಸುರಕ್ಷಿತವಾಗಿ ರಕ್ಷಿಸಿದ್ದು, ಅವರು ಹಿಂದಿ ಭಾಷೆ ಮಾತನಾಡುವವರಾಗಿದ್ದಾರೆ. ಮಹಾರಾಷ್ಟ್ರ, ಮಧ್ಯಪ್ರದೇಶ, ಅಸ್ಸಾಂ ಹಾಗೂ ಹರಿಯಾಣ ಸೇರಿದಂತೆ ವಿವಿಧ ರಾಜ್ಯಗಳಿಂದ ಬಂದಿರುವ ಈ ಮಹಿಳೆಯರು, ಆರ್ಥಿಕ ಸಂಕಷ್ಟ ಮತ್ತು ಉದ್ಯೋಗದ ಭರವಸೆಗೆ ಒಳಗಾಗಿ ಈ ದಂಧೆಗೆ ಸಿಲುಕಿದ್ದಾರೆ ಎಂಬುದು ತನಿಖೆಯಿಂದ ತಿಳಿದುಬಂದಿದೆ. ಸ್ಪಾ ಕೆಲಸ ಎಂದು ನಂಬಿ ಬಂದ ಮಹಿಳೆಯರನ್ನು ಅಕ್ರಮ ಲೈಂಗಿಕ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುತ್ತಿತ್ತು.

ದಾಳಿ ವೇಳೆ ಸ್ಪಾದೊಳಗಿಂದ 6,000 ರೂ. ನಗದು ಹಣವನ್ನು ವಶಪಡಿಸಿಕೊಳ್ಳಲಾಗಿದ್ದು, ಇದು ಗ್ರಾಹಕರಿಂದ ವಸೂಲಿ ಮಾಡಿದ್ದ ಹಣವಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಆರೋಪಿಗಳ ಮೊಬೈಲ್ ಫೋನ್‌ಗಳು, ದಾಖಲೆಗಳು ಹಾಗೂ ಇತರ ವಸ್ತುಗಳನ್ನು ಸಹ ಪರಿಶೀಲನೆಗಾಗಿ ಜಪ್ತಿ ಮಾಡಲಾಗಿದೆ. ಈ ಮೂಲಕ ದಂಧೆಯ ಹಿಂದೆ ಇನ್ನೂ ಯಾರಾದರೂ ಇದ್ದಾರೆಯೇ ಎಂಬ ಬಗ್ಗೆ ತನಿಖೆ ಮುಂದುವರಿದಿದೆ.



ಆರೋಪಿಗಳಾದ ಕರಣ ಹಾಗೂ ಸಂದೀಪ

ಈ ಪ್ರಕರಣ ಸಂಬಂಧ ಬೀದರ್ ಮಹಿಳಾ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 14/2026 ಅಡಿಯಲ್ಲಿ, ಅನೈತಿಕ ವ್ಯಾಪಾರ ತಡೆ ಕಾಯ್ದೆ (PITA Act) ಕಲಂ 3, 4 ಮತ್ತು 5ರಂತೆ ಪ್ರಕರಣ ದಾಖಲಿಸಲಾಗಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಪ್ರಕ್ರಿಯೆ ನಡೆಯುತ್ತಿದ್ದು, ಮಹಿಳೆಯರನ್ನು ಪುನರ್ವಸತಿ ಹಾಗೂ ಕಾನೂನು ನೆರವಿಗಾಗಿ ಮಹಿಳಾ ಕಲ್ಯಾಣ ಇಲಾಖೆಗೆ ಒಪ್ಪಿಸುವ ಕ್ರಮ ಕೈಗೊಳ್ಳಲಾಗಿದೆ.

ಪೊಲೀಸ್ ಅಧಿಕಾರಿಗಳ ಪ್ರಕಾರ, ಈ ದಂಧೆ ಕೆಲ ತಿಂಗಳಿಂದ ನಡೆಯುತ್ತಿದ್ದು, ನಗರದಲ್ಲಿ ಸ್ಪಾ ಮತ್ತು ಮಸಾಜ್ ಕೇಂದ್ರಗಳ ಹೆಸರಿನಲ್ಲಿ ಇಂತಹ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಕಠಿಣ ನಿಗಾ ವಹಿಸಲಾಗುವುದು. ಮುಂದೆ ಇಂತಹ ಪ್ರಕರಣಗಳು ಮರುಕಳಿಸದಂತೆ ನಿಯಮಿತ ತಪಾಸಣೆ ಹಾಗೂ ಗುಪ್ತಚರ ಮಾಹಿತಿ ಸಂಗ್ರಹವನ್ನು ಇನ್ನಷ್ಟು ಬಲಪಡಿಸಲಾಗುವುದು ಎಂದು ತಿಳಿಸಿದ್ದಾರೆ.


ಈ ದಾಳಿಯಲ್ಲಿ ಮಹಿಳಾ ಪಿಸಿ ಸಲ್ಮಾ, ಮಹಿಳಾ ಹೆಚ್‌ಸಿ ಸುಪ್ರೀತಾ, ಪಿಸಿಗಳಾದ ಎಲಿಶಾ, ಕುಪೇಂದ್ರ ಹಾಗೂ ಜೀಪ್ ಚಾಲಕ ರವೀಂದ್ರಕುಮಾರ್ ಸೇರಿದಂತೆ ಹಲವಾರು ಸಿಬ್ಬಂದಿ ಭಾಗವಹಿಸಿದ್ದು, ಅವರ ಕಾರ್ಯಾಚರಣೆಯನ್ನು ಹಿರಿಯ ಅಧಿ ಕಾರಿಗಳು ಶ್ಲಾಘಿಸಿದ್ದಾರೆ. ಸಾರ್ವಜನಿಕ ಸಹಕಾರ ಹಾಗೂ ಜಾಗೃತಿಯೇ ಇಂತಹ ಸಮಾಜ ವಿರೋಧಿ ಚಟುವಟಿಕೆಗಳನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಪೊಲೀಸರು ಮನವಿ ಮಾಡಿದ್ದಾರೆ.

**ಸಮಾಜದ ಅಂಚಿನಲ್ಲಿ ನಿಂತಿರುವ ಮಹಿಳೆಯರ ನೋವು ಮತ್ತು ಅಸಹಾಯಕತೆಯನ್ನು ಪ್ರತಿಬಿಂಬಿಸುವ ಮತ್ತೊಂದು ಕರುಣಾಜನಕ ಘಟನೆ ಬೀದರ್ ಜಿಲ್ಲೆಯಲ್ಲಿ ಬೆಳಕಿಗೆ ಬಂದಿದೆ. ಸ್ಪಾ ಉದ್ಯೋಗದ ಭರವಸೆಯೊಂದಿಗೆ ಬೇರೆ ರಾಜ್ಯಗಳಿಂದ ಕರೆತರಲಾಗಿದ್ದ ಮಹಿಳೆಯರನ್ನು ಅಕ್ರಮ ಲೈಂಗಿಕ ದಂಧೆಗೆ ಬಳಸದಲಾಗುತ್ತಿದ್ದ ಪ್ರಕರಣವನ್ನು ಪೊಲೀಸರು ಭೇದಿಸಿದ್ದು, ಶಿವನಗರ ಪ್ರದೇಶದಲ್ಲಿನ ಲೋಟಸ್ ಸ್ಪಾ ಮೇಲೆ ನಡೆದ ದಾಳಿಯಲ್ಲಿ ಐವರು ಮಹಿಳೆಯರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ. ಈ ಪ್ರಕರಣ ಕೇವಲ ಅಪರಾಧವಲ್ಲ; ಅದು ಆರ್ಥಿಕ ಸಂಕಷ್ಟ, ಮೋಸ ಮತ್ತು ಶೋಷಣೆಯ ನಡುವಿನ ಕಹಿ ವಾಸ್ತವವನ್ನೇ ಸಮಾಜದ ಮುಂದೆ ಇಟ್ಟಿದೆ.**



ಎಎಸ್‌ಐ ಗುಂಪ್ಪ, ಹೆಚ್‌ಸಿ ಸಿ. ಸಂತೋಷ್ ಹಾಗೂ ಪಿಸಿ ಸಂತೋಷ್

# ಮದುವೆಗೆ ಒಪ್ಪದ ಸ್ಟಾಫ್ ನರ್ಸ್ ಕೊಲೆ!
# ಆರೋಪಿಗೆ ಸಾರ್ವಜನಿಕರಿಂದ ಧರ್ಮದೇಟು


ಸಾರ್ವಜನಿಕರಿಂದ ಧರ್ಮದೇಟು ತಿಂದ ಆರೋಪಿ ಚಿರಂಜೀವಿ


ಸುಜಾತ ಬದುಕಿದ್ದಾಗ

**ಮೈಕ್ರೋ ಫೈನಾನ್ಸ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಸಾಲ ವಸೂಲಿಗಾರನೊಬ್ಬ ಸಾಲ ವಸೂಲಿಗೆಂದು ಸ್ಟಾಫ್ ನರ್ಸ್ ಮನೆಗೆ ಹೋಗುತ್ತಿದ್ದವನು ಆಕೆಯನ್ನು ತನ್ನ ಪ್ರೀತಿಯ ಬಲೆಗೆ ಬೀಳಿಸಿಕೊಂಡು ಮದುವೆಯಾಗುವಂತೆ ಒತ್ತಾಯಿಸುತ್ತಿದ್ದನು. ಸಾಲ ವಸೂಲಿಗಾರನಿಗೆ ಮದುವೆಯಾಗಿ ಹೆಂಡತಿ, ಮಕ್ಕಳಿರುವ ವಿಚಾರ ಸ್ಟಾಫ್ ನರ್ಸ್‌ಗೆ ಗೊತ್ತಾಗಿ ಮದುವೆಯಾಗುವುದಿಲ್ಲವೆಂದು ಹೇಳಿದಳು. ಅದಕ್ಕೆ ಅವನು ನನ್ನನ್ನು ಮದುವೆಯಾಗದಿದ್ದರೂ ಪರವಾಗಿಲ್ಲ ನಾವಿಬ್ಬರು ಲಿವಿಂಗ್ ಟುಗೆದರ್‌ನಲ್ಲಿದ್ದು ಬಿಡೋಣವೆಂದು ಹೇಳಿ ಹಿಂದೆ ಬಿದ್ದನು. ಇದಕ್ಕೆ ಸ್ಟಾಫ್ ನರ್ಸ್ ಒಪ್ಪದಿದ್ದಕ್ಕೆ ನನಗೆ ಸಿಗದವಳು ಬೇರೆ ಯಾರಿಗೂ ಸಿಗಬಾರದೆಂದು ಕೆಲಸಕ್ಕೆ ಹೋಗುತ್ತಿದ್ದವಳ ಹಿಂದೆಯೇ ಹೋಗಿ ಆಕೆಯೊಂದಿಗೆ ಜಗಳ ತೆಗೆದು ಚಾಕುವಿನಿಂದ ಕತ್ತು ಕೊಯ್ದು ಪರಾರಿಯಾಗುತ್ತಿದ್ದ ಆರೋಪಿಯನ್ನು ಸಾರ್ವಜನಿಕರು ಹಿಡಿದು ಧರ್ಮದೇಟು ಕೊಟ್ಟು ಪೊಲೀಸರಿಗೆ ಒಪ್ಪಿಸಿರುವ ಘಟನೆ ಕೋಲಾರ ನಗರದಲ್ಲಿ ನಡೆದಿದೆ.**

**ಕೋಲಾರ**

ಕೋಲಾರ ಮಂಜು


ಕೊಲೆಯಾದ ಸುಜಾತ

ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನ ದಾಸರ ಹೊಸಹಳ್ಳಿ ಗ್ರಾಮದ ಸಮೀಪ ಇರುವ ಕತ್ತಿಹಳ್ಳಿ ಗ್ರಾಮದ ವಾಸಿ ಕೃಷ್ಣಮೂರ್ತಿ ಮತ್ತು ರುಕ್ಮಿಣಿ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು ಅವರಲ್ಲಿ ದೊಡ್ಡ ಮಗಳು ಸುಜಾತ (27) ಬಿಎಸ್‌ಸಿ ನರ್ಸಿಂಗ್ ಮುಗಿಸಿಕೊಂಡು ಕೋಲಾರ ತಾಲ್ಲೂಕಿನ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿರುವ ಬೆಲ್ಲೈಸ್ ಇಂಡಸ್ಟ್ರೀಸ್‌ನ ಆರೋಗ್ಯ ಕೇಂದ್ರದಲ್ಲಿ ಸ್ಟಾಫ್ ಆಗಿ ಕೆಲಸ ಮಾಡುತ್ತಿರುತ್ತಾಳೆ. ಸುಜಾತ ದಿನವು ಬೆಳಿಗ್ಗೆ ಮನೆಯಿಂದ ದಾಸರ ಹೊಸಹಳ್ಳಿ ಗೇಟ್‌ಗೆ ಬಂದು ಅಲ್ಲಿಂದ ಬಸ್ಸಿನಲ್ಲಿ ಕೋಲಾರಕ್ಕೆ ಬಂದು ಕ್ಯಾಬ್‌ನಲ್ಲಿ ಕಂಪನಿಗೆ ಹೋಗಿ ಕೆಲಸ ಮುಗಿಸಿಕೊಂಡು ಸಂಜೆ ಮನೆಗೆ ಬರುತ್ತಿದ್ದಳು. ಎಂದಿನಂತೆ ಜನವರಿ 12ರಂದು ಬೆಳಿಗ್ಗೆ ತಂದೆ ಕೃಷ್ಣಮೂರ್ತಿರವರು ಮಗಳು ಸುಜಾತಳನ್ನು ಮನೆಯಿಂದ ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಬಂದು, ದಾಸ ಹೊಸಹಳ್ಳಿಯಲ್ಲಿ ಬಸ್ ಹತ್ತಿಸಿ ಕೋಲಾರಕ್ಕೆ ಕಳುಹಿಸಿ ಕೊಟ್ಟರು. ಬೆಳಿಗ್ಗೆ 10 ಗಂಟೆಗೆ ಸುಜಾಳ ತಂದೆ ಕೃಷ್ಣಮೂರ್ತಿರವರು ಕೋಲಾರ ನಗರ ಪೊಲೀಸ್ ಠಾಣೆಗೆ ಹಾಜರಾಗಿ ಇಂದು ಬೆಳಿಗ್ಗೆ ನನ್ನ ಮಗಳು ಸುಜಾತಳನ್ನು ದಾಸರ ಹೊಸಹಳ್ಳಿ ಗೇಟ್ ಬಳಿ ಬಸ್ ಹತ್ತಿಸಿ ಮನೆಗೆ ಬಂದು ಕೆಲಸಕ್ಕೆ ಹೋಜಿಗಲು ಸಿದ್ದನಾಗುತ್ತಿದ್ದಾಗ ಬೆಳಿಗ್ಗೆ 8.30 ಗಂಟೆಗೆ ನನ್ನ ಮೊಬೈಲ್ ಫೋನ್‌ಗೆ ಕರೆಯೊಂದು ಬಂದಿದ್ದು, ನಾನು ಕೋಲಾರದಿಂದ ಮಾತನಾಡುತ್ತಿದ್ದೇನೆ. ಬೈಪಾಸ್ ರಸ್ತೆ ಪಕ್ಕದಲ್ಲಿ ಯುವತಿಯೊಬ್ಬಳು ಸತ್ತು ಬಿದ್ದಿದ್ದಾಳೆಂದು ಹೇಳಿದರು. ಆಗ ನನಗೆ ಗಾಬರಿಯಾಗಿಯಾಗಿ, ಆಕೆ ಎಂದು ಕೇಳಲಾಗಿ ನನಗೆ ಗೊತ್ತಿಲ್ಲ. ಅವರ ಬಳಿ ಇದ್ದ ಬ್ಯಾಗ್‌ನಲ್ಲಿ ಈ ನಂಬರ್ ಸಿಕ್ಕಿದ್ದು, ಅದರಿಂದ ನಿಮಗೆ ಫೋನ್ ಮಾಡುತ್ತಿದ್ದೇನೆ ಎಂದು ಹೇಳಿದರು. ತಕ್ಷಣ ನಾನು ನಮ್ಮ ಮನೆ ಪಕ್ಕದಲ್ಲಿ ವಾಸವಿರುವ ಯುವಕನೊಬ್ಬನನ್ನು ಕರೆದುಕೊಂಡು ದ್ವಿಚಕ್ರ ವಾಹನದಲ್ಲಿ ಕೋಲಾರಕ್ಕೆ ಬಂದು ನೋಡಲಾಗಿ ರಾಷ್ಟ್ರೀಯ ಹೆದ್ದಾರಿ 75ರ ರಸ್ತೆ ಬ್ರಿಡ್ಜ್ ಪಕ್ಕದಲ್ಲಿ ಜನರು ಸೇರಿಕೊಂಡು ಗುಸು, ಗುಸು ಎಂದು ಮಾತನಾಡಿಕೊಳ್ಳುತ್ತಿದ್ದರು. ಆಗ ನಾನು ಕೆಲವರನ್ನು ವಿಚಾರಿಸಲಾಗಿ ಅವರಲ್ಲಿ ಒಬ್ಬರು ರಸ್ತೆ ದಾಟುವಾಗ ಅಪರಿಚಿತ ವಾಹನವೊಂದು ಡಿಕ್ಕಿ ಹಿಡಿದಿದ್ದರಿಂದ ಯುವತಿ ಸ್ಥಳದಲ್ಲಿಯೇ ಮೃತಪಟ್ಟಿರುವುದಾಗಿ ಹೇಳಿದರು. ಇನ್ನೊಬ್ಬರನ್ನು ಕೇಳಲಾಗಿ ಯುವತಿಯೊಬ್ಬಳು ಬಸ್ಸಿನಿಂದ ಇಳಿದು ಇನ್ನೊಂದು ಬಸ್ಸಿನಲ್ಲಿ ಬೇರೆ ಊರಿಗೆ ಹೋಗಬೇಕಾಗಿದ್ದು ಯಾರೋ ಅಪರಿಚಿತ ವ್ಯಕ್ತಿಯೊಬ್ಬನಿಗೆ ಪ್ರೀತಿ, ಪ್ರೇಮ ಪ್ರಣಯದ ವಿಚಾರದಲ್ಲಿ ಮೋಸ ಮಾಡಿದ್ದಾಳೆಂದು ಕೋಪದಿಂದ ಯುವತಿಯ ಕತ್ತು ಕೊಯ್ದು ಪರಾರಿಯಾಗುತ್ತಿದ್ದವನನ್ನು ಸಾರ್ವಜನಿಕರು ಹಿಡಿದು ಧರ್ಮದೇಟು ಕೊಟ್ಟು ಪೊಲೀಸರಿಗೆ ಒಪ್ಪಿಸಿರುವುದಾಗಿ ಹೇಳಿದರು. ನಾನು ಪೊಲೀಸ್ ಠಾಣೆಗೆ ಬಂದಿರುವುದಾಗಿ ಹೇಳಿದರು. ಆಗ ನಗರ ಠಾಣೆ ಪೊಲೀಸರು ಮೃತ ಯುವತಿಯ ಫೋಟೋವನ್ನು ಮತ್ತು ಕೊಲೆ ಮಾಡಿದ ವ್ಯಕ್ತಿಯನ್ನು ತೋರಿಸಲಾಗಿ ಇವಳು ನನ್ನ ಮಗಳು ಸುಜಾತ, ಇವನು ಫೈನಾನ್ಸ್ ಕಂಪನಿಯೊಂದರಲ್ಲಿ ಸಾಲ ವಸೂಲಿಗಾರನಾಗಿ ಕೆಲಸ ಮಾಡುತ್ತಿದ್ದಾನೆ. ಇವನ ಊರು ಬಂಗಾರಪೇಟೆ ತಾಲ್ಲೂಕಿನ ಯಳವಳ್ಳಿ ಗ್ರಾಮದ ಚಿರಂಜೀವಿ 927) ಈತ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆಯಲ್ಲಿರುವ ಖಾಸಗಿ ಫೈನಾನ್ಸ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದನು. ಫೈನಾನ್ಸ್ ಕಂಪನಿಯವರು ಕೋಲಾರ ಜಿಲ್ಲೆಯ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸದಸ್ಯರ ಗುಂಪುಗಳಿಗೆ ಸಾಲ ನೀಡಿದ್ದು, ಹಣ ವಸೂಲಿಗಾರನಾದ ಚಿರಂಜೀವಿ ಬಂಗಾರಪೇಟೆ ತಾಲ್ಲೂಕಿನ ದಾಸರ ಹೊಸಹಳ್ಳಿ ಪಂಚಾಯಿತಿಗೆ ಸೇರಿರುವ ಗ್ರಾಮಗಳಲ್ಲಿನ ಸ್ತ್ರೀಶಕ್ತಿ ಸಂಘಗಳ ಸದಸ್ಯರು ತೆಗೆದುಕೊಂಡಿರುವ ಸಾಲದ ಕಂತಿನ ಹಣವನ್ನು ವಸೂಲಿ ಮಾಡಲು ಸುಮಾರು ಒಂದು ವರ್ಷದಿಂದ ಬರುತ್ತಿದ್ದನು.


ಎಸ್ಪಿ ಕನ್ನಿಕಾ ಸುಕ್ರಿವಾಲಾ


ಎಎಸ್ಪಿ ರವಿಶಂಕರ್


ಸಿಪಿಐ ಸದಾನಂದ

### ಸುಜಾತಳನ್ನು ಲವ್ ಮಾಡುತ್ತಿದ್ದ ಚಿರಂಜೀವಿ

ಹಣ ವಸೂಲಿಗೆ ಬರುತ್ತಿದ್ದ ಚಿರಂಜೀವಿಯು ನಮ್ಮ ಮನೆ ಬಳಿ ಚೇರ್ ಹಾಕಿಕೊಂಡು ಕುಳಿತಿರುತ್ತಿದ್ದನು. ಅವನ ಜೊತೆಯಲ್ಲಿ ಬಂದಿರುತ್ತಿದ್ದ ಸಹಾಯಕರು ಕೆಲಸ ಮುಗಿಸಿಕೊಂಡು ಹೊರಟು ಬಿಡುತ್ತಿದ್ದರು. ಆದರೆ ಇವನು ಮಾತ್ರ ನಮ್ಮ ಮನೆ ಮುಂದೆಯೇ ಸಂಜೆವರೆಗೂ ಕುಳಿತುಕೊಂಡು ಇರುತ್ತಿದ್ದನು. ನಾನು ಈ ಬಗ್ಗೆ ಸ್ತ್ರೀ ಶಕ್ತಿ ಸಂಘದವರನ್ನು ಕೇಳಲಾಗಿ ಫೈನಾನ್ಸ್ ಕಂಪನಿಯಲ್ಲಿ ಸಾಲ ತೆಗೆದುಕೊಂಡಿರುವ ಸದಸ್ಯರು, ತಿಂಗಳು ಅಥವಾ ವಾರದ ಕಂತಿನ ಹಣವನ್ನು ಸರಿಯಾದ ಸಮಯದಲ್ಲಿ ಕೊಡಬೇಕು. ಒಬ್ಬರು ಹಣ ಕೊಡದಿದ್ದರೂ ಅವರು ಹಣ ಕೊಡುವವರೆಗೂ ಕಾದಿದ್ದು ಹಣ ವಸೂಲಿ ಮಾಡಿಕೊಂಡೇ ಹೋಗಬೇಕು. ಅದಕ್ಕೆ ಅವರು ಸಂಜೆವರೆಗೂ ಇದ್ದು ಹೋಗುತ್ತಾರೆಂದು ಹೇಳಿದರು. ಆದರೆ ನನ್ನ ಮಗಳು ಸುಜಾತಳನ್ನು ಚಿರಂಜೀವಿ ಲವ್ ಮಾಡುತ್ತಿರುವ ಮ್ಯಾಟರ್ ಮಾತ್ರ ನನಗೆ ಗೊತ್ತಿರಲಿಲ್ಲ. ಕಳೆದ ಇಪ್ಪತ್ತು ದಿನಗಳ ಹಿಂದೆ ಮೈಯೆಲ್ಲ ಗಾಯ ಮಾಡಿಕೊಂಡು ಮನೆಗೆ ಬಂದಳು. ಆಗ ನಾನು ಮಗಳು ಸುಜಾತಳನ್ನು ವಿಚಾರಿಸಲಾಗಿ ಅಪ್ಪ ನಾನು ಫೈನಾನ್ಸ್ ಕಂಪನಿಯಲ್ಲಿ ಸಾಲ ತೆಗೆದುಕೊಂಡು ಮನೆಗೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡಿದ್ದೆನು. ಅದರ ಕಂತಿನ ಹಣವನ್ನು ವಾರ, ವಾರ ಪಾವತಿಸಿಕೊಂಡು ಬರುತ್ತಿದ್ದೆನು. ಕಂತಿನ ಹಣ ವಸೂಲಿ ಮಾಡಲು ಬರುತ್ತಿದ್ದ ಯಳವಳ್ಳಿಯ ಚಿರಂಜೀವಿ ಎನ್ನುವವರು ಕಳೆದ ಒಂದು ವರ್ಷದಿಂದ ನನ್ನನ್ನು ಲವ್ ಮಾಡುತ್ತಿದ್ದರು. ನಾನೂ ಸಹ ಚಿರಂಜೀವಿಯನ್ನು ಇಷ್ಟ ಪಡುತ್ತಿದೆದ್ದು. ಹಣಕಾಸು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ನಾನು ಮದುವೆ ಮಾಡಿಕೊಂಡರೆ


ಸ್ಥಳದ ಮಹಜರ್ ನಡೆಸುತ್ತಿರುವ ಪೊಲೀಸರು


ಚಿರಂಜೀವಿಗೆ ಧರ್ಮದೇಟು ನೀಡುತ್ತಿರುವ ಸಾರ್ವಜನಿಕರು

☞ 14

# ಪರಮ ಪಾತಕಿ ಸಫ್ವಾನ್ ಕೊನೆಗೂ ಪೊಲೀಸ್ ಬಲೆಗೆ!

ಮಂಗಳೂರು ನಗರದ ಸಿಸಿಬಿ ಪೊಲೀಸರು ಭರ್ಜರಿ ಬೇಟೆ ಆಡಿದ್ದಾರೆ. ಕಳೆದ 9 ವರ್ಷಗಳಿಂದ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ ಪರಮ ಪಾತಕಿ ಹಳೆಯಂಗಡಿ ಕದಿಕೆ ಎಂಬಲ್ಲಿನ ಸಫ್ವಾನ್ ಎಂಬಾತನನ್ನು ಆಂಧ್ರ ಪ್ರದೇಶದಲ್ಲಿ ಪತ್ತೆ ಹಚ್ಚಿ ಕರೆದುಕೊಂಡು ಬಂದು ಮಂಗಳೂರಿನ ಜೈಲಿಗೆ ಅಟ್ಟಿದ್ದಾರೆ. ಬರೋಬ್ಬರಿ 31 ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿ ಆಗಿದ್ದ ಸಫ್ವಾನ್‌ಗೆ ಈ ಹಿಂದೆ ಕೊಲೆ ಪ್ರಕರಣವೊಂದಕ್ಕೆ ಸಂಬಂಧಿಸಿ ಜೀವಾವಧಿ ಶಿಕ್ಷೆಯಾಗಿತ್ತು. ಮತ್ತೊಂದು ಪ್ರಕರಣಕ್ಕೆ 5 ವರ್ಷಗಳ ಶಿಕ್ಷೆಯಾಗಿತ್ತು. ಹೈ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ ಜಾಮೀನಿನ ಮೇರೆಗೆ ಬಿಡುಗಡೆಗೊಂಡು 2017ರಲ್ಲಿ ಸುರತ್ಕಲ್ ಸಮೀಪದ ಕೃಷ್ಣಾಪುರದ ಲೆಫ್ಟಿ ಇಮ್ರಾನ್ ಎಂಬ ಯುವಕನನ್ನು ಕಾರ್ಕಳಕ್ಕೆ ಅಪಹರಿಸಿ ಕೊಂಡೊಯ್ದು ಆತನನ್ನು ಕೊಲೆಗೈದು ಆಗುಂಬೆ ಘಾಟಿಯ 9ನೇ ತಿರುವಿನಲ್ಲಿ ಬಿಸಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರಿಂದ ತಪ್ಪಿಸಿಕೊಂಡು ಭೂಗತನಾಗಿದ್ದ. ಈತನ ಮೇಲೆ ಹತ್ತು ಹಲವು ವಾರಂಟ್‌ಗಳು ಇದ್ದರೂ ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ. ಮಂಗಳೂರು ನಗರ ಪೊಲೀಸ್ ಆಯುಕ್ತರಾದ ಸುಧೀರ್ ಕುಮಾರ್ ರೆಡ್ಡಿಯವರು ಕಳೆದ 6 ತಿಂಗಳಿನಿಂದ ಈತನ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ ಆತ ಆಂಧ್ರಪ್ರದೇಶದಲ್ಲಿ ಬೇರೆಯೇ ಹೆಸರನ್ನು ಇಟ್ಟುಕೊಂಡು ಅದೇ ಹೆಸರಿನಲ್ಲಿ ಪಾಸ್‌ಪೋರ್ಟ್, ಆಧಾರ್‌ಕಾರ್ಡ್ ಮಾಡಿಸಿ ಜೀವನ ನಡೆಸುತ್ತಿದ್ದಾನೆ ಎಂಬ ಮಾಹಿತಿಯನ್ನು ಪಡೆದು ಸಿಸಿಬಿ ಪೊಲೀಸರನ್ನು ಆಂಧ್ರ ಪ್ರದೇಶಕ್ಕೆ ಕಳುಹಿಸಿ ಆತನನ್ನು ಹಿಡಿದು ತರುವಲ್ಲಿ ಯಶಸ್ವಿಯಾಗಿದ್ದಾನೆ. ಇತ್ತೀಚಿನ ದಿನಗಳಲ್ಲಿ ಮಂಗಳೂರು ಪೊಲೀಸರು ನಡೆಸಿದ ಬಹು ದೊಡ್ಡ ಬೇಟೆ ಇದಾಗಿದೆ.


ಕಮೀಷನರ್ ಸುಧೀರ್‌ಕುಮಾರ್ ರೆಡ್ಡಿ

**ಯಾರೀತ?**


ಮಂಗಳೂರು ಹೊರವಲಯದ ಉಳ್ಳಾಲದಲ್ಲಿ ನಟೋರಿಯಸ್ ಗ್ಯಾಂಗ್ ಒಂದಿತ್ತು. ಅದರ ಹೆಸರು ಟಾರ್ಗೆಟ್ ಗ್ಯಾಂಗ್. ಈ ತಂಡದಲ್ಲಿ ಸುಮಾರು 20 ಕ್ಕೂ ಹೆಚ್ಚು ಮಂದಿ ಯುವಕರಿದ್ದರು. ಮುಸ್ಲಿಂ ಸಮುದಾಯದ ಯುವಕರೇ ಸೇರಿಕೊಂಡು ಈ ತಂಡ ಕಟ್ಟಿಕೊಂಡಿದ್ದರು. ಉಳ್ಳಾಲ ಪೊಲೀಸ್ ಠಾಣೆಯ ಅಣತಿ ದೂರದಲ್ಲಿ ಅಂಗಡಿಯೊಂದನ್ನು ಬಾಡಿಗೆಗೆ ಪಡೆದು ಅದರಲ್ಲಿ ಠಳಾಯಿಸುತ್ತಿದ್ದರು. ಇವರ ಮುಖ್ಯ ಗುರಿ ಎಂದರೆ ಉಳ್ಳಾಲ ಕಡಲ ಕಿನಾರೆಗೆ ಬರುವಂತಹ ಯುವಕ ಯುವತಿಯರನ್ನು ಅಡ್ಡಗಟ್ಟಿ ಬೆದರಿಸಿ ಅವರಲ್ಲಿರುವ ನಗದು ಮತ್ತು

**ದಕ್ಷಿಣ ಕನ್ನಡ**


✍ ಮೋಹನ್ ಬೋಳಂಗಡಿ

ಚಿನ್ನಾಭರಣಗಳನ್ನು ದೋಚುವುದು. ಹತ್ತು ಹಲವು ಮಂದಿಯಿಂದ ಈ ತಂಡ ದರೋಡೆ ಮಾಡಿದ್ದರೂ ಯಾರೂ ದೂರು ನೀಡುತ್ತಿರಲಿಲ್ಲ. ಸುಮಾರು 20 ವರ್ಷಗಳ ಹಿಂದೆ ಮದುವೆ ನಿಶ್ಚಿತಾರ್ಥವಾಗಿದ್ದ ಜೋಡಿಯೊಂದನ್ನು ತಡೆದು ಈ ತಂಡ ದರೋಡೆ ಮಾಡಿತ್ತು. ಅವರು ಉಳ್ಳಾಲ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ದರೋಡೆ ಪ್ರಕರಣ ದಾಖಲಿಸಿಕೊಂಡು ಇಡೀ ತಂಡವನ್ನು ಬಂಧಿಸಿ ಜೈಲಿಗೆ ಅಟ್ಟಿದ್ದರು. ಆ ಸಂದರ್ಭದಲ್ಲಿ ಈ ತಂಡದ ನಟೋರಿಟಿ ಬೆಳಕಿಗೆ ಬಂದಿತ್ತು. ತದನಂತರದ ಬೆಳವಣಿಗೆಗಳಲ್ಲಿ ಈ ತಂಡದ ಸದಸ್ಯರ ಮಧ್ಯೆಯೇ ವೈಷಮ್ಯ ಮೂಡಿ ಎರಡು ಹತ್ಯೆಗಳು ನಡೆದಿದ್ದವು. ಈ ತಂಡದ ಸದಸ್ಯನಾಗಿದ್ದವನೇ ನೌಫಾಲ್. ಈತ ಹಳೆಯಂಗಡಿಯ ಕದಿಕೆ ಎಂಬ ಪ್ರದೇಶದವನು. ಈ ತಂಡ ನಡೆಸಿದಂತಹ ಹಲವಾರು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾದವನು. ಒಟ್ಟು 31 ಪ್ರಕರಣಗಳು ಈತನ ಮೇಲೆ ದಾಖಲಾಗಿದ್ದವು. ಅದರಲ್ಲಿ ಎರಡು ಕೊಲೆ ಪ್ರಕರಣಗಳು ಮತ್ತು ದೇರಳಕಟ್ಟೆಯಲ್ಲಿ ನಡೆದಿದ್ದ ಗ್ಯಾಂಗ್ ರೇಪ್ ಪ್ರಕರಣಗಳು ಪ್ರಮುಖವಾದದ್ದು. ಉಳಿದಂತೆ ದರೋಡೆ, ಕೊಲೆಯತ್ನ, ಜೀವಬೆದರಿಕೆ ಮೊದಲಾದ ಪ್ರಕರಣಗಳು ಸಫ್ವಾನ್ ಒಳಗೊಂಡಿದ್ದ. ಈ ಪ್ರಕರಣಗಳ ಪೈಕಿ ಎರಡು ಕೊಲೆ ಪ್ರಕರಣಗಳನ್ನು ಶಿಕ್ಷೆಯಾಗಿದ್ದು, ಹೈಕೋರ್ಟ್ ನಿಂದ ಶಿಕ್ಷೆಗೆ ತಡೆತಂದು ಜಾಮೀನಿನ ಮೇರೆಗೆ ಬಿಡುಗಡೆಗೊಂಡಿದ್ದ. 2017ರಲ್ಲಿ ಸುರತ್ಕಲ್‌ನ ಲೆಫ್ಟಿ ಸಫ್ವಾನ್‌ನನ್ನು ಕ್ಷುಲ್ಲಕ ಕಾರಣಕ್ಕೆ ಕಾರಿನಲ್ಲಿ ಅಪಹರಿಸಿ ಕಾರ್ಕಳಕ್ಕೆ ಕರೆದೊಯ್ದಿದ್ದ. ಅಲ್ಲಿ ಆತನ ಮೇಲೆ ಹಲ್ಲೆ ನಡೆಸಿದ್ದರಿಂದ ಆತ ಜೀವ ಬಿಟ್ಟಿದ್ದ. ಮೃತದೇಹವನ್ನು ಆಗುಂಬೆ ಘಾಟಿಯ 9ನೇ ತಿರುವಿನಲ್ಲಿ ಕಂದಕಕ್ಕೆ ಎಸೆದು ಪರಾರಿಯಾಗಿದ್ದ. ಈ ಪ್ರಕರಣವನ್ನು ದಾಖಲಿಸಿಕೊಂಡಿದ್ದ ಸುರತ್ಕಲ್ ಪೊಲೀಸರು ಇತರ ಆರೋಪಿಗಳನ್ನು ಬಂಧಿಸಿದ್ದರೂ ಸಫ್ವಾನ್ ಸೆರೆ ಸಿಕ್ಕಿರಲಿಲ್ಲ. ಇದೀಗ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ.

ಸುರತ್ಕಲ್‌ನಿಂದ ಪರಾರಿಯಾಗಿದ್ದ ಸಫ್ವಾನ್ ನೇರವಾಗಿ ಆಂಧ್ರಪ್ರದೇಶಕ್ಕೆ ಹೋಗಿದ್ದ. ಅಲ್ಲಿನ ಹಳ್ಳಿಯೊಂದರಲ್ಲಿ ಬೇರೆಯೇ ಹೆಸರು ಇಟ್ಟುಕೊಂಡು ಕೂಲಿ ಕೆಲಸ ಮಾಡಿ ಜೀವನ ಮಾಡುತ್ತಿದ್ದ. ತದನಂತರ ಅದೇ ವಿಳಾಸದಲ್ಲಿ ಆಧಾರ್‌ಕಾರ್ಡ್ ಮಾಡಿಸಿಕೊಂಡು ಪಾಸ್‌ಪೋರ್ಟ್ ಪಡೆದುಕೊಂಡಿದ್ದ. ಆ ಪಾಸ್‌ಪೋರ್ಟ್‌ನ ಆಧಾರದಲ್ಲಿ ಮಧ್ಯಪ್ರಾಚ್ಯ ದೇಶಕ್ಕೆ ಹೋಗಿ ಕೆಲಸಕ್ಕೆ ಸೇರಿದ್ದ. ತನ್ನ ಸಂಪೂರ್ಣ ಇರವನ್ನೇ ಬದಲಾಯಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದ ಸಫ್ವಾನ್‌ನನ್ನು ಪತ್ತೆ ಹಚ್ಚಲು ಸುರತ್ಕಲ್, ಮುಲ್ಕಿ ಸಹಿತ ಇತರ ಪೊಲೀಸ್ ಠಾಣೆಗಳ ಸಿಬ್ಬಂದಿಗಳು ಸತತ ಪ್ರಯತ್ನ ಪಟ್ಟರೂ ಸಾಧ್ಯವಾಗಿರಲಿಲ್ಲ. ಹಳೆಯಂಗಡಿ ಕದಿಕೆಯ ಮನೆಗೂ ಬರುತ್ತಿರಲಿಲ್ಲ, ಮನೆಯವರೊಂದಿಗೆ ಮತ್ತು ತನ್ನ ಜೊತೆಗಾರರೊಂದಿಗೆ ಸಂಪರ್ಕವನ್ನೂ ಬೆಳೆಸುತ್ತಿರಲಿಲ್ಲ. ಇಂತಹ ನಟೋರಿಯಸ್ ಹಂತಕನನ್ನು ಪತ್ತೆ ಹಚ್ಚಲು ಕಂಕಣ ತೊಟ್ಟವರು ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ.


ಪೊಲೀಸರ ವಶದಲ್ಲಿ ಆರೋಪಿ ಸಫ್ವಾನ್

ಹಂತಕ ಸಫ್ವಾನ್‌ನ ಎಲ್ಲಾ ವಿವರಗಳನ್ನು ಕಲೆ ಹಾಕಿದ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿಯವರು ಆತ ಹೊಂದಿದ್ದ ಪಾಸ್‌ಪೋರ್ಟ್ ವಿವರಗಳನ್ನು ಅಂತರ್ಜಾಲದ ಮೂಲಕ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಆ ಪಾಸ್‌ಪೋರ್ಟ್‌ನ ಮೂಲಕ ಸಫ್ವಾನ್ ಒಂದೆರಡು ಬಾರಿ ವಿದೇಶಕ್ಕೆ ಉದ್ಯೋಗಕ್ಕಾಗಿ ಹೋಗಿ ಬಂದಿರುವುದು ಖಚಿತವಾಗಿತ್ತು. ಆದರೆ ಸಫ್ವಾನ್ ಬೇರೆಯೇ ಹೆಸರಿನಲ್ಲಿ ಪಾಸ್‌ಪೋರ್ಟ್ ಮತ್ತು ಆಧಾರ್ ಕಾರ್ಡ್ ಹೊಂದಿದ್ದರಿಂದ ಆತನನ್ನು ಕೇವಲ ಭಾವಚಿತ್ರದ ಆಧಾರದಲ್ಲಿ ಖಚಿತಪಡಿಸಿಕೊಳ್ಳಬೇಕಿತ್ತು. ತದನಂತರ ಈ ಖಚಿತತೆ ಸಿಕ್ಕಿದ ಕೂಡಲೇ ಆತನ ಮೊಬೈಲ್ ನಂಬರ್ ಸಿಕ್ಕಿಬಿಟ್ಟಿತ್ತು. ಆ ಮೊಬೈಲ್‌ನ ಟವರ್ ಲೊಕೇಶನ್ ಚೆಕ್ ಮಾಡಿದಾಗ ಅದು ಆಂಧ್ರಪ್ರದೇಶದ ಹಳ್ಳಿಯೊಂದನ್ನು ತೋರಿಸುತ್ತಿತ್ತು. ಇದರ ಆಧಾರದಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ರಫೀಕ್ ನೇತೃತ್ವದ ಪೊಲೀಸ್ ತಂಡ ಆಂಧ್ರಪ್ರದೇಶಕ್ಕೆ ಹೋಗಿ ಸಫ್ವಾನ್‌ನನ್ನು ಎತ್ತಾಕಿಕೊಂಡು ಬಂದಿದ್ದಾರೆ. ಆತ ಅಲ್ಲಿ ಮದುವೆಯಾಗಿ ಸಂಸಾರ ನಡೆಸುತ್ತಿದ್ದ. ಆತನ ಮೇಲಿದ್ದ ಹತ್ತು ಹಲವು ಪ್ರಕರಣಗಳು ಇದೀಗ ಮತ್ತೇ ವಿಚಾರಣೆಗೆ ರೀ ಓಪನ್ ಆಗಲಿದೆ. ಪೊಲೀಸರ ಸಂಘಟಿತ ಪ್ರಯತ್ನ ಪರಮ ಪಾತಕಿಯೊಬ್ಬನನ್ನು ಜೈಲಿಗೆ ಕಳುಹಿಸಿದೆ.


ಪಾತಕಿ ಸಫ್ವಾನ್

# ಪತ್ನಿಯನ್ನು ಉಸಿರುಗಟ್ಟಿಸಿ ಕೊಂದ ನಿವೃತ್ತ ಇಸ್ರೋ ನೌಕರ!

ಸಿಲಿಕಾನ್ ಸಿಟಿ ಎಂದು ಹೆಸರಾದ ಬೆಂಗಳೂರಿನಲ್ಲಿ ಮತ್ತೊಂದು ಮನಕಲಕುವ ಹತ್ಯಾ ಪ್ರಕರಣ ಬೆಳಕಿಗೆ ಬಂದಿದೆ. ನಗರದ ಅವಲಹಳ್ಳಿ ಪ್ರದೇಶದಲ್ಲಿರುವ Virtuoso ಅಪಾರ್ಟ್ ಮೆಂಟ್‌ನಲ್ಲಿ ನಡೆದ ಈ ಘಟನೆ ನಾಗರಿಕರನ್ನು ಬೆಚ್ಚಿ ಬೀಳಿಸಿದೆ. ನಿವೃತ್ತ ಇಸ್ರೋ ನೌಕರನೊಬ್ಬ ತನ್ನ ಪತ್ನಿಯನ್ನು ಉಸಿರುಗಟ್ಟಿಸಿ ಹತ್ಯೆ ಮಾಡಿರುವುದು ಪೊಲೀಸ್ ತನಿಖೆಯಿಂದ ದೃಢಪಟ್ಟಿದೆ. ದೀರ್ಘಕಾಲದ ದಾಂಪತ್ಯ ಜೀವನದ ಅಂತ್ಯ ಈ ರೀತಿ ಭೀಕರವಾಗಿ ಸಂಭವಿಸಿರುವುದು ಸಾರ್ವಜನಿಕರಲ್ಲಿ ಆಘಾತ ಮೂಡಿಸಿದೆ.



ಕೊಲೆಯಾದ ಸಂಧ್ಯಾ

**ಬೆಂಗಳೂರು**

ಘಟನೆಯ ವಿವರಗಳಿಗೆ ಹೋಗುವುದಾದರೆ, ಆರೋಪಿಯಾಗಿರುವ ನಾಗೇಶ್ವರರಾವ್ ಎಂಬವರು ತಮ್ಮ ಪತ್ನಿ ಸಂಧ್ಯಾ ಅವರೊಂದಿಗೆ ಅಪಾರ್ಟ್‌ಮೆಂಟ್‌ನ ಫ್ಲಾಟ್‌ನಲ್ಲಿ ವಾಸಿಸುತ್ತಿದ್ದರು. ನಿವೃತ್ತಿಯ ನಂತರ ಶಾಂತ ಜೀವನ ನಡೆಸುತ್ತಿದ್ದ ಈ ದಂಪತಿ ಬಗ್ಗೆ ಯಾವುದೇ ಗಂಭೀರ ಗೃಹ ಕಲಹದ ಮಾಹಿತಿ ಇಲ್ಲದೆ ಇರುವುದು ಪ್ರಕರಣವನ್ನು ಇನ್ನಷ್ಟು ಸಂಕೀರ್ಣವಾಗಿಸಿದೆ. ಬೆಳಿಗ್ಗೆ ಸುಮಾರು 11 ಗಂಟೆ ಸುಮಾರಿಗೆ ದಂಪತಿ ಮನೆಯೊಳಗೇ ಇದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ ಎನ್ನಲಾಗಿದೆ. ಪತ್ನಿಯೊಂದಿಗೆ ಮಾತಿನ ಚಕಮಕಿ ನಡೆದ ಬಳಿಕ, ನಾಗಲೇಶ್ವರರಾವ್ ಆಕೆಯನ್ನು ಉಸಿರುಗಟ್ಟಿಸಿ ಹತ್ಯೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ನಂತರ ಸ್ಥಳೀಯ ನಿವಾಸಿಗಳಿಗೆ ಅನುಮಾನ ಉಂಟಾಗಿ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು, ಅವಲಹಳ್ಳಿ ಪೊಲೀಸ್ ಠಾಣೆಯ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ಧಾವಿಸಿದರು. ಮನೆಯೊಳಗೆ ಪ್ರವೇಶಿಸಿದಾಗ ಸಂಧ್ಯಾ ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದು,

☞10


ಆರೋಪಿ ನಾಗೇಶ್ವರರಾವ್

# ಸಾಕು ಮಗ ಮತ್ತು ಸಹೋದರಿಯಿಂದಲೇ ಭೀಕರವಾಗಿ ಕೊಲೆಯಾದ ಜಯಲಕ್ಷ್ಮಿ!



ಆರೋಪಿ ಚಂದ್ರಶೇಖರ್



ಕೊಲೆಯಾದ ಜಯಲಕ್ಷ್ಮೀ

**ಗಂಡನನ್ನು ಕಳೆದುಕೊಂಡು, ಮಕ್ಕಳಿಲ್ಲದೆ ಒಂಟಿಯಾಗಿ ಬದುಕುತ್ತಿದ್ದ ಸರ್ಕಾರಿ ನೌಕರೆಯೊಬ್ಬಳನ್ನು, ಆಕೆಯ ಜೀವನದ ಭಾಗವಾಗಿದ್ದವರೇ ಅಮಾನುಷವಾಗಿ ಕೊಂದಿರುವುದು ಚಿಕ್ಕನಾಯಕನಹಳ್ಳಿಯಲ್ಲಿ ಬಹಿರಂಗವಾಗಿದೆ. ಸಾಕು ಮಗ ಮತ್ತು ಸಹೋದರಿಯೇ ಸೇರಿ, ಅತಿ ಕ್ಷುಲ್ಲಕ ಕಾರಣವನ್ನೇ ನೆಪ ಮಾಡಿಕೊಂಡು ಮಹಿಳೆಯನ್ನು ಉಸಿರುಗಟ್ಟಿಸಿ ಹತ್ಯೆಗೈದಿದ್ದು, ನಂತರ ಹೃದಯಾಘಾತವೆಂದು ಸುಳ್ಳು ಕಥೆ ಕಟ್ಟಲು ಯತ್ನಿಸಿದ್ದಾರೆ. ಆದರೆ ಮೃತಳ ಆತ್ಮೀಯ ಗೆಳೆಯನ ಅನುಮಾನ ಹಾಗೂ ಪೊಲೀಸರ ಸೂಕ್ಷ್ಮ ತನಿಖೆಯಿಂದ ಪ್ರಕರಣಕ್ಕೆ ಸ್ಫೋಟಕ ತಿರುವು ಸಿಕ್ಕಿದ್ದು, ಈ ಹತ್ಯೆ ಹಿಂದೆ ಆಸ್ತಿ, ಹಣಕಾಸು ಲಾಭ ಮತ್ತು ಅನುಕಂಪದ ಆಧಾರದ ಸರ್ಕಾರಿ ಉದ್ಯೋಗದ ಲಾಲಸೆಯ ನೆರಳು ಇರುವ ಸಾಧ್ಯತೆಗಳು ಬೆಳಕಿಗೆ ಬಂದಿವೆ.**

## ಚಿಕ್ಕನಾಯಕನಹಳ್ಳಿಯಲ್ಲಿ ಬೆಚ್ಚಿಬೀಳಿಸುವ ಅಪರಾಧ

**ತುಮಕೂರು**

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಜೋಗಿಹಳ್ಳಿ ಗ್ರಾಮದಲ್ಲಿ ನಡೆದಿರುವ ಮಹಿಳೆಯೊಬ್ಬರ ಸಾವಿನ ಪ್ರಕರಣವು ಆರಂಭದಲ್ಲಿ ಸಹಜ ಮರಣವೆಂದು ತೋರಿದರೂ, ಪೊಲೀಸರ ತನಿಖೆಯಲ್ಲಿ ಇದು ಪೂರ್ವನಿಯೋಜಿತ ಹತ್ಯೆಯೆಂಬ ಭೀಕರ ಸತ್ಯ ಬಹಿರಂಗವಾಗಿದೆ. ಗಂಡನನ್ನು ಕಳೆದುಕೊಂಡು ಒಂಟಿಯಾಗಿ ಬದುಕುತ್ತಿದ್ದ ಮಹಿಳೆಯನ್ನು, ಆಕೆಯೇ ಸಾಕಿಕೊಂಡಿದ್ದ ಸಾಕು ಮಗ ಹಾಗೂ ಸಹೋದರಿಯೇ ಸೇರಿಕೊಂಡು ಉಸಿರುಗಟ್ಟಿಸಿ ಕೊಂದಿರುವುದು ಬೆಳಕಿಗೆ ಬಂದಿದ್ದು, ಈ ಪ್ರಕರಣವು ಸಾರ್ವಜನಿಕರಲ್ಲಿ ತೀವ್ರ ಆಘಾತ ಮೂಡಿಸಿದೆ. ಹೃದಯಾಘಾತದಿಂದ ಮೃತಪಟ್ಟಿದ್ದಾಳೆ ಎಂಬ ಸುಳ್ಳು ಕಥೆ ಕಟ್ಟಿಕೊಂಡು ಆರೋಪಿಗಳು ತಪ್ಪಿಸಿಕೊಳ್ಳಲು ಯತ್ನಿಸಿದ್ದರೂ, ಮೃತಳ ಆತ್ಮೀಯ ಗೆಳೆಯನ ಅನುಮಾನ ಮತ್ತು ಪೊಲೀಸರ ಸೂಕ್ಷ್ಮ ತನಿಖೆಯಿಂದ ಪ್ರಕರಣಕ್ಕೆ ಸ್ಫೋಟಕ ತಿರುವು ಸಿಕ್ಕಿದೆ.



ಎಸ್ಪಿ ಕೆ.ವಿ. ಅಶೋಕ್

ಮೃತ ಮಹಿಳೆಯನ್ನು ಜಯಲಕ್ಷ್ಮೀ ಎಂದು ಗುರುತಿಸಲಾಗಿದ್ದು, ಇವರು ತುರುವೇಕೆರೆ ತಾಲೂಕಿನ ಬಿಇಒ ಕಚೇರಿಯಲ್ಲಿ ಎಫ್‌ಡಿಎ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಗಂಡನ ಸಾವಿನ ಬಳಿಕ ಮಕ್ಕಳಿಲ್ಲದೆ ಒಂಟಿಯಾಗಿ ಜೀವನ ನಡೆಸುತ್ತಿದ್ದ ಜಯಲಕ್ಷ್ಮೀ, ಅನುಕಂಪದ ಆಧಾರದ ಮೇಲೆ ದೊರೆತ ಸರ್ಕಾರಿ ಉದ್ಯೋಗದಿಂದ ತನ್ನ ಜೀವನ ಸಾಗಿಸುತ್ತಿದ್ದರು. ಸರಳ, ಶಾಂತ ಸ್ವಭಾವದವರಾಗಿದ್ದ ಇವರು, ಹಲವು ವರ್ಷಗಳಿಂದ ಗೌರವಯುತ ಬದುಕು ನಡೆಸುತ್ತಿದ್ದರು ಎನ್ನಲಾಗಿದೆ. ಈ ನಡುವೆ ಶ್ರೀನಿವಾಸ್ ಎಂಬ ವ್ಯಕ್ತಿಯೊಂದಿಗೆ ಪರಿಚಯವಾಗಿ, ಆತನೊಂದಿಗೆ ಆತ್ಮೀಯತೆ ಬೆಳೆದಿತ್ತು. ಇಬ್ಬರೂ ಕಳೆದ ಸುಮಾರು 20 ವರ್ಷಗಳಿಂದ ಒಟ್ಟಿಗೆ ಜೀವನ ನಡೆಸುತ್ತಿದ್ದರು ಎಂಬ ಮಾಹಿತಿ ಪೊಲೀಸರ ತನಿಖೆಯಲ್ಲಿ ಗೊತ್ತಾಗಿದೆ.

ಮಕ್ಕಳಿಲ್ಲದ ಕಾರಣ, ಜಯಲಕ್ಷ್ಮೀ ತಮ್ಮ ಸಹೋದರಿ ಅನುಸೂಯಾ ಅವರ ಮಗ ಚಂದ್ರಶೇಖರ್‌ನನ್ನು ದತ್ತು ಪಡೆದುಕೊಂಡು ಸಾಕಿದ್ದರು. ಸಾಕು ಮಗನ ಭವಿಷ್ಯಕ್ಕಾಗಿ ಎಲ್ಲ ರೀತಿಯ ಸೌಲಭ್ಯ ಒದಗಿಸಿದ್ದ ಜಯಲಕ್ಷ್ಮೀ, ಆತನನ್ನು ಸ್ವಂತ ಮಗನಂತೆ ನೋಡಿಕೊಂಡಿದ್ದರು. ಆರಂಭದಲ್ಲಿ ಸಂಬಂಧಗಳು ಸರಾಗವಾಗಿದ್ದರೂ, ಕಾಲಕ್ರಮೇಣ ಆರ್ಥಿಕ ವಿಚಾರಗಳು ಮತ್ತು ಆಸ್ತಿಗೆ ಸಂಬಂಧಿಸಿದ ಭಿನ್ನಾಭಿಪ್ರಾಯಗಳು ತಲೆದೋರಲು ಆರಂಭಿಸಿದ್ದವೆಂದು ತನಿಖೆಯಿಂದ ತಿಳಿದು ಬಂದಿದೆ. ತುಮಕೂರಿನಲ್ಲಿ ವಾಸವಾಗಿದ್ದ ಅನುಸೂಯಾ ಹಾಗೂ ಚಂದ್ರಶೇಖರ್ ಸುಮಾರು ಎಂಟು ತಿಂಗಳ ಹಿಂದೆ ಚಿಕ್ಕನಾಯಕನಹಳ್ಳಿಯ ಜೋಗಿಹಳ್ಳಿಯಲ್ಲಿರುವ ಜಯಲಕ್ಷ್ಮೀ ನಿವಾಸಕ್ಕೆ ಬಂದು ನೆಲೆಸಿದ್ದರು.

ಈ ಅವಧಿಯಲ್ಲಿ ಮನೆಯೊಳಗಿನ ವಾತಾವರಣ ಸಂಪೂರ್ಣ ಬದಲಾಗಿದೆ ಎನ್ನಲಾಗಿದೆ. ಜಯಲಕ್ಷ್ಮೀ ಜೊತೆ ವಾಸವಾಗಿದ್ದ ಶ್ರೀನಿವಾಸ್ ಮೇಲೆ ಒತ್ತಡ ಹೇರುವ ಮೂಲಕ, ಆತ ಮನೆ ಬಿಡುವಂತೆ ಮಾಡುವಲ್ಲಿ ಅನುಸೂಯಾ ಮತ್ತು ಚಂದ್ರಶೇಖರ್ ಯಶಸ್ವಿಯಾಗಿದ್ದರು. ಈ ಘಟನೆ ಬಳಿಕ ಜಯಲಕ್ಷ್ಮೀ ಮಾನಸಿಕವಾಗಿ ಕುಗ್ಗಿದ್ದರು ಎಂಬ ಮಾಹಿತಿಯೂ ಲಭ್ಯವಾಗಿದೆ. ಆದರೂ ತಮ್ಮ ಜೀವನವನ್ನು ಹೊಸ ರೀತಿಯಲ್ಲಿ ಮುಂದುವರಿಸಲು ನಿರ್ಧರಿಸಿದ ಜಯಲಕ್ಷ್ಮೀ, ತುರುವೇಕೆರೆಯಲ್ಲಿ ಪ್ರತ್ಯೇಕವಾಗಿ ಮನೆ ಮಾಡಿಕೊಂಡು ಬಾಳುವ ಯೋಜನೆ ರೂಪಿಸಿದ್ದರು. ಈ ಉದ್ದೇಶಕ್ಕಾಗಿ ಬಾಡಿಗೆ ಮನೆಗೆ ಅಡ್ವಾನ್ಸ್ ಹಣ ಕೂಡ ನೀಡಿದ್ದಾರೆಂಬುದು ಪೊಲೀಸರ ತನಿಖೆಯಲ್ಲಿ ದೃಢಪಟ್ಟಿದೆ.

ಜಯಲಕ್ಷ್ಮೀ ಮನೆ ತೊರೆಯುವ ನಿರ್ಧಾರ ತೆಗೆದುಕೊಂಡಿರುವ ವಿಚಾರವು ಅನುಸೂಯಾ ಮತ್ತು ಚಂದ್ರಶೇಖರ್‌ಗೆ ಗೊತ್ತಾಗುತ್ತಿದ್ದಂತೆ, ಪರಿಸ್ಥಿತಿ ಗಂಭೀರ ಸ್ವರೂಪ ಪಡೆದುಕೊಂಡಿದೆ. ಆರ್ಥಿಕ ಲಾಭ, ಆಸ್ತಿ ಹಕ್ಕು ಹಾಗೂ ಅನುಕಂಪದ ಆಧಾರಿತ ಸರ್ಕಾರಿ ಉದ್ಯೋಗದ ಮೇಲೆ ಕಣ್ಣು ಇಟ್ಟಿದ್ದ ಆರೋಪಿಗಳು, ಜಯಲಕ್ಷ್ಮೀ ಬದುಕಿದ್ದರೆ ತಮ್ಮ ಉದ್ದೇಶಗಳು ಕೈಗೂಡುವುದಿಲ್ಲ ಎಂಬ ಭಯಕ್ಕೆ ಒಳಗಾಗಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ. ಇದೇ ಹಿನ್ನೆಲೆಯಲ್ಲೇ ತಡರಾತ್ರಿ ಜಯಲಕ್ಷ್ಮೀ ಉಸಿರುಗಟ್ಟಿಸಿ ಹತ್ಯೆಗೈಯಲಾಗಿದೆ ಎಂಬುದು ತನಿಖೆಯಲ್ಲಿ ಬಹಿರಂಗವಾಗಿದೆ.




ಆರೋಪಿ ಅನುಸೂಯಾ

ಹತ್ಯೆಯ ಬಳಿಕ ಆರೋಪಿಗಳು, ಜಯಲಕ್ಷ್ಮೀ ಹೃದಯಾಘಾತದಿಂದ ಮೃತಪಟ್ಟಿದ್ದಾಳೆ ಎಂದು ಎಲ್ಲರನ್ನೂ ನಂಬಿಸಲು ಯತ್ನಿಸಿದ್ದಾರೆ. ಅಂತ್ಯಕ್ರಿಯೆಗೆ ಸಿದ್ಧತೆ ನಡೆಸುತ್ತಿದ್ದ ವೇಳೆ, ಮೃತಳ ಸಾವಿನ ಬಗ್ಗೆ ಅನುಮಾನಗೊಂಡ ಶ್ರೀನಿವಾಸ್ ಚಿಕ್ಕನಾಯಕನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣದ ದಿಕ್ಕನ್ನೇ ಬದಲಿಸಿದೆ. ದೂರಿನ ಆಧಾರದಲ್ಲಿ ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು, ಶವವನ್ನು ಮರಣೋತ್ತರ ಪರೀಕ್ಷೆಗೆ ರವಾನೆ ಮಾಡಿಸಿದ್ದಾರೆ. ವೈದ್ಯಕೀಯ ವರದಿಯಲ್ಲಿ ಸಾವಿಗೆ ಹೃದಯಾಘಾತ ಕಾರಣವಲ್ಲ ಎಂಬುದು ಸ್ಪಷ್ಟವಾಗಿದ್ದು, ಕೊಲೆ ಎಂಬ ಶಂಕೆ ಬಲವಾಗಿದೆ.

ನಂತರ ಪೊಲೀಸರು ಸಾಕು ಮಗ ಚಂದ್ರಶೇಖರ್ ಹಾಗೂ ಸಹೋದರಿ ಅನುಸೂಯಾ ಅವರನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆ ನಡೆಸಿದ್ದಾರೆ. ವಿಚಾರಣೆ ವೇಳೆ ಆರೋಪಿಗಳು ಕೊನೆಗೂ ಸತ್ಯ ಒಪ್ಪಿಕೊಂಡಿದ್ದು, ಜಯಲಕ್ಷ್ಮೀ ಉಸಿರುಗಟ್ಟಿಸಿ ಕೊಂದಿರುವುದಾಗಿ ತಿಳಿಸಿದ್ದಾರೆ. ಈ ಮೂಲಕ ಆರಂಭದಲ್ಲಿ ಸಹಜ ಮರಣವೆಂದು ತೋರಿದ ಪ್ರಕರಣ, ಪೂರ್ವನಿಯೋಜಿತ ಹತ್ಯೆಯಾಗಿ ದಾಖಲಾಗಿದೆ. ಪೊಲೀಸರು ಇಬ್ಬರನ್ನೂ ಬಂಧಿಸಿ, ಕೊಲೆ ಪ್ರಕರಣ ದಾಖಲಿಸಿದ್ದಾರೆ.


ಈ ಪ್ರಕರಣದಲ್ಲಿ ಆರ್ಥಿಕ ಲಾಭ, ಆಸ್ತಿ ವಿಚಾರ ಮತ್ತು ಅನುಕಂಪದ ಆಧಾರದ ಸರ್ಕಾರಿ ಉದ್ಯೋಗ ಪ್ರಮುಖ ಕಾರಣವಾಗಿರಬಹುದು ಎಂಬ ಅನುಮಾನ ವ್ಯಕ್ತವಾಗಿದೆ. ಈ ಎಲ್ಲ ಅಂಶಗಳ ಬಗ್ಗೆ ಪೊಲೀಸರು ಆಳವಾದ ತನಿಖೆ ನಡೆಸುತ್ತಿದ್ದಾರೆ. ಕುಟುಂಬದ ನಂಬಿಕೆಯನ್ನು ದುರುಪಯೋಗ ಮಾಡಿಕೊಂಡು, ಸಾಕಿಕೊಂಡ ಮಹಿಳೆಯನ್ನೇ ಕೊಂದಿರುವ ಈ ಘಟನೆ ಸಮಾಜದ ನೈತಿಕ ಮೌಲ್ಯಗಳನ್ನು ಪ್ರಶ್ನಿಸುವಂತಾಗಿದೆ.

ಚಿಕ್ಕನಾಯಕನಹಳ್ಳಿ ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಮುಂದಿನ ತನಿಖೆ ಮುಂದುವರಿಸಿದ್ದಾರೆ. ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಈ ದಾರುಣ ಘಟನೆ, ಕುಟುಂಬ ಸಂಬಂಧಗಳಲ್ಲಿ ಹಣ ಮತ್ತು ಸ್ವಾರ್ಥ ಹೇಗೆ ಮಾನವೀಯತೆಯನ್ನು ಮರೆಮಾಚಬಹುದು ಎಂಬುದಕ್ಕೆ ಮತ್ತೊಂದು ಭೀಕರ ಉದಾಹರಣೆಯಾಗಿ ಉಳಿದಿದೆ. ☯



# ಡಿ.ಕೆ. ಶಿವಕುಮಾರ್‌ಗೆ ದಕ್ಕುತ್ತಾ ಸಿಎಂ ಖುರ್ಚಿ?

**2023ರ ವಿಧಾನಸಭಾ ಚುನಾವಣೆಯಲ್ಲಿ ಪ್ರಚಂಡ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಪಕ್ಷದಲ್ಲಿ ಚುನಾವಣೆ ಪೂರ್ವ ಇದ್ದಂತಹ ಒಗ್ಗಟ್ಟು ಈಗ ಇಲ್ಲದಾಗಿದೆ. ಮೇಲ್ನೋಟಕ್ಕೆ ನಾವೆಲ್ಲ ಒಂದೇ ಎಂದು ಬೊಬ್ಬೆ ಹೊಡೆದುಕೊಂಡರೂ ಒಳಗೊಳಗೆ ಕಾಂಗ್ರೆಸ್ ಬಣಗಳಾಗಿ ಹಂಚಿ ಹೋಗಿರುವುದು ಸುಳ್ಳೇನಲ್ಲ. ಸದ್ಯಕ್ಕೆ ಡಿಕೆಶಿ ಮತ್ತು ಸಿದ್ದರಾಮಯ್ಯ ಬಣಗಳ ಜಟಾಪಟಿ ನಮಗೆ ಕಾಣಿಸಿದರೂ ಅದರಾಚೆಗೂ ಅತೃಪ್ತ ಮನಸ್ಸುಗಳು ಮಸಲತ್ತು ಮಾಡುತ್ತಿರುವುದು ಗುಟ್ಟಾಗಿ ಉಳಿದಿಲ್ಲ.**



ಪಕ್ಷ ಅಧಿಕಾರ ಹಿಡಿದು ಸಿದ್ದರಾಮಯ್ಯ ಸಿಎಂ ಆದ ಬಳಿಕದಿಂದ ಇಲ್ಲಿವರೆಗೆ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಬಣಗಳ ನಡುವೆ ಮಾತಿನ ಜಟಾಪಟಿ ನಡೆಯುತ್ತಲೇ ಇದೆ. ಅದಕ್ಕಿಂತ ಹೆಚ್ಚಾಗಿ ಡಿ.ಕೆ. ಶಿವಕುಮಾರ್ ಅವರ ಸಿಎಂ ಆಗುವ ಕನಸುಗಳು ನನಸಾಗುವ ಲಕ್ಷಣಗಳು ಕಾಣುತ್ತಿಲ್ಲ. ಹೀಗಾಗಿಯೇ ಅವರು ರೆಬಲ್ ಆಗುತ್ತಿದ್ದು ಅವರು ಒತ್ತಡದಲ್ಲಿದ್ದಾರೆ ಎಂಬುದನ್ನು ಅವರ ನಡೆ, ನುಡಿ ಮಾತುಗಳೇ ತೋರ್ಪಡಿಸುತ್ತಿವೆ. ಮಾತುಗಳು ಹಿಡಿತ ಕಳೆದುಕೊಳ್ಳುತ್ತಿದ್ದು ಸರ್ವಾಧಿಕಾರಿಯ ವರ್ತನೆಗಳು ಕಾಣಿಸುತ್ತಿವೆ. ಇದು ಅವರಿಗೆ ಶೋಭೆ ತರುತ್ತಿಲ್ಲ ಎನ್ನುವುದು ಹಲವರ ಅಭಿಪ್ರಾಯವಾಗಿದೆ.

ಆರಂಭದಲ್ಲಿ ಸಿದ್ದರಾಮಯ್ಯ ಇದೇ ರೀತಿ ವರ್ತಿಸುತ್ತಿದ್ದರು. ಡಿಸಿಗೆ ಏಕವಚನದಲ್ಲಿ ನಿಂದನೆ ಮಾಡಿರುವುದು, ಎಸ್ಪಿ ಮೇಲೆ ಕೈಎತ್ತಿರುವುದು ಹೀಗೆ ಹತ್ತಾರು ಘಟನೆಗಳು ನಡೆದಿದ್ದು ಇದೀಗ ಅವರು ಮೌನಕ್ಕೆ ಜಾರಿದ್ದು, ತಮ್ಮ ಪಾಡಿಗೆ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಆದರೆ ಈಗ ರೆಬಲ್ ಆಗುತ್ತಿರುವುದು ಡಿ.ಕೆ. ಶಿವಕುಮಾರ್ ಎನ್ನುವುದಂತು ಸ್ಪಷ್ಟವಾಗುತ್ತಿದೆ. ಸರ್ಕಾರ ರಚನೆಯಾಗಿ ಮೂರು ವರ್ಷವಾಗುತ್ತಾ ಬಂದರೂ ಸಿಎಂ ಆಗುವ ಯೋಗ ಕೂಡಿ ಬರುತ್ತಿಲ್ಲವಲ್ಲ ಎಂಬ ಹತಾಶೆ ಹೀಗೆ ಮಾಡುತ್ತಿದೆಯಾ? ಗೊತ್ತಿಲ್ಲ.



ಇನ್ನು ಡಿಸಿಎಂ ಆಚೆಗೆ ಅವರೊಬ್ಬ ಪಕ್ಷದ ರಾಜ್ಯ ಅಧ್ಯಕ್ಷರಾಗಿದ್ದಾರೆ. ಪಕ್ಷದ ನಾಯಕತ್ವ ಅವರ ಕೈನಲ್ಲಿದೆ. ಆದರೆ ಇದೀಗ ಅವರು ನಾಯಕತ್ವ ನಿಭಾಯಿಸುವಲ್ಲಿಯೂ ವಿಫಲರಾಗುತ್ತಿದ್ದಾರಾ? ಎಂಬ ಪ್ರಶ್ನೆ ಮೂಡುತ್ತಿದೆ.



ಏಕೆಂದರೆ ಕೈ ಮುಖಂಡರು ಅರ್ಥಾತ್ ಸಿಎಂ ಸಿದ್ದರಾಮಯ್ಯ ಬಣದ ಶಾಸಕರು ಡಿ.ಕೆ. ಶಿವಕುಮಾರ್ ಅವರ ಮಾತಿಗೆ ಸೊಪ್ಪು ಹಾಕುತ್ತಿಲ್ಲ. ಇದಕ್ಕೆ ಶಾಸಕರ ವಿದೇಶಿ ಪ್ರವಾಸವೇ ಸಾಕ್ಷಿಯಾಗಿದೆ. ಇನ್ನು ಹೈಕಮಾಂಡ್ ಮೇಲೆ ಒತ್ತಡ ತಂದರೂ ಅದು ಪ್ರಯೋಜನಕ್ಕೆ ಬರುತ್ತಿಲ್ಲ. ಸಿದ್ದರಾಮಯ್ಯರವರು ಸ್ವ ಇಚ್ಛೆಯಿಂದ ಅಧಿಕಾರ ಬಿಟ್ಟುಕೊಡುವ ಯಾವ ಲಕ್ಷಣಗಳು ಕಾಣಿಸುತ್ತಿಲ್ಲ. ಇದರಿಂದ ಅಧಿಕಾರ ಪಡೆದೇ ಪಡೆಯುತ್ತೇನೆಂದು ಹಠಕ್ಕೆ ಬಿದ್ದಿರುವ ಡಿಕೆಶಿಗೆ ಸಿಎಂ ಸ್ಥಾನ ದಕ್ಕುವ ಲಕ್ಷಣಗಳು ಗೋಚರಿಸುತ್ತಿಲ್ಲ.

ಸಿಎಂ ಮತ್ತು ಡಿಸಿಎಂ ನಡುವಿನ ಅಧಿಕಾರ ಹಸ್ತಾಂತರದ ಹಗ್ಗ ಜಗ್ಗಾಟ ಕಾಂಗ್ರೆಸ್ ಪಕ್ಷದ ಮೇಲೆ ಪರಿಣಾಮ ಬೀರುತ್ತಿದೆ. ಸಿದ್ದರಾಮಯ್ಯ ಅವರು ಹಿಂದುಳಿದ, ಅಲ್ಪಸಂಖ್ಯಾತ ಶಾಸಕರು, ಸಚಿವರನ್ನು ತಮ್ಮೊಟ್ಟಿಗೆ ಇಟ್ಟುಕೊಂಡು ಆಟ ಆಡುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಅವರೊಂದಿಗೆ ಕೆಲವು ಒಕ್ಕಲಿಗ ನಾಯಕರು ಹಾಗೂ ಶಾಸಕ ಇಕ್ಬಾಲ್ ಹುಸೇನ್ ಅವರನ್ನು ಹೊರತುಪಡಿಸಿದರೆ ಮತ್ತ್ಯಾರು ಬಹಿರಂಗಾಗಿ ಕಾಣಿಸುತ್ತಿಲ್ಲ. ಹೀಗಾಗಿ ಅಧಿಕಾರ ಹಸ್ತಾಂತರ ವಿಚಾರದಲ್ಲಿ ಹೈಕಮಾಂಡ್ ಗಟ್ಟಿಯಾದ ನಿರ್ಧಾರಕ್ಕೆ ಬರಲಾರದೆ ದಿನಗಳನ್ನು ತಳ್ಳುವುದಕ್ಕೆ ಸೀಮಿತವಾಗುತ್ತಿದೆ.



ಹಾಗೆನೋಡಿದರೆ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗುತ್ತಿವೆ. ಇನ್ನು ಎರಡು ವರ್ಷವಷ್ಟೇ ಬಾಕಿಯಿದೆ. ಈ ಎರಡು ವರ್ಷಗಳು ಅಧಿಕಾರದ ಅಗ್ನಿಪರೀಕ್ಷೆಯ ದಿನಗಳಾಗಿವೆ. 2028ಕ್ಕೆ ಮತ್ತೆ ವಿಧಾನಸಭಾ ಚುನಾವಣೆಗೆ ಹೋಗಲೇ ಬೇಕಾಗುತ್ತದೆ. ಅದರ ನಡುವೆ ಕಾಂಗ್ರೆಸ್ ಹೈಕಮಾಂಡ್ ಇತರೆ ರಾಜ್ಯಗಳಲ್ಲಿನ ವಿಧಾನಸಭಾ ಚುನಾವಣೆಯನ್ನು ಎದುರಿಸಬೇಕಾಗಿದೆ. ಆ ಎಲ್ಲ ಚುನಾವಣೆಗಳನ್ನು ಎದುರಿಸಬೇಕಾದರೆ ಕರ್ನಾಟಕದ ಸಹಕಾರ ಸರ್ವ ರೀತಿಯಲ್ಲಿ ಬೇಕಾಗುತ್ತದೆ. ಹೀಗಾಗಿ ರಾಜ್ಯದಲ್ಲಿ ಅಧಿಕಾರ ಹಸ್ತಾಂತರದ ವಿಚಾರಕ್ಕೇನಾದರೂ ಕೈ ಹಾಕಿದರೆ ಥೇಟ್ ಜೇನುಗೂಡಿಗೆ ಕಲ್ಲು ಹಾಕಿದಂತೆ ಆಗಲಿದೆ. ಅದರ ಪರಿಣಾಮಗಳು ಕರ್ನಾಟಕದಾಚೆಗೂ ಬೀರಬಹುದು ಎಂಬ ಭಯ ಹೈಕಮಾಂಡ್‌ನ್ನು ಕಾಡಲಾರಂಭಿಸಿದೆ.

ಸಿದ್ದರಾಮಯ್ಯರವರನ್ನು ಅಧಿಕಾರದಿಂದ ಇಳಿಸಿ ಡಿ.ಕೆ. ಶಿವಕುಮಾರ್ ಅವರಿಗೆ ಪಟ್ಟಕಟ್ಟುವ ಕಡೆಗೆ ಹೈಕಮಾಂಡ್ ಚಿಂತನೆ ಮಾಡುತ್ತಿರುವಂತೆ ಕಾಣಿಸುತ್ತಿಲ್ಲ. ಬದಲಿಗೆ ಡಿ.ಕೆ.ಶಿವಕುಮಾರ್ ಅವರಿಗೆ ಬೇರೆ ರಾಜ್ಯಗಳ ಚುನಾವಣೆಯ ಜವಾಬ್ದಾರಿಗಳನ್ನು ನೀಡಿ ಅವರನ್ನು ಆ ಕಡೆಗೆ ಫೋಕಸ್ ಮಾಡುವಂತೆ ಮಾಡುತ್ತಿದೆ. ಇದು ಡಿಕೆಶಿಗೆ ಮತ್ತು ಅವರ ಬಣದ ನಾಯಕರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಅಧಿಕಾರದ ಹಸ್ತಾಂತರದ ವಿಚಾರದಲ್ಲಿ ಹೈಕಮಾಂಡ್ ತ್ರಿಶಂಕು ಸ್ಥಿತಿಯಲ್ಲಿದೆ. ಏನೇ ನಿರ್ಧಾರ ತೆಗೆದುಕೊಂಡರೂ ಅದರ ಪರಿಣಾಮಗಳು ನಂತರದ ದಿನಗಳಲ್ಲಿ ನೆಟ್ಟಗಿರಲ್ಲ ಎಂಬುದು ಗೊತ್ತಾಗಿದೆ. ಹೀಗಾಗಿಯೇ ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿದೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.



ಇತ್ತೀಚೆಗಿನ ಬೆಳವಣಿಗೆಯಲ್ಲಿ ಸಿದ್ದರಾಮಯ್ಯ ಬಣದವರು ಯಾವುದೇ ಹೇಳಿಕೆ ನೀಡದೆ, ಹೈಕಮಾಂಡ್ ಸೂಚನೆಗೂ ಬಗ್ಗದೆ ವಿದೇಶಿ ಪ್ರವಾಸ ಮಾಡಿದ್ದಾರೆ. ಇದು ಬರೀ ಪ್ರವಾಸ ಅಂಥ ಅಂದುಕೊಂಡರೆ ಅದು ತಪ್ಪಾಗಿಬಿಡುತ್ತದೆ. ಇದೊಂದು ರಾಜಕೀಯ ತಂತ್ರವಾಗಿದೆ. ಆ ಮೂಲಕ ಹೈಕಮಾಂಡ್ ಮತ್ತು ಡಿಕೆಶಿ ಬಣಕ್ಕೊಂದು ಸಂದೇಶವನ್ನು ರವಾನಿಸಲಾಗಿದೆ. ನಾವು ಸಿಎಂ ಬಣದವರು ಒಗ್ಗಟ್ಟಾಗಿದ್ದೇವೆ. ಸಿದ್ದರಾಮಯ್ಯರಿಂದ ಅಧಿಕಾರ ಕಿತ್ತುಕೊಳ್ಳಲು ಸಾಧ್ಯವಿಲ್ಲ ಎಂಬ ಪರೋಕ್ಷ ಎಚ್ಚರಿಕೆಯೂ ಇದಾಗಿದೆ. ಈ ಬೆಳವಣಿಗೆಯಿಂದ ಹೈಕಮಾಂಡ್ ವಿಚಲಿತವಾಗಿದೆ. ಹೀಗಾಗಿ ಅಧಿಕಾರ ಹಸ್ತಾಂತರ ವಿಚಾರಕ್ಕೆ ಕೈ ಹಾಕಲು ಹೆದರುತ್ತಿದೆ.



ಇದೆಲ್ಲ ಬೆಳವಣಿಗೆಗಳು ಡಿ.ಕೆ. ಶಿವಕುಮಾರ್ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಅವರ ಸಿಎಂ ಆಗುವ ಕನಸು ನುಚ್ಚುನೂರಾಗಲು ಆರಂಭಿಸಿದೆ. ಅವರ ಬಣದ ಶಾಸಕರು ಮೇಲಿಂದ ಮೇಲೆ ಅಧಿಕಾರ ಹಸ್ತಾಂತರದ ದಿನಾಂಕಗಳನ್ನು ನಿಗದಿ ಮಾಡುತ್ತಾ ಹೋಗುತ್ತಿದ್ದರೂ ಅದ್ಯಾವುದೂ ನಡೆಯುತ್ತಿಲ್ಲ. ಪಕ್ಷಕ್ಕಾಗಿ ಇಷ್ಟೆಲ್ಲ ಶ್ರಮಪಟ್ಟರೂ ಸಿಎಂ ಆಗಲು ಸಾಧ್ಯವಾಗದೆ ಹೋಯಿತಲ್ಲ ಎಂಬ ಕೊರಗು ಡಿಕೆಶಿ ಸೇರಿದಂತೆ ಬಣದವರನ್ನು ಕಾಡಲು ಆರಂಭಿಸಿದೆ. ಅಧಿಕಾರ ಹಸ್ತಾಂತರ ಎಂಬ ಬಿಸಿ ತುಪ್ಪ ಗಂಟಲಲ್ಲಿ ಸಿಕ್ಕಿಕೊಂಡು ಉಗುಳಲು ನುಂಗಲು ಆಗದೆ ಒದ್ದಾಡುವಂತಾಗಿದೆ.

ಸರ್ಕಾರ ಉಚಿತ ಭಾಗ್ಯಗಳನ್ನು ನೀಡಿದ್ದರೂ ಕೂಡ ಜನ ಸರ್ಕಾರದ ವಿರುದ್ಧವೇ ಹಿಡಿಶಾಪ ಹಾಕುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂಬ ಆರೋಪಗಳು ಕೇಳಿ ಬರುತ್ತಿವೆ. ಬೆಲೆ ಏರಿಕೆ ಬಿಸಿ ಜನರನ್ನು ಸುಡುತ್ತಿದೆ. ಜನವಲಯದಲ್ಲಿ ಅತೃಪ್ತಿ ಕಾಡಲಾರಂಭಿಸಿದೆ. ಭ್ರಷ್ಟಾಚಾರದ ಸುದ್ದಿಗಳು ಮಾಮೂಲಿಯಾಗಿದೆ. ಸರ್ಕಾರ ಸಾಲ ಮಾಡಿ ಆಡಳಿತ ನಡೆಸುವಂತಾಗಿದೆ. ಇಂತಹ ಸಂದರ್ಭದಲ್ಲಿ ಸಾರ್ವಜನಿಕ ವಲಯದಿಂದ ಬರುವ ಬೇಡಿಕೆಗಳನ್ನು ಈಡೇರಿಸುವುದು ಸರ್ಕಾರಕ್ಕೆ ಸುಲಭವಾಗಿ ಉಳಿದಿಲ್ಲ. ಸಾರ್ವಜನಿಕವಾಗಿ ಕಾಂಗ್ರೆಸ್ ನ ನಾಯಕರು ಉಚಿತ ಯೋಜನೆಯಿಂದ ಜನಸಾಮಾನ್ಯರ ಜೀವನ ಮಟ್ಟ ಸುಧಾರಿಸಿದೆ ಎಂಬ ಹೇಳಿಕೆ ನೀಡಿದರೂ ಖಜಾನೆ ಖಾಲಿಯಾಗಿರುವ ಹೆಚ್ಚೆಚ್ಚು ಸಾಲವಾಗಿರುವ ವಿಚಾರವನ್ನು ಅರಿತುಕೊಳ್ಳದಷ್ಟು ಜನ ದಡ್ಡರಲ್ಲ.

ಈಗಿನ ರಾಜಕೀಯ ಬೆಳವಣಿಗೆಯನ್ನು ಗಮನಿಸಿದರೆ ಡಿ.ಕೆ.ಶಿವಕುಮಾರ್ ಅವರಿಗೆ ಸಿದ್ದರಾಮಯ್ಯರವರು ಸಿಎಂ ಸ್ಥಾನವನ್ನು ಹಸ್ತಾಂತರ ಮಾಡುವ ಯಾವುದೇ ಲಕ್ಷಣಗಳು ಗೋಚರಿಸುತ್ತಿಲ್ಲ. ಹೈಕಮಾಂಡ್ ನತ್ತ ಬೆರಳು ತೋರಿಸುತ್ತಿರುವ ಸಿದ್ದರಾಮಯ್ಯ ಹೈಕಮಾಂಡ್ ಹೇಳಿದಂತೆ ನಡೆದುಕೊಳ್ಳುತ್ತೇನೆ ಎನ್ನುತ್ತಿದ್ದಾರೆ. ಆದರೆ ಹೈಕಮಾಂಡ್ ಗೆ ಸಿಎಂ ಬಣದ ಶಾಸಕರು ಫಾರಿನ್ ಟ್ರಿಪ್ ಹೋಗುವುದನ್ನೇ ತಡೆಯಲು ಆಗದ ಮೇಲೆ ಸಿಎಂ ಸ್ಥಾನವನ್ನು ಬಿಟ್ಟುಕೊಡುವಂತೆ ಆದೇಶ ನೀಡಲು ಸಾಧ್ಯವಾಗುತ್ತಾ? ಎಂಬುದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

ಇದೆಲ್ಲದರ ನಡುವೆ ಎಷ್ಟೇ ಒತ್ತಡ ತಂದರೂ ಹೈಕಮಾಂಡ್ ಯಾವುದೇ ಪ್ರತಿಕ್ರಿಯೆ ನೀಡದೆ ಮೌನಕ್ಕೆ ಜಾರಿರುವುದು ಡಿ.ಕೆ.ಶಿವಕುಮಾರ್ ಅವರ ಆಕ್ರೋಶಕ್ಕೆ ಕಾರಣವಾಗಿದೆ. ಅವರೀಗ ರೆಬಲ್ ಆಗುತ್ತಿದ್ದಾರೆ. ಅವರ ಮಾತುಗಳು ಹೇಳಿಕೆಗಳಲ್ಲಿ ಆಕ್ರೋಶಗಳು ಎದ್ದು ಕಾಣುತ್ತಿವೆ.. ಒಂದು ರೀತಿಯಲ್ಲಿ ಸರ್ವಾಧಿಕಾರಿಯಂತೆ ಕಾಣುವ ಅವರ ವರ್ತನೆಗಳು ಈಗಲೇ ಈ ರೀತಿ ವರ್ತಿಸುವ ಇವರು ಸಿಎಂ ಆದರೆ ಹೇಗಪ್ಪಾ? ಎಂದು ಸಾರ್ವಜನಿಕ ವಲಯದಲ್ಲಿ ಜನ ಮಾತನಾಡಿಕೊಳ್ಳುವಂತಾಗಿದೆ.



ಡಿಕೆಶಿ ತಮ್ಮ ನಡೆ ನುಡಿಗಳಲ್ಲಿ ಬದಲಾವಣೆ ತಂದುಕೊಳ್ಳುವುದು ಜರೂರಾಗಿದೆ. ತಮ್ಮ ಕೋಪ, ಆಕ್ರೋಶವನ್ನು ಪಕ್ಷದ ವೇದಿಕೆಯಲ್ಲಿಟ್ಟುಕೊಳ್ಳಬೇಕೆ ವಿನಃ ಸಾರ್ವಜನಿಕವಾಗಿ ತೋರ್ಪಡಿಸಿದರೆ ಅದು ಬೇರೆಯದ್ದೇ ಆದ ಸಂದೇಶವನ್ನು ಸಮಾಜಕ್ಕೆ ರವಾನಿಸುತ್ತದೆ ಎಂಬುದನ್ನು ಅರಿತುಕೊಳ್ಳಬೇಕಾಗುತ್ತದೆ. ಇಷ್ಟಕ್ಕೂ ಅವರಿಗೆ ಸಿಎಂ ಸ್ಥಾನ ದಕ್ಕದಂತೆ ನೋಡಿಕೊಳ್ಳುತ್ತಿರುವುದು ವಿಪಕ್ಷದವರಲ್ಲ ಮತದಾರರಲ್ಲ ಅವರದ್ದೇ ಪಕ್ಷದ ನಾಯಕರು ಹೀಗಿರುವಾಗ ಅವರಿಗೆ ಶತ್ರುಗಳಿರುವುದು ಹೊರಗೆ ಅಲ್ಲ... ಪಕ್ಷದೊಳಗೆ ಎಂಬುದು ಸ್ಪಷ್ಟವಾಗುತ್ತದೆ. ಅದು ಏನೇ ಇರಲಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಇನ್ನಿಲ್ಲದಂತೆ ಶ್ರಮಪಟ್ಟಿರುವ ಡಿಕೆಶಿಗೆ ಸಿಎಂ ಸ್ಥಾನ ದಕ್ಕದೇ ಹೋದರೆ ಅದಕ್ಕಿಂತ ದೊಡ್ಡ ದೌರ್ಭಾಗ್ಯ ಮತ್ತೊಂದಿಲ್ಲ.

☯



# ಸಿಎಂ ಸಿದ್ದರಾಮಯ್ಯಗೆ ವಿರೋಧಿಗಳು ಯಾರು?

ಬಿ.ಎಂ. ಲವಕುಮಾರ್



ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಅಧಿಕಾರ ಹಸ್ತಾಂತರದ ಜಟಾಪಟಿ ಸಿಎಂ ಮತ್ತು ಡಿಸಿಎಂ ನಡುವೆ ನಡೆಯುತ್ತಿರುವುದು ಇವತ್ತು ನಿನ್ನೆಯದಲ್ಲ್ ಈ ಕುರಿತಂತೆ ಪರವಿರೋಧದ ಹೇಳಿಕೆಗಳು ಸರ್ಕಾರ ಆರಂಭವಾದಲ್ಲಿಂದ ಇಲ್ಲಿವರೆಗೂ ಮುಂದುವರೆದಿದೆ... ಬಹುಶಃ ರಾಜ್ಯ ರಾಜಕೀಯದಲ್ಲಿ ಬಹುಮತ ಪಡೆದು ಅಧಿಕಾರಕ್ಕೆ ಬಂದ ಪಕ್ಷದಲ್ಲಿ ಸಿಎಂ ಅಧಿಕಾರದಲ್ಲಿದ್ದಾಗಲೇ ಸಿಎಂ ಅಧಿಕಾರ ಹಸ್ತಾಂತರದ ಕುರಿತಂತೆ ಇಷ್ಟೊಂದು ಚರ್ಚೆಗಳು ನಡೆದಿದ್ದು ಇದೇ ಮೊದಲಿರಬಹುದೇನೋ? ಸದ್ಯ ಸಿಎಂ ಆಗಲೇ ಬೇಕೆಂದು ಹವಣಿಸುತ್ತಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಹೈಕಮಾಂಡ್ ಜತೆಗೆ ಇರುವಾಗಲೇ ಇತ್ತ ಸಿಎಂ ಸಿದ್ದರಾಮಯ್ಯ ಅವರು ಎಕ್ಸ್‌ನಲ್ಲಿ ರಣರಂಗ ಬಿಟ್ಟು ಓಡಿ ಹೋಗುವ ಹೇಡಿ ನಾನಾಗಲಾರೆ ಎಂಬ ಪೋಸ್ಟ್ ಹಾಕಿರುವುದು ಚರ್ಚೆಯನ್ನು ಹುಟ್ಟುಹಾಕಿದೆ.

ಕಳೆದ ಮೂರು ವರ್ಷಗಳಿಂದ ಸಿಎಂ ಆಗಿ ಅಧಿಕಾರ ನಡೆಸುತ್ತಿರುವ ಸಿದ್ದರಾಮಯ್ಯರವರಿಗೆ ಸಿಎಂ ಖುರ್ಚಿ ಮುಳ್ಳಿನ ಖುರ್ಚಿಯಾಗಿಯೇ ಪರಿಣಮಿಸಿದೆ. ವಿಪಕ್ಷದವರಿಗಿಂತ ಸ್ವಪಕ್ಷದವರೇ ಅವರಿಗೆ ಮುಳ್ಳಾಗಿ ಚುಚ್ಚುತ್ತಿದ್ದಾರೆ. ಆಗಾಗ್ಗೆ ಅಧಿಕಾರ ಹಸ್ತಾಂತರದ ವಿಚಾರಗಳು ಮುನ್ನಲೆಗೆ ಬರುತ್ತಿರುವುದು ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಸಿಎಂ ಆಗಿ ಅಧಿಕಾರ ವಹಿಸಿಕೊಂಡಾಗ ಹೈಕಮಾಂಡ್ ಮುಂದೆ ಏನು ಒಪ್ಪಂದ ಆಗಿತ್ತು ಎಂಬುದು ಗೊತ್ತಿಲ್ಲ. ಆದರೆ ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು, ಡಿಸಿಎಂ ಡಿಕೆಶಿ ಬಣದ ಶಾಸಕರು ಹೇಳುವ ಮಾತುಗಳು, ನಡೆದುಕೊಳ್ಳುವ ರೀತಿಗಳನ್ನು ನೋಡಿದರೆ ಅಧಿಕಾರ ಹಸ್ತಾಂತರದ ಮಾತುಕತೆ ನಡೆದಿರಬಹುದು ಎಂಬುದು ಸ್ಪಷ್ಟವಾಗುತ್ತಿದೆ.

ಒಂದು ವೇಳೆ ರಾಜಕೀಯ ಪಡಸಾಲೆಯಲ್ಲಿ ನಡೆಯುತ್ತಿರುವ ಚರ್ಚೆಯಂತೆ ಹೇಳುವುದಾದರೆ ಎರಡೂವರೆ ವರ್ಷಕ್ಕೆ ಸಿದ್ದರಾಮಯ್ಯ ಅವರು ಅಧಿಕಾರವನ್ನು ಡಿ.ಕೆ.ಶಿವಕುಮಾರ್ ಅವರಿಗೆ ಹಸ್ತಾಂತರ ಮಾಡಬೇಕಾಗಿತ್ತು. ಆದರೆ ಇಲ್ಲಿವರೆಗೆ ಮಾಡಿಲ್ಲ. ಹೀಗಾಗಿ ಮೂರು ವರ್ಷದ ಸನಿಹಕ್ಕೆ ಬರುತ್ತಿದೆ. ಇದು ಡಿ.ಕೆ.ಶಿವಕುಮಾರ್ ಸೇರಿದಂತೆ ಅವರ ಬಣದ ನಾಯಕರನ್ನು ಕೆರಳಿಸುವಂತೆ ಮಾಡಿದೆ. ಸದ್ಯ ಹೈಕಮಾಂಡ್ ಜತೆಯಲ್ಲಿರುವ ಡಿ.ಕೆ.ಶಿವಕುಮಾರ್ ಸಿಎಂ ಆಗಲೇ ಬೇಕೆಂಬ ಪಟ್ಟು ಹಿಡಿದಿದ್ದಾರೆ ಎನ್ನುವುದು ಗೊತ್ತಾಗುತ್ತಿದೆ. ಈ ಬಾರಿ ಸಿಎಂ ಆಗದೆ ಹೋದರೆ ಮುಂದೆ ಕಷ್ಟವಿದೆ ಎಂಬುದು ಡಿಕೆಶಿ ಅವರಿಗೂ ಗೊತ್ತಾಗಿದೆ. ಹೀಗಾಗಿಯೇ ಪಟ್ಟು ಸಡಿಲಿಸಲು ಅವರು ತಯಾರಿಲ್ಲ.. ಇತ್ತ ಸಿದ್ದರಾಮಯ್ಯ ಅವರು ಅಧಿಕಾರ ಅವಧಿ ಮುಗಿಸಲೇ ಬೇಕೆಂಬ ಹಠದಲ್ಲಿದ್ದಾರೆ.



ಎರಡು ಬಲಿಷ್ಠ ನಾಯಕರ ನಡುವೆ ನಡೆಯುತ್ತಿರುವ ಜಂಗಿ (ಕುರ್ಚಿ)ಕುಸ್ತಿ ಮಧ್ಯೆ ಸಿಕ್ಕಿ ಹಾಕಿಕೊಂಡಿರುವ ಹೈಕಮಾಂಡ್ ಯಾವುದೇ ತೀರ್ಮಾನ ಕೈಗೊಳ್ಳದೆ ನುಣುಚಿಕೊಳ್ಳುತ್ತಾ ಬರುತ್ತಿದೆ. ಆದರೆ ಈ ಬಾರಿ ಏನಾದರೊಂದು ತೀರ್ಮಾನ ಆಗಲೇ ಬೇಕೆಂಬ ಹಠಕ್ಕೆ ಡಿಕೆಶಿ ಬಿದ್ದಂತೆ ಕಾಣುತ್ತಿದ್ದು ಇದರ ಪರಿಣಾಮ ಸಿದ್ದರಾಮಯ್ಯ ಅವರು ಅಧಿಕಾರ ಹಸ್ತಾಂತರ ಮಾಡಲೇಬೇಕಾದ ಒತ್ತಡಕ್ಕೆ ಸಿಲುಕಿದಂತೆ ಕಾಣಿಸುತ್ತಿದೆ. ಹಾಗಾಗಿ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಹಾಕಿಕೊಂಡಿರುವ ಪೋಸ್ಟ್ ಗಳಿಗೆ ಮಹತ್ವ ಬಂದಿವೆ ಮತ್ತು ಚರ್ಚೆಯನ್ನು ಹುಟ್ಟು ಹಾಕಿವೆ..

ಹಿಂದೆ ಅಧಿಕಾರರೂಢ ನಾಯಕರು ರಾಜಕೀಯ ವಿರೋಧಿಗಳೆಂದು ಸಂಬೋಧಿಸಿ ಪೋಸ್ಟ್ ಹಾಕಿದರೆ ಅದನ್ನು ವಿರೋಧ ಪಕ್ಷದವರನ್ನು ಟಾರ್ಗೆಟ್ ಮಾಡಿ ಹಾಕಿದ್ದಾರೆಂದು ಸುಲಭವಾಗಿ ಒಪ್ಪಿಕೊಳ್ಳಬಹುದಿತ್ತು. ಆದರೀಗ ಪ್ರತಿಯೊಬ್ಬ ನಾಯಕರಿಗೂ ಸ್ವಪಕ್ಷದಲ್ಲಿಯೇ ವಿರೋಧಿಗಳು ಇರುವುದರಿಂದ ಅದನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂಬ ಜಿಜ್ಞಾಸೆ ಕಾಡಲಾರಂಭಿಸಿದೆ. ಇಲ್ಲಿ ಸಿದ್ದರಾಮಯ್ಯ ಅವರು ಮಾರುದ್ದ ಹಾಕಿರುವ ಪೋಸ್ಟ್‌ಗಳು ಯಾರನ್ನುದ್ದೇಶಿಸಿ ಎಂಬ ಪ್ರಶ್ನೆ ಎದ್ದಿದ್ದು, ಅರ್ಥೈಸಿಕೊಳ್ಳುವುದು ಜನರಿಗೆ ಬಿಡಲಾಗಿದೆ

ಇಷ್ಟಕ್ಕೂ ಸಿಎಂ ಅವರ ಆ ಪೋಸ್ಟ್ ಓದಿದ ಮೇಲೆ ಅದು ಬಿಜೆಪಿ ಮತ್ತು ಜೆಡಿಎಸ್ ನಾಯಕರನ್ನುದ್ದೇಶಿಸಿ ಹಾಕಿದ್ದು ಎನ್ನುವುದನ್ನು ಒಪ್ಪಿಕೊಳ್ಳುವುದು ಕಷ್ಟವೇ ಹಾಗಾದರೆ ಸದ್ಯಕ್ಕೆ ಸಿಎಂ ಸಿದ್ದರಾಮಯ್ಯ ಅವರ ವಿರೋಧಿಗಳು ಯಾರು? ಪೋಸ್ಟ್‌ನ್ನು ಸಂಪೂರ್ಣ ಓದಿದ ಮೇಲೆ ಗೊತ್ತಾಗಿ ಬಿಡುತ್ತದೆ. ಆದರೆ ಈ ಮಾರ್ಮಿಕ ಪೋಸ್ಟ್ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕುತ್ತಿರುವುದಂತು ನಿಜ. ಹಾಗಾದರೆ ಪೋಸ್ಟ್‌ನಲ್ಲಿ ಏನಿದೆ ಎಂಬುದನ್ನು ಒಮ್ಮೆ ಓದಿ ಬಿಡಿ.


ನನ್ನ ಮೇಲೆ ವಿರೋಧಿಗಳು ನಡೆಸುತ್ತಿರುವ ಬಹುತೇಕ ದಾಳಿಗಳು, ಮಾಡುತ್ತಿರುವ ಟೀಕೆಆರೋಪಗಳಿಗೆ ನಾನು ಹುಟ್ಟಿದ ಜಾತಿಯೂ ಒಂದು ಕಾರಣ. ಕುರಿಕಾಯುತ್ತಾ ಇರಬೇಕಾದವನು ಮುಖ್ಯಮಂತ್ರಿ ಆಗಿ ಬಿಟ್ಟನಲ್ಲಾ, ಆರ್ಥಿಕ ತಜ್ಞರಿಗೆ ಸರಿಸಮನಾಗಿ ನಿಂತು ಸಾಲುಸಾಲು ಬಜೆಟ್ ಮಂಡಿಸಿ ಶಹಬ್ಬಾಸ್‌ಗಿರಿ ಗಳಿಸುತ್ತಿದ್ದಾನಲ್ಲಾ ಎನ್ನುವ ಅಸಹನೆ, ಅವರೊಳಗೆ ದ್ವೇಷ, ಅಸೂಯೆ ಕುದಿಯುತ್ತಿದೆ. ಇವನೊಬ್ಬನನ್ನು ರಾಜಕೀಯವಾಗಿ ಮುಗಿಸಿಬಿಟ್ಟರೆ ಅದರ ನಂತರ ನಮ್ಮೆಲ್ಲರ ಹಾದಿ ಸುಲಭವಾಗುತ್ತದೆ ಎನ್ನುವ ರಾಜಕೀಯ ದುರುದ್ದೇಶದ ಲೆಕ್ಕಾಚಾರ ಇವರ ಮನಸ್ಸಿನಲ್ಲಿದೆ.



ಸಾಮಾಜಿಕ ಬದಲಾವಣೆಗೆ ಕೈ ಹಾಕಿದವರೆಲ್ಲರ ವಿರುದ್ಧ ಇಂತಹ ಷಡ್ಯಂತ್ರಗಳು ನಡೆದಿರುವುದನ್ನು ಇತಿಹಾಸದ ಪುಟದಲ್ಲಿ ಕಾಣಬಹುದು. ಬುದ್ಧ, ಬಸವಣ್ಣ, ಅಂಬೇಡ್ಕರ್, ಗಾಂಜಿ, ಪೆರಿಯಾರ್, ನಾರಾಯಣ ಗುರು, ಕನಕದಾಸರಾದಿಯಾಗಿ ಸಾಮಾಜಿಕ ಪರಿವರ್ತನೆಗೆ ಹೋರಾಟ ನಡೆಸಿದವರೆಲ್ಲರನ್ನು ಹಣಿಯುವ, ಧಮನಿಸುವ, ಮುಗಿಸುವ ಸಂಚು ಒಳಸಂಚುಗಳು ನಡೆಯುತ್ತಲೇ ಬಂದಿದೆ. ಬಸವಣ್ಣ ಏನು ತಪ್ಪು ಮಾಡಿದ್ದರು? ಜಾತಿ ವಿನಾಶಕ್ಕೆ ಪ್ರಯತ್ನ ಮಾಡಿದ್ದರು, ಅಂತರಜಾತಿ ಮದುವೆ ಮಾಡಿಸಿದ್ದರು, ಅವಕಾಶ ವಂಚಿತ ತಬ್ಬಲಿ

☞ 11

# ಹೆಂಡತಿಯ ಶೀಲದ ಮೇಲೆ ಅನುಮಾನಗೊಂಡು ಮಚ್ಚಿನಿಂದ ಕೊಚ್ಚಿ ಕೊಚ್ಚಿ ಕೊಂದ ಗಂಡ!


ಆರೋಪಿ ಕುಮಾರ್

**ನಿದ್ರೆಯಲ್ಲಿದ್ದ ಮಹಿಳೆಯೊಬ್ಬಳ ಕನಸುಗಳು ಆ ಕ್ಷಣದಲ್ಲಿ ಮುರಿದುಬಿದ್ದವು. ಜೊತೆಯಾಗಿ ಬದುಕಿದ ಪತಿಯೇ ಆಕೆಯ ಉಸಿರನ್ನು ಕಸಿದುಕೊಂಡ ಕ್ಷಣ ಅದು. ಶೀಲ ಶಂಕೆಯೆಂಬ ಅಂಧಕಾರ, ಪ್ರೀತಿಯ ದಾಂಪತ್ಯವನ್ನು ರಕ್ತಪಾತದ ದುರಂತವನ್ನಾಗಿ ಪರಿವರ್ತಿಸಿದೆ. ಸಿಲಿಕಾನ್ ಸಿಟಿ ಬೆಂಗಳೂರುಯ ಗೋವಿಂದರಾಜನಗರದಲ್ಲಿ ನಡೆದ ಈ ಘಟನೆ, ಕೇವಲ ಒಂದು ಕೊಲೆ ಪ್ರಕರಣವಲ್ಲ ಅದು ಮಹಿಳೆಯ ಮೇಲಿನ ಅವಿಶ್ವಾಸ, ಮಾನಸಿಕ ಅಸ್ಥಿರತೆ ಮತ್ತು ಮೌನವಾಗಿ ಬೆಳೆದ ಸಂಶಯಗಳ ಭಯಾನಕ ಪ್ರತಿಫಲವಾಗಿದೆ. ದಶಕಗಳ ಸಂಗಾತಿತನದ ಅಂತ್ಯ, ಒಂದು ರಾತ್ರಿಯಲ್ಲಿ ಅಮಾನುಷ ಹತ್ಯೆಯಾಗಿ ಮುಕ್ತಾಯಗೊಂಡಿರುವುದು ನಾಗರಿಕ ಸಮಾಜದ ಮನಸ್ಸನ್ನು ಆಳವಾಗಿ ಕಲುಷಿತಗೊಳಿಸಿದೆ.**

ಸಿಲಿಕಾನ್ ಸಿಟಿ ಬೆಂಗಳೂರು ಮತ್ತೊಮ್ಮೆ ಮಾನವೀಯತೆ ಮರೆತ ಭೀಕರ ಅಪರಾಧ ಘಟನೆಯಿಂದ ತಲ್ಲಣಗೊಂಡಿದೆ. ಶೀಲ ಶಂಕೆಯೆಂಬ ವಿಷಕಾರಿ ಮನಸ್ಥಿತಿ ಹೇಗೆ ಒಂದು ಶಾಂತ ಕುಟುಂಬವನ್ನು ಸಂಪೂರ್ಣವಾಗಿ ನಾಶ ಮಾಡಬಲ್ಲದು ಎಂಬುದಕ್ಕೆ ಈ ಪ್ರಕರಣ ಕಹಿಯಾದ ಉದಾಹರಣೆಯಾಗಿದೆ. ಗೋವಿಂದರಾಜನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ತಡರಾತ್ರಿ ಸಂಭವಿಸಿದ ಈ ಅಮಾನುಷ ಕೃತ್ಯ, ನಾಗರಿಕ ಸಮಾಜದ ಮನಸ್ಸಿನಲ್ಲಿ ಭೀತಿ, ಆಕ್ರೋಶ ಹಾಗೂ ಆಳವಾದ ಪ್ರಶ್ನೆಗಳನ್ನೆಬ್ಬಿಸಿದೆ. ದಶಕಗಳ ದಾಂಪತ್ಯ ಜೀವನ ನಡೆಸಿದ್ದ ವೃದ್ಧ ದಂಪತಿಯ ನಡುವೆ ಬೆಳೆದ ಅನುಮಾನ, ಕೊನೆಗೆ ನಿದ್ರಿಸುತ್ತಿದ್ದ ಪತ್ನಿಯ ಕ್ರೂರ ಹತ್ಯೆಗೆ ಕಾರಣವಾಗಿರುವುದು ಎಲ್ಲರನ್ನೂ ಬೆಚ್ಚಿಬೀಳಿಸಿದೆ.


ಕೊಲೆಯಾದ ದೇವಿಕಾ

ಪೊಲೀಸರ ಮಾಹಿತಿ ಪ್ರಕಾರ, 65 ವರ್ಷದ ಕುಮಾರ್ ಎಂಬ ವ್ಯಕ್ತಿ ತನ್ನ 57 ವರ್ಷದ ಪತ್ನಿ ದೇವಿಕಾ ಅವರ ಶೀಲದ ಬಗ್ಗೆ ಸಂಶಯಪಟ್ಟು, ನಿದ್ರೆಯಲ್ಲಿದ್ದಾಗಲೇ ಮಚ್ಚಿನಿಂದ ಏಕಾಏಕಿ ಹಲ್ಲೆ ನಡೆಸಿ ಹತ್ಯೆಗೈದಿದ್ದಾನೆ. ಹಲವು ವರ್ಷಗಳಿಂದ ಗೋವಿಂದರಾಜನಗರದಲ್ಲಿ ವಾಸವಾಗಿದ್ದ ಈ ದಂಪತಿ, ಹೊರನೋಟಕ್ಕೆ ಸಾಮಾನ್ಯ ಮತ್ತು ಶಾಂತ ಕುಟುಂಬದಂತೆ ಕಾಣಿಸಿಕೊಂಡಿದ್ದರು. ಯಾವುದೇ ದೊಡ್ಡ ಕಲಹ ಅಥವಾ ಗೃಹ ಕಲಹದ ಮಾಹಿತಿ ನೆರೆಹೊರೆಯವರಿಗೆ ತಿಳಿದಿರಲಿಲ್ಲ. ಆದರೆ ಆಂತರಿಕವಾಗಿ ಬೆಳೆದ ಶಂಕೆಯ ಬೀಜ, ಕಾಲಕ್ರಮೇಣ ಭಯಾನಕ ವೃಕ್ಷವಾಗಿ ಬೆಳೆದು, ಕೊನೆಗೆ ಒಬ್ಬ ಮಹಿಳೆಯ ಅಮೂಲ್ಯ ಜೀವವನ್ನು ಬಲಿ ಪಡೆದಿದೆ.

ಘಟನೆ ನಡೆದ ರಾತ್ರಿ ಸುಮಾರು 12.45ರ ವೇಳೆಗೆ, ಮನೆಯಲ್ಲಿ ಎಲ್ಲರೂ ನಿದ್ರಿಸುತ್ತಿದ್ದ ಸಂದರ್ಭದಲ್ಲೇ ಆರೋಪಿಯು ಈ ಕೃತ್ಯ ಎಸಗಿದ್ದಾನೆ. ನಿದ್ರೆಯಲ್ಲಿದ್ದ ದೇವಿಕಾ ಅವರಿಗೆ ತಪ್ಪಿಸಿಕೊಳ್ಳಲು ಅಥವಾ ಸಹಾಯಕ್ಕೆ ಕಿರುಚಲು ಕೂಡ ಅವಕಾಶ ಸಿಗದಂತೆ, ಮಚ್ಚಿನಿಂದ ನಿರಂತರವಾಗಿ ಹಲ್ಲೆ ನಡೆಸಲಾಗಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ತೀವ್ರ ಗಾಯಗಳಿಂದಾಗಿ ಅಪಾರ ರಕ್ತಸ್ರಾವವಾಗಿದ್ದು, ಸ್ಥಳದಲ್ಲೇ ಅವರು ಮೃತಪಟ್ಟಿದ್ದಾರೆ. ಮನೆಯಲ್ಲಿ ಹರಡಿದ್ದ ರಕ್ತದ ಮಡುವು ಬೆಳಗಿನ ಜಾವ ಸ್ಥಳೀಯರನ್ನು ಬೆಚ್ಚಿಬೀಳುವಂತೆ ಮಾಡಿದೆ.

**ಬೆಂಗಳೂರು**

ಪೊಲೀಸ್ ತನಿಖೆಯಲ್ಲಿ ಹೊರಬಂದ ಮಹತ್ವದ ಅಂಶಗಳ ಪ್ರಕಾರ, ಈ ದಂಪತಿ ಇತ್ತೀಚೆಗೆ ಕುಟುಂಬದ ಸದಸ್ಯರೊಂದಿಗೆ ಕೇರಳ ಪ್ರವಾಸಕ್ಕೆ ತೆರಳಿದ್ದರು. ಆ ಪ್ರವಾಸದ ಸಂದರ್ಭ, ದೇವಿಕಾ ಅವರು ವಾಹನ ಚಾಲಕರೊಂದಿಗೆ ಮಾತನಾಡಿದ್ದನ್ನು ಕುಮಾರ್ ಗಮನಿಸಿದ್ದಾನೆ. ಸಾಮಾನ್ಯ ಹಾಗೂ ಸೌಜನ್ಯಪೂರ್ಣ ಸಂಭಾಷಣೆಯನ್ನೇ ಆಧಾರವಾಗಿಸಿಕೊಂಡು, ಯಾವುದೇ ದೃಢ ಸಾಕ್ಷ್ಯವಿಲ್ಲದೆ, ಆಕೆಯ ಶೀಲದ ಬಗ್ಗೆ ಆತನ ಮನಸ್ಸಿನಲ್ಲಿ ಸಂಶಯ ಹುಟ್ಟಿಕೊಂಡಿದೆ ಎನ್ನಲಾಗಿದೆ. ಪ್ರವಾಸದ ಅವಧಿಯಿಡೀ ಈ ಅನುಮಾನ ಆತನನ್ನು ಕಾಡುತ್ತಿದ್ದು, ಪತ್ನಿಯ ಪ್ರತಿಯೊಂದು ನಡೆನುಡಿಯನ್ನು ಶಂಕೆಯ ಕಣ್ಣಿನಿಂದಲೇ ನೋಡುತ್ತಿದ್ದನೆಂಬ ಮಾಹಿತಿ ಪೊಲೀಸರಿಗೆ ಲಭ್ಯವಾಗಿದೆ.

ಪ್ರವಾಸ ಮುಗಿಸಿ ಮನೆಗೆ ಮರಳಿದ ನಂತರವೂ ಈ ಸಂಶಯ ಕಡಿಮೆಯಾಗದೇ, ಇನ್ನಷ್ಟು ತೀವ್ರಗೊಂಡಿದೆ ಎಂದು ತಿಳಿದುಬಂದಿದೆ. ಪತಿಪತ್ನಿಯ ನಡುವೆ ಮಾತಿನ ಚಕಮಕಿ, ಅಸಮಾಧಾನ ಉಂಟಾಗಿರುವ ಸಾಧ್ಯತೆ ಇದೆ ಎಂದು ಪೊಲೀಸರು ಶಂಕಿಸಿದ್ದಾರೆ. ಆದರೆ ಈ ವಿಚಾರವನ್ನು ಕುಟುಂಬದ ಹೊರಗಿನವರೊಂದಿಗೆ ಹಂಚಿಕೊಳ್ಳದೆ, ಒಳಗೊಳಗೇ ಕುದಿಯುತ್ತಿದ್ದ

☞ 12

# ಪತ್ನಿಯನ್ನು ಉಸಿರುಗಟ್ಟಿಸಿ ಕೊಂದ ನಿವೃತ್ತ ಇಸ್ರೋ ನೌಕರ!

6 ☜

ವೈದ್ಯರು ಪರಿಶೀಲನೆ ನಡೆಸಿದ ಬಳಿಕ ಆಕೆ ಮೃತಪಟ್ಟಿರುವುದನ್ನು ದೃಢಪಡಿಸಿದರು. ಮನೆಯೊಳಗಿನ ಪರಿಸ್ಥಿತಿ, ಹಾಸಿಗೆ ಕೋಣೆಯ ಅಸ್ತವ್ಯಸ್ತತೆ ಮತ್ತು ದೇಹದ ಮೇಲೆ ಕಂಡುಬಂದ ಗಾಯದ ಗುರುತುಗಳು ಇದು ಸಹಜ ಸಾವು ಅಲ್ಲ ಎಂಬುದನ್ನು ಸ್ಪಷ್ಟಪಡಿಸಿತು.

ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ಪ್ರಾಥಮಿಕ ವಿಚಾರಣೆ ನಡೆಸಿದ ವೇಳೆ ಆತ ಆತಂಕಕಾರಿ ಹಾಗೂ ವಿಚಿತ್ರ ಹೇಳಿಕೆ ನೀಡಿದ್ದಾನೆ. 'ನಾನು ವೃದ್ಧನಾಗಿದ್ದೇನೆ. ನಾನು ಸತ್ತ ನಂತರ ನನ್ನ ಹೆಂಡತಿಯನ್ನು ನೋಡಿಕೊಳ್ಳುವವರು ಯಾರು? ಆಕೆಗೆ ಯಾರೂ ಸಂಬಂಧಿಕರು ಇಲ್ಲ. ಮುಂದೆ ಅವಳು ಹೇಗೆ ಬದುಕುತ್ತಾಳೆ ಎಂಬ ಭಯದಿಂದಲೇ ಈ ಕೃತ್ಯ ಮಾಡಿದೆ' ಎಂದು ಆರೋಪಿ ಹೇಳಿಕೆ ನೀಡಿದ್ದಾನೆ. ಈ ಹೇಳಿಕೆ ಕೇಳಿ ವಿಚಾರಣೆ ನಡೆಸುತ್ತಿದ್ದ ಅಧಿಕಾರಿಗಳೂ ಕೆಲಕಾಲ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಆದರೆ ಆರೋಪಿಯ ಈ ಹೇಳಿಕೆಗೆ ವಿರುದ್ಧವಾದ ಅಂಶಗಳು ಶೀಘ್ರದಲ್ಲೇ ಬೆಳಕಿಗೆ ಬಂದಿವೆ. ದಂಪತಿಗೆ ಒಬ್ಬ ಮಗಳು ಇದ್ದು, ಆಕೆ ಪ್ರಸ್ತುತ ಅಮೆರಿಕಾದಲ್ಲಿ ವಾಸಿಸುತ್ತಿದ್ದಾಳೆ ಎಂಬ ಮಾಹಿತಿ ಪೊಲೀಸರಿಗೆ ಲಭ್ಯವಾಗಿದೆ. ಇದರಿಂದ ಆರೋಪಿ ನೀಡಿರುವ ಹೇಳಿಕೆ ಸಂಪೂರ್ಣ ಸತ್ಯವೋ ಅಥವಾ ತನಿಖೆಯನ್ನು ದಾರಿ ತಪ್ಪಿಸುವ ಪ್ರಯತ್ನವೋ ಎಂಬ ಅನುಮಾನಗಳು ಮೂಡಿವೆ. ಈ ಹಿನ್ನೆಲೆ ಪೊಲೀಸರು ಪ್ರಕರಣವನ್ನು ಎಲ್ಲಾ ಆಯಾಮಗಳಿಂದ ತನಿಖೆ ನಡೆಸುತ್ತಿದ್ದಾರೆ.

ಪೊಲೀಸರ ಪ್ರಕಾರ, ವಿಚಾರಣೆ ವೇಳೆ ಆರೋಪಿ ನಾಗಲೇಶ್ವರರಾವ್ ಅಸಹಜವಾಗಿ ವರ್ತನೆ ಮಾಡುತ್ತಿದ್ದಾನೆ. ಕೆಲವೊಮ್ಮೆ ಅತಿಯಾಗಿ ಮೌನವಾಗಿರುವುದು, ಮತ್ತೆ ಕೆಲವೊಮ್ಮೆ ಭಾವನಾತ್ಮಕವಾಗಿ ಮಾತನಾಡುವುದು ಗಮನಕ್ಕೆ ಬಂದಿದೆ. ಇದರಿಂದ ಆತನ ಮಾನಸಿಕ ಸ್ಥಿತಿಯ ಬಗ್ಗೆ ಅನುಮಾನಗಳು ವ್ಯಕ್ತವಾಗಿವೆ. ಆದರೂ ಕೇವಲ ವರ್ತನೆಯ ಆಧಾರದಲ್ಲಿ ತೀರ್ಮಾನ ಕೈಗೊಳ್ಳಲಾಗುವುದಿಲ್ಲ ಎಂದು ಪೊಲೀಸರು ಸ್ಪಷ್ಟಪಡಿಸಿದ್ದು, ವೈದ್ಯಕೀಯ ಪರೀಕ್ಷೆ ಮತ್ತು ಕಾನೂನು ಪ್ರಕ್ರಿಯೆಗಳ ಬಳಿಕವೇ ಆತನ ಮಾನಸಿಕ ಸ್ಥಿತಿ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ಉಸಿರುಗಟ್ಟಿದ ಪರಿಣಾಮವೇ ಸಾವು ಸಂಭವಿಸಿರುವುದೇ ಎಂಬುದನ್ನು ವೈದ್ಯಕೀಯ ವರದಿ ದೃಢಪಡಿಸಲಿದೆ. ಜೊತೆಗೆ, ಘಟನಾ ಸ್ಥಳದಿಂದ ಲಭ್ಯ




ವಾದ ಸಾಕ್ಷ್ಯಾಧಾರಗಳು, ಫಾರೆನ್ಸಿಕ್ ವರದಿಗಳು ಮತ್ತು ನೆರೆಹೊರೆಯವರ ಹೇಳಿಕೆಗಳು ತನಿಖೆಗೆ ಪ್ರಮುಖವಾಗಲಿವೆ. ಅಪಾರ್ಟ್‌ಮೆಂಟ್‌ನ ಸಿಸಿಟಿವಿ ದೃಶ್ಯಾವಳಿಗಳನ್ನು ಕೂಡ ಪರಿಶೀಲಿಸಲಾಗುತ್ತಿದೆ. ಸ್ಥಳೀಯ ನಿವಾಸಿಗಳು ಈ ಘಟನೆಯಿಂದ ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ. 'ಇಂತಹ ಶಾಂತ ವ್ಯಕ್ತಿಯಿಂದ ಇಂತಹ ಕೃತ್ಯ ನಡೆಯುತ್ತದೆ ಎಂದು ನಾವು ಊಹಿಸಿರಲಿಲ್ಲ' ಎಂದು ನೆರೆಹೊರೆಯವರು ಹೇಳಿದ್ದಾರೆ. ನಿವೃತ್ತ ವಿಜ್ಞಾನಿ ಎಂಬ ಹಿನ್ನೆಲೆ ಹೊಂದಿದ್ದ ವ್ಯಕ್ತಿಯಿಂದ ನಡೆದ ಹತ್ಯೆ ಪ್ರಕರಣವು ಸಮಾಜದಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಮತ್ತೊಮ್ಮೆ ಚರ್ಚೆಗೆ ಕಾರಣವಾಗಿದೆ.

ಪ್ರಕರಣದ ಕಾನೂನು ಆಯಾಮಗಳನ್ನು ಗಮನಿಸಿದರೆ, ಇದು ಕೇವಲ ಗೃಹ ಕಲಹದ ಪ್ರಕರಣವಲ್ಲದೆ, ಪೂರ್ವನಿಯೋಜಿತ ಹತ್ಯೆಯೇ ಅಥವಾ ಕ್ಷಣಿಕ ಆಕ್ರೋಶದ ಫಲಿತಾಂಶವೇ ಎಂಬುದನ್ನು ತನಿಖೆ ನಿರ್ಧರಿಸಲಿದೆ. ಆರೋಪಿಯ ಹೇಳಿಕೆ, ಕುಟುಂಬದ ಹಿನ್ನೆಲೆ, ಆರ್ಥಿಕ ಸ್ಥಿತಿ ಮತ್ತು ದಾಂಪತ್ಯ ಸಂಬಂಧಗಳ ಇತಿಹಾಸ ಕರಣದ ಪ್ರತಿಯೊಂದು ಕೋನದಿಂದಲೂ ಪರಿಶೀಲನೆ ನಡೆಯುತ್ತಿದೆ.

ಸದ್ಯ ಆರೋಪಿ ನಾಗಲೇಶ್ವರರಾವ್ ಪೊಲೀಸ್ ವಶದಲ್ಲಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸುವ ಪ್ರಕ್ರಿಯೆ ನಡೆಯುತ್ತಿದೆ. ಪ್ರಕರಣದ ಗಂಭೀರತೆಯನ್ನು ಗಮನಿಸಿ ಪೊಲೀಸರು ಹೆಚ್ಚಿನ ತನಿಖೆಗೆ ಮುಂದಾಗಿದ್ದಾರೆ. ಈ ಮನಕಲಕುವ ಘಟನೆ ಮತ್ತೊಮ್ಮೆ ಕುಟುಂಬದೊಳಗಿನ ಮಾನಸಿಕ ಒತ್ತಡಗಳು ಎಷ್ಟು ಅಪಾಯಕಾರಿಯಾಗಬಹುದು ಎಂಬುದಕ್ಕೆ ಕಠಿಣ ಉದಾಹರಣೆಯಾಗಿದೆ.

# ಪತ್ನಿ ಕೊಲೆ ಮಾಡಿ ಮನೆ ಆವರಣದಲ್ಲೇ ಶವ ಹೂತ ಪತಿ! ತನಿಖೆ ವೇಳೆ ಬಯಲಾಯ್ತು ಹೆಂಡತಿ ನಾಪತ್ತೆ ನಾಟಕ



ಆರೋಪಿ ಪ್ರಭು ರತ್ನಾಕರ

**ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನಲ್ಲಿ ಮಾನವೀಯತೆಯನ್ನು ಬೆಚ್ಚಿಬೀಳಿಸುವಂತಹ ಭೀಕರ ಅಪರಾಧವೊಂದು ಬೆಳಕಿಗೆ ಬಂದಿದೆ. ಸಾಲದ ಒತ್ತಡ ಮತ್ತು ಗೃಹ ಕಲಹದ ಹಿನ್ನೆಲೆಯಲ್ಲಿ ಪತಿಯೇ ತನ್ನ ಪತ್ನಿಯನ್ನು ಕ್ರೂರವಾಗಿ ಕೊಂದು, ಶವವನ್ನು ಮನೆಯ ಆವರಣದಲ್ಲೇ ಹೂತುಹಾಕಿ, ಆಕೆ ನಾಪತ್ತೆಯಾಗಿದ್ದಾಳೆ ಎಂಬ ನಾಟಕವಾಡಿದ್ದಾನೆ. ಸುಮಾರು 24 ದಿನಗಳ ಕಾಲ ಪೊಲೀಸರ ಕಣ್ಣಿಗೆ ಮಣ್ಣು ಎರಚಲು ಯತ್ನಿಸಿದ ಈ ಪಾಪಿ ಪತಿಯ ನಿಜ ಸ್ವರೂಪ, ದೇವರಹಿಪ್ಪರಗಿ ಪೊಲೀಸರ ಸೂಕ್ಷ್ಮ ತನಿಖೆಯಿಂದ ಬಹಿರಂಗ ಗೊಂಡಿದ್ದು, ಪ್ರಕರಣವು ಜಿಲ್ಲೆಯಾದ್ಯಂತ ಭಾರೀ ಸಂಚಲನ ಮೂಡಿಸಿದೆ.**

ವಿಜಯಪುರ

✍ ವೀರನಗೌಡ

ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನಲ್ಲೊಂದು ಅತ್ಯಂತ ಭೀಕರ ಹಾಗೂ ಮಾನವೀಯತೆ ಕಳೆದುಕೊಂಡ ಅಪರಾಧ ಬೆಳಕಿಗೆ ಬಂದಿದೆ. ಸಾಲದ ವಿಚಾರವಾಗಿ ಉಂಟಾದ ಗೃಹ ಕಲಹದ ಹಿನ್ನೆಲೆಯಲ್ಲಿ ಪತಿಯೇ ತನ್ನ ಪತ್ನಿಯನ್ನು ಕ್ರೂರವಾಗಿ ಕೊಂದು, ಶವವನ್ನು ಮನೆಯ ಆವರಣದಲ್ಲೇ ಹೂತುಹಾಕಿ, ಆಕೆ ಕಾಣೆಯಾಗಿದ್ದಾಳೆ ಎಂಬ ನಾಟಕವಾಡಿದ್ದಾನೆ. ಈ ಭಯಾನಕ ಕೃತ್ಯವು ನಡೆದ ಸುಮಾರು 24 ದಿನಗಳ ನಂತರ ದೇವರಹಿಪ್ಪರಗಿ ಪೊಲೀಸರ ಸೂಕ್ಷ್ಮ ತನಿಖೆಯಿಂದ ಸತ್ಯಾಂಶ ಬಹಿರಂಗಗೊಂಡಿದ್ದು, ಆರೋಪಿ ಪತಿಯನ್ನು ಬಂಧಿಸಲಾಗಿದೆ. ಈ ಪ್ರಕರಣವು ಸ್ಥಳೀಯ ಜನತೆಯನ್ನು ಬೆಚ್ಚಿಬೀಳಿಸುವಂತೆ ಮಾಡಿದ್ದು, ಕುಟುಂಬದೊಳಗಿನ ಸಾಲದ ಒತ್ತಡ ಹೇಗೆ ಭೀಕರ ಅಂತ್ಯಕ್ಕೆ ಕಾರಣವಾಗಬಹುದು ಎಂಬುದಕ್ಕೆ ದುರಂತ ಉದಾಹರಣೆಯಾಗಿದೆ.



ಕೊಲೆಯಾದ ಸರೋಜಿನಿ

ಮೃತ ಮಹಿಳೆಯನ್ನು ದೇವರಹಿಪ್ಪರಗಿ ನಿವಾಸಿ ಸರೋಜಿನಿ ಪ್ರಭು ರತ್ನಾಕರ (44) ಎಂದು ಗುರುತಿಸಲಾಗಿದೆ. ಈಕೆಯ ಪತಿ ಪ್ರಭು ರತ್ನಾಕರ (46) ಈ ಕೊಲೆ ಪ್ರಕರಣದ ಪ್ರಮುಖ ಆರೋಪಿ. ಪ್ರಭು ವೃತ್ತಿಯಲ್ಲಿ ಗುತ್ತಿಗೆದಾರನಾಗಿದ್ದು, ಹಲವು ವರ್ಷಗಳಿಂದ ವಿವಿಧೆಡೆ ಕೈ ಸಾಲ ಮಾಡಿಕೊಂಡಿದ್ದ. ವ್ಯಾಪಾರ ಹಾಗೂ ವೈಯಕ್ತಿಕ ಅಗತ್ಯಗಳಿಗೆಂದು ಮಾಡಿಕೊಂಡ ಸಾಲವು ಕಾಲಕ್ರಮೇಣ ಅಪಾರ ಪ್ರಮಾಣಕ್ಕೆ ತಲುಪಿದ್ದು, ಸಾಲಗಾರರ ಒತ್ತಡ ದಿನದಿಂದ ದಿನಕ್ಕೆ ಹೆಚ್ಚಾಗಿತ್ತು. ಸಾಲ ತೀರಿಸಲು ಸಾಧ್ಯವಾಗದೆ, ಆರೋಪಿ ತನ್ನ ಪತ್ನಿಯ ಹೆಸರಿನಲ್ಲಿ ಚೆಕ್‌ಗಳನ್ನು ನೀಡಿದ್ದಾನೆ. ಈ ಸಂಬಂಧ ಚೆಕ್ ಬೌನ್ಸ್ ಪ್ರಕರಣವೂ ನ್ಯಾಯಾಲಯದಲ್ಲಿ ದಾಖಲಾಗಿದ್ದು, ಇದರಿಂದ ಕುಟುಂಬದಲ್ಲಿ ನಿರಂತರ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಸಾಲದ ಹೊರೆ ಹೆಚ್ಚಾದಂತೆ ಪತಿಪತ್ನಿಯ ನಡುವೆ ಆಗಾಗ ತೀವ್ರ ವಾಗ್ವಾದಗಳು ನಡೆಯುತ್ತಿದ್ದವು. ಹಣವನ್ನು ತೀರಿಸುವಂತೆ ಸರೋಜಿನಿ ತನ್ನ ಪತಿಯನ್ನು ಒತ್ತಾಯಿಸುತ್ತಿದ್ದಳು. ಇದರಿಂದ ಕೋಪಗೊಂಡ ಪ್ರಭು, ಆಕೆಯೊಂದಿಗೆ ನಿರಂತರ ಜಗಳ ಮಾಡುತ್ತಿದ್ದ ಎನ್ನಲಾಗಿದೆ. ಇದೇ ವೈಮನಸ್ಸು ಕೊನೆಗೂ ಭೀಕರ ಅಪರಾಧಕ್ಕೆ ದಾರಿ ಮಾಡಿಕೊಟ್ಟಿದೆ. ಜನವರಿ 24ರ ರಾತ್ರಿ ಪತಿ ಪತ್ನಿಯ ನಡುವೆ ಸಾಲದ ವಿಚಾರವಾಗಿ ಮತ್ತೆ ಜಗಳ ಉಂಟಾಗಿದ್ದು, ಕೋಪದ ಭರದಲ್ಲಿ ಪ್ರಭು, ಮನೆಯಲ್ಲಿದ್ದ ಖಾರ ಕುಟ್ಟುವ ಹಾರೆಯಿಂದ ಪತ್ನಿಯ ತಲೆಗೆ ಬಲವಾಗಿ ಹೊಡೆದಿದ್ದಾನೆ. ತೀವ್ರ ಗಾಯಗೊಂಡ ಸರೋಜಿನಿ ಸ್ಥಳದಲ್ಲೇ ರಕ್ತಸ್ರಾವದಿಂದ ಮೃತಪಟ್ಟಿದ್ದಾಳೆ.

ಪತ್ನಿಯ ಸಾವಿನ ಬಳಿಕ ಭಯಗೊಂಡ ಆರೋಪಿ, ತನ್ನ ಅಪರಾಧವನ್ನು ಮುಚ್ಚಿಹಾಕಲು ಮತ್ತೊಂದು ಭೀಕರ ನಿರ್ಧಾರ ಕೈಗೊಂಡಿದ್ದಾನೆ. ಮನೆಯ ಆವರಣದಲ್ಲೇ ಗುಂಡಿ ತೋಡಿ, ಪತ್ನಿಯ ಶವವನ್ನು ಅಲ್ಲಿ ಹೂತು ಹಾಕಿದ್ದಾನೆ. ನಂತರ ಯಾವುದೇ ಅನುಮಾನ ಮೂಡದಂತೆ ದಿನನಿತ್ಯದ ಬದುಕನ್ನು ಮುಂದುವರಿಸಿದ್ದಾನೆ. ಕೆಲವು ದಿನಗಳ ಬಳಿಕ, ಫೆಬ್ರವರಿ 2ರಂದು ದೇವರಹಿಪ್ಪರಗಿ ಪೊಲೀಸ್ ಠಾಣೆಗೆ ತೆರಳಿ, ತನ್ನ ಪತ್ನಿ ಕಿರಾಣಿ ಅಂಗಡಿಗೆ ಹೋಗಿ ಬರುವೆ ಎಂದು ಹೊರಹೋದ ಬಳಿಕ ಮರಳಿ ಬಂದಿಲ್ಲ ಎಂದು ದೂರು ನೀಡಿದ್ದಾನೆ. ಎಲ್ಲಾ ಕಡೆ ಹುಡುಕಾಡಿದ್ದೇನೆ, ನೆಂಟರಿಷ್ಟರ ಮನೆಗಳಿಗೂ ವಿಚಾರಿಸಿದ್ದೇನೆ, ಆದರೆ ಪತ್ನಿಯ ಸುಳಿವು ಸಿಕ್ಕಿಲ್ಲ ಎಂದು ಪೊಲೀಸರಿಗೆ ತಿಳಿಸಿದ್ದಾನೆ.

ಅಷ್ಟೇ ಅಲ್ಲದೆ, ಪತ್ನಿಯ ತವರು ಮನೆಯವರು ಹಾಗೂ ಸಂಬಂಧಿಕರೊಂದಿಗೆ ಸೇರಿಕೊಂಡು ಹುಡುಕಾಟ ನಡೆಸುವ ನಾಟಕವನ್ನೂ ಆರೋಪಿ ಆಡಿದ್ದಾನೆ. ಸಾರ್ವಜನಿಕವಾಗಿ ದುಃಖಿತನಂತೆ ವರ್ತಿಸಿ, ಪತ್ನಿಯ ನಾಪತ್ತೆ ಪ್ರಕರಣದಲ್ಲಿ ಸಹಾನುಭೂತಿ ಗಳಿಸಲು ಯತ್ನಿಸಿದ್ದಾನೆ. ಆರಂಭದಲ್ಲಿ ಪ್ರಕರಣವನ್ನು ನಾಪತ್ತೆ ಪ್ರಕರಣವಾಗಿ ದಾಖಲಿಸಿಕೊಂಡ ಪೊಲೀಸರು, ವಿವಿಧ ಕೋನಗಳಿಂದ ತನಿಖೆ ಆರಂಭಿಸಿದರು. ಆದರೆ ದಿನ ಗಳು ಕಳೆದಂತೆ, ಆರೋಪಿ ನೀಡುತ್ತಿದ್ದ ಹೇಳಿಕೆಗಳಲ್ಲಿ ವ್ಯತ್ಯಾಸಗಳು ಕಾಣಿಸಿಕೊಂಡವು. ಈತನ ವರ್ತನೆ ಮತ್ತು ಹೇಳಿಕೆಗಳು ಪೊಲೀಸರಲ್ಲಿ ಅನುಮಾನ ಹುಟ್ಟುವಂತೆ ಮಾಡಿದ್ದವು.



ಪೊಲೀಸರು ತೀವ್ರ ವಿಚಾರಣೆ ನಡೆಸಿದಾಗ ಆರೋಪಿ ಕೊನೆಗೂ ಸತ್ಯ ಒಪ್ಪಿಕೊಂಡಿದ್ದಾನೆ. ತಾನೇ ಪತ್ನಿಯನ್ನು ಕೊಂದಿರುವುದಾಗಿ ಹಾಗೂ ಶವವನ್ನು ಮನೆಯ ಆವರಣದಲ್ಲಿ ಹೂತು ಹಾಕಿರುವುದಾಗಿ ತಿಳಿಸಿದ್ದಾನೆ. ಆರೋಪಿ ನೀಡಿದ ಮಾಹಿತಿಯ ಆಧಾರದಲ್ಲಿ ಪೊಲೀಸರು ಸ್ಥಳಕ್ಕೆ ತೆರಳಿ, ಹೂತಿದ್ದ ಶವವನ್ನು ಹೊರತೆಗೆದಿದ್ದಾರೆ. ನಂತರ ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಮೃತದೇಹವನ್ನು ಸರೋಜಿನಿಯ ತವರು ಮನೆಯವರಿಗೆ ಹಸ್ತಾಂತರಿಸಲಾಗಿದೆ.

ಈ ಪ್ರಕರಣವು ಸಮಾಜದಲ್ಲಿ ಭಾರೀ ಆಘಾತ ಮೂಡಿಸಿದ್ದು, ಸಾಲದ ಒತ್ತಡ ಹಾಗೂ ಗೃಹ ಕಲಹಗಳು ಎಂತಹ ಭೀಕರ ಪರಿಣಾಮಕ್ಕೆ ದಾರಿ ಮಾಡಿಕೊಡಬಹುದು ಎಂಬುದನ್ನು ತೋರಿಸಿದೆ. ದೇವರಹಿಪ್ಪರಗಿ ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಕೈಗೆತ್ತಿಕೊಂಡು, ಶೀಘ್ರವಾಗಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿ ಪ್ರಭು ರತ್ನಾಕರ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಈ ದಾರುಣ ಘಟನೆಯು ಕುಟುಂಬ ಮೌಲ್ಯಗಳು, ಹಣಕಾಸು ಜವಾಬ್ದಾರಿ ಹಾಗೂ ಮಾನವೀಯತೆಯ ಮಹತ್ವವನ್ನು ಮತ್ತೆ ನೆನಪಿಸುವಂತಾಗಿದೆ. ☯

# ಸಿಎಂ ಸಿದ್ದರಾಮಯ್ಯಗೆ ವಿರೋಧಿಗಳು ಯಾರು?

9 ☞

ಜಾತಿಗಳಿಗೆ ಸ್ವಾಭಿಮಾನದ ದೀಕ್ಷೆ ಕೊಟ್ಟು ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಸುವ ಪ್ರಯತ್ನ ಮಾಡಿದ್ದರು. ಈ ಕಾರಣಕ್ಕಾಗಿ ಅವರನ್ನು ವ್ಯವಸ್ಥಿತ ಸಂಚಿನ ಮೂಲಕ ಮುಗಿಸಲಾಯಿತು.

ಈಗ ರಾಹುಲ್ ಗಾಂಧಿಯವರ ವಿರುದ್ಧವೂ ಸಂಚು ನಡೆಯುತ್ತಿದೆ. ಯಾವಾಗ ರಾಹುಲ್ ಗಾಂಧಿಯವರು ಜಾತಿ, ಮತ, ಪಂಥ, ವರ್ಗವನ್ನು ಮೀರಿ ಎಲ್ಲ ಭಾರತೀಯರನ್ನು ಜೋಡಿಸುವ ಕೆಲಸ ಶುರು ಮಾಡಿದರೋ, ಯಾವಾಗ ಅವರು ಸಾಮಾಜಿಕ ನ್ಯಾಯದ ಪ್ರಶ್ನೆಗಳನ್ನು ಎತ್ತಲು ಶುರುಮಾಡಿದರೋ, ಯಾವಾಗ ಅವರು ಜಾತಿಗಣತಿ ಬಗ್ಗೆ, ಮೀಸಲಾತಿ ಹೆಚ್ಚಳದ ಬಗ್ಗೆ ದನಿ ಎತ್ತಲು ಪ್ರಾರಂಭಿಸಿದರೋ ಅಂದಿನಿಂದ ಅವರನ್ನು ಹಣಿಯುವ ಕೆಲಸ ಜೋರಾಗಿ ನಡೆಯುತ್ತಿದೆ.

ಕಾಲ ಬದಲಾಗಿದೆ, ನಾವು ಮನುವಿನ ಕಾಲದಲ್ಲಿಯೂ ಇಲ್ಲ, ರಾಜಮಹಾರಾಜರ ಗುಲಾಮರೂ ಅಲ್ಲ. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ನಮಗಿರುವ ದೊಡ್ಡ ರಕ್ಷಣೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನ. ನನ್ನ ನಾಲ್ಕು ದಶಕಗಳ ರಾಜಕೀಯ ಜೀವನ ಎಂದಿಗೂ ಹೂವಿನ ಹಾಸಿಗೆ ಆಗಿರಲಿಲ್ಲ, ಅದು ಕಲ್ಲು ಮುಳ್ಳುಗಳ ಹಾದಿಯಾಗಿತ್ತು. ನನ್ನನ್ನು ರಾಜಕೀಯವಾಗಿ ಮುಗಿಸಲು ಹಲವಾರು ದೊಡ್ಡ ದೊಡ್ಡ ನಾಯಕರು ಹಲವಾರು ಬಗೆಯ ಕುಟಿಲ ಕಾರಸ್ತಾನಗಳನ್ನು ಮಾಡಿದ್ದಾರೆ. ಅವುಗಳನ್ನೆಲ್ಲವನ್ನೂ ಜನತೆಯ ಆಶೀರ್ವಾದದಿಂದ ಗೆದ್ದು ಬಂದಿದ್ದೇನೆ.



ಇದು ನನ್ನ ವಿರುದ್ಧ ನಡೆಯುತ್ತಿರುವ ಷಡ್ಯಂತ್ರಗಳಲ್ಲ, ಇದು ನನ್ನನ್ನು ನಂಬಿರುವ, ಪ್ರೀತಿಸುತ್ತಿರುವ, ನನಗೆ ನಿರಂತರವಾಗಿ ಆಶೀರ್ವಾದ ನೀಡಿ ಬೆಂಬಲಿಸುತ್ತಿರುವ ನಿಮ್ಮ ವಿರುದ್ಧ ನಡೆಯುತ್ತಿರುವ ಷಡ್ಯಂತ್ರ ಎನ್ನುವುದು ನನಗೆ ಚೆನ್ನಾಗಿ ಗೊತ್ತು. ಆದ್ದರಿಂದ ನನ್ನ ಉಸಿರು ಇರುವ ವರೆಗೆ ಈ ರಾಜಕೀಯ ಷಡ್ಯಂತ್ರ, ದ್ವೇಷ ಅಸೂಯೆಯ ರಾಜಕಾರಣದ ವಿರುದ್ಧ ಹೋರಾಡುತ್ತೇನೆ. ಇದು ಸತ್ಯ, ನ್ಯಾಯ ಮತ್ತು ಧರ್ಮಕ್ಕಾಗಿ ನಡೆಯುತ್ತಿರುವ ಹೋರಾಟ. ನಿಮ್ಮೆಲ್ಲರ ಬೆಂಬಲದೊಂದಿಗೆ ಈ ಹೋರಾಟವನ್ನು ನನ್ನ ಉಸಿರು ಇರುವ ವರೆಗೆ ನಡೆಸುತ್ತೇನೆ, ರಣರಂಗವನ್ನು ಬಿಟ್ಟು ಓಡಿ ಹೋಗುವ ಹೇಡಿ ನಾನಾಗಲಾರೆ.

ಸಿಎಂ ಸಿದ್ದರಾಮಯ್ಯನವರ ಪೋಸ್ಟ್‌ನ್ನು ಓದಿದ ಮೇಲೆ ಅವರ ವಿರೋಧಿಗಳು ಯಾರು ಎಂಬುದನ್ನು ನಿರ್ಧರಿಸುವುದು ಕಷ್ಟವೇ. ಆದರೆ ಅದನ್ನು ನಿಮಗೆ ಬಿಡಲಾಗಿದೆ. ಮುಖ್ಯವಾಗಿ ರಾಜ್ಯರಾಜಕೀಯವನ್ನು ಗಮನಿಸುವಾಗ ಸಿದ್ದರಾಮಯ್ಯ ಅವರ ಆಡಳಿತದ ವಿರುದ್ಧ ವಿಪಕ್ಷಗಳು ಹೋರಾಟ ಮಾಡಿದ್ದಾರೆ. ಟೀಕೆ ಮಾಡಿದ್ದಾರೆ. ಆರೋಪಗಳನ್ನು ಮಾಡುತ್ತಲೇ ಬಂದಿದ್ದಾರೆ. ರಾಜೀನಾಮೆಗೂ ಆಗ್ರಹಿಸಿರಬಹುದು. ಆದರೆ ಇದು ಪ್ರಜಾಪ್ರಭುತ್ವದಲ್ಲಿ ಸಾಮಾನ್ಯವೇ. ಇದನ್ನು ಹಿಂದೆ ವಿಪಕ್ಷ ನಾಯಕರಾಗಿದ್ದಾಗ ಸಿದ್ದರಾಮಯ್ಯರವರೂ ಮಾಡಿದ್ದಾರೆ. ಆದರೆ ಸಿಎಂ ಸ್ಥಾನವನ್ನು ಬಿಟ್ಟುಕೊಡಿ ಅಂಥ ವಿಪಕ್ಷದವರು ಕೇಳುತ್ತಿಲ್ಲ.ಅದನ್ನು ಕೇಳುತ್ತಿರುವುದು ಅವರ ಪಕ್ಷದವರೇ. ಹಾಗಾದರೆ ಸಿಎಂ ಸಿದ್ದರಾಮಯ್ಯ ಅವರ ವಿರೋಧಿಗಳು ಯಾರು? ☯

# ಸೌಜನ್ಯ ಫೈಲ್ಸ್



20

ನಿರೂಪಣೆ :

**ಮೋಹನ್ ಬೋಳಂಗಡಿ**

# ಟಿವಿಯಲ್ಲಿ ನೋಡಿಯೇ ಗೊತ್ತಾಯಿತು ಸತ್ಯ!!

ಸೌಜನ್ಯ ಪ್ರಕರಣದ ವಿಚಾರಣೆಯಲ್ಲಿ 7ನೇಯ ಸಾಕ್ಷಿ ಶೃಂಗೇರಿಯ ಶಾರದಾ ಹೊಟೇಲಿನ ಸಪ್ಲೈಯರ್ ಬಾಲಕೃಷ್ಣ ಭಟ್. ಸೌಜನ್ಯ ಹಂತಕ ಸಂತೋಷ್‌ರಾವ್ ಶೃಂಗೇರಿಯ ಶಾರದಾ ಹೊಟೇಲಿನಲ್ಲಿ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದಾಗ ಜೊತೆಯಲ್ಲಿ ಸಪ್ಲೈಯರ್ ಆಗಿ ಕೆಲಸ ಮಾಡುತ್ತಿದ್ದವರು ಬಾಲಕೃಷ್ಣ ಭಟ್. ಸಂತೋಷ್‌ರಾವ್‌ನ ದಿನನಿತ್ಯದ ದಿನಚರಿಯ ಬಗ್ಗೆ ಸರಿಯಾಗಿಯೇ ತಿಳಿದುಕೊಂಡಿದ್ದವರು. ಸಂತೋಷ್‌ರಾವ್ ಧರ್ಮಸ್ಥಳ ಸಮೀಪದ ಮಣ್ಣಸಂಕ ಎಂಬಲ್ಲಿ ಸೌಜನ್ಯ ಎಂಬ 17 ವರ್ಷ ಪ್ರಾಯದ ಕಾಲೇಜು ವಿದ್ಯಾರ್ಥಿನಿಯನ್ನು ಅತ್ಯಾಚಾರ ನಡೆಸಿ ಕೊಲೆಗೈದು ಪೊಲೀಸರ ವಶದಲ್ಲಿ ಇದ್ದುದನ್ನು ಟಿವಿ ಪರದೆಯಲ್ಲಿ ನೋಡಿಯೇ ಶಾಕ್ ಆದವರು. ತನ್ನೊಂದಿಗೆ ಕೆಲಸ ಮಾಡುತ್ತಿದ್ದ ಯುವಕನೊಬ್ಬ ಇಂತಹ ಹೀನ ಕೃತ್ಯ ಮಾಡಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ ಎಂಬುದನ್ನು ತಕ್ಷಣಕ್ಕೆ ಒಪ್ಪಿಕೊಳ್ಳಲು ಬಾಲಕೃಷ್ಣ ಭಟ್ ಅವರಿಗೆ ಸಾಧ್ಯವಾಗಿರಲಿಲ್ಲ. ತನ್ನೊಂದಿಗೆ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಅನ್ಯ ಮನಸ್ಕನಾಗಿ ಇರುತ್ತಿದ್ದ ಸಂತೋಷ್‌ರಾವ್ ಇಂತಹ ಕೃತ್ಯ ನಡೆಸಿರಬಹುದು ಎಂಬ ವಿಶ್ವಾಸವೂ ಅವರಲ್ಲಿ ಇತ್ತು. ಬೆಳ್ತಂಗಡಿ ಪೊಲೀಸರು ಹೊಟೇಲಿಗೆ ಬಂದು ಸಂತೋಷ್‌ರಾವ್ ಬಗ್ಗೆ ವಿಚಾರಿಸಿದಾಗ ಆತನ ಬಗ್ಗೆ ಗೊತ್ತಿದ್ದಂತಹ ಸತ್ಯಗಳನ್ನು ಹೇಳಿದ್ದರು. ಪೊಲೀಸರು ಹೇಳಿಕೆ ಪಡೆದು ಕೊಂಡಿದ್ದರು. ತದನಂತರ ಸಿಓಡಿ ಮತ್ತು ಸಿಬಿಐ ಅಧಿಕಾರಿಗಳು ಹೊಟೇಲಿಗೆ ಭೇಟಿ ನೀಡಿ ಈ ಹಿಂದೆ ಕೊಟ್ಟಿದ್ದಂತಹ ಹೇಳಿಕೆಯನ್ನೇ ಮತ್ತೇ ವಿಚಾರಿಸಿದ್ದರು.

ಬಾಲಕೃಷ್ಣ ಭಟ್ ಅವರು ಬೆಂಗಳೂರಿನ 50ನೇ ಹೆಚ್ಚುವರಿ ನಗರ ಮತ್ತು ಸಿವಿಲ್ ನ್ಯಾಯಾಲಯದಲ್ಲಿ ಸೌಜನ್ಯ ಕೊಲೆ ಮತ್ತು ಅತ್ಯಾಚಾರ ಪ್ರಕರಣದ ಏಳನೇ ಸಾಕ್ಷಿಯಾಗಿ ಹೇಳಿಕೆ ದಾಖಲಿಸಿದ್ದರು. ಅವರ ಹೇಳಿಕೆಯ ಪ್ರಕಾರ ಅವರು ಶೃಂಗೇರಿ ಶಾರದಾ ಹೊಟೇಲಿನಲ್ಲಿ 5-6 ವರ್ಷಗಳಿಂದ ಸಪ್ಲೈಯರ್ ಆಗಿ ಕೆಲಸ ಮಾಡುತ್ತಿದ್ದರು. ಆ ಹೊಟೇಲಿನಲ್ಲಿ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ನಲ್ಲಿ ರವಿ ಎನ್ನುವ ವ್ಯಕ್ತಿ ಸಪ್ಲೈಯರ್ ಆಗಿ ಕೆಲಸ ಮಾಡುತ್ತಿದ್ದ. ಆತನ ನಿಜ ಹೆಸರು ಸಂತೋಷ್‌ರಾವ್ ಎಂಬುದಾಗಲಿ, ಆತ ಕಾರ್ಕಳದ ಕಕ್ಯುಂಡೂರಿನ ವ್ಯಕ್ತಿ ಎನ್ನುವುದಾಗಲೀ ಗೊತ್ತಿರಲಿಲ್ಲ. ಆತನ ಹೆಸರು ಸಂತೋಷ್‌ರಾವ್ ಎಂದು ಗೊತ್ತಾದದ್ದೇ ಸೌಜನ್ಯ ಪ್ರಕರಣದ ಬಗ್ಗೆ ಟಿವಿ ಮತ್ತು ದಿನಪತ್ರಿಕೆಗಳಲ್ಲಿ ವರದಿಗಳು ಹಾಗೂ ಭಾವಚಿತ್ರ ಪ್ರಕಟಗೊಂಡ ನಂತರವೇ ಎಂದು ಅವರು ತಿಳಿಸಿದರು. ಸಂತೋಷ್‌ರಾವ್ ಹೊಟೇಲ್‌ನ ಮೇಲಿನ ಕೊಠಡಿಯಲ್ಲಿ ವಾಸವಿದ್ದ. ಹೊಟೇಲಿನಲ್ಲಿ ಊಟದ ವ್ಯವಸ್ಥೆ ಇದ್ದರೂ ಆತ ಮಧ್ಯಾಹ್ನ ಮತ್ತು ರಾತ್ರಿ ಶೃಂಗೇರಿ ಮಠದ ಭೋಜನ ಶಾಲೆಗೆ ಊಟಕ್ಕೆ ಹೋಗುತ್ತಿದ್ದ. ಕೊನೆ ಕೊನೆಗೆ ಅಂದರೆ ಸೆಪ್ಟೆಂಬರ್ ತಿಂಗಳಲ್ಲಿ ಆತ ಸರಿಯಾಗಿ ಕೆಲಸ ಮಾಡದೇ ಇದ್ದುದರಿಂದ ಮಾಲೀಕರು ಆತನನ್ನು ಕೆಲಸದಿಂದ ಬಿಡಿಸಿದ್ದರು ಎಂದು ಬಾಲಕೃಷ್ಣ ಭಟ್ ಅವರು ಪ್ರಾಸಿಕ್ಯೂಷನ್ ಪರ ವಕೀಲರ ಪ್ರಶ್ನೆಗಳಿಗೆ ಉತ್ತರಿಸಿದರು.

ಸಂತೋಷ್‌ರಾವ್ ಹೊಟೇಲಿನಿಂದ ಕೆಲಸ ಬಿಟ್ಟ ನಂತರ ಆತನನ್ನು ಎಲ್ಲೂ ನೋಡಲಿಲ್ಲ. ಆತನನ್ನು ನೋಡಿದರೆ ಗುರುತಿಸಬಹುದು. ಸೌಜನ್ಯ ಹತ್ಯೆ ಮತ್ತು



ಆತನ ಬಂಧನದ ಬಗ್ಗೆ ಮಾಧ್ಯಮಗಳಿಂದ ಗಮನಕ್ಕೆ ಬಂತು. ಸಿಬಿಐ ಅಧಿಕಾರಿಗಳು ನಮ್ಮ ಹೊಟೇಲಿಗೆ ಬಂದು ಹೇಳಿಕೆ ಪಡೆದುಕೊಂಡಿದ್ದಾರೆ ಎಂದು ತಿಳಿಸಿದ ಬಾಲಕೃಷ್ಣ ಅವರು ನ್ಯಾಯಾಲಯದಲ್ಲಿ ಆರೋಪಿ ಕಟಕಟೆಯಲ್ಲಿ ನಿಂತಿದ್ದ ಸಂತೋಷ್‌ರಾವ್‌ನನ್ನು ಗುರುತಿಸಿ ಈತನೇ ನಾನು ಸಪ್ಲೈಯರ್ ಕೆಲಸ ಮಾಡುತ್ತಿದ್ದಂತಹ ಶಾರದಾ ಹೊಟೇಲಿನಲ್ಲಿ ಕ್ಲೀನರ್ ಕೆಲಸ ಮಾಡುತ್ತಿದ್ದ ಎಂದು ಗುರುತಿಸಿದರು.

ಆರೋಪಿ ಪರ ವಕೀಲರಾದ ಮೋಹಿತ್ ಕುಮಾರ್ ಅವರು ಸಾಕ್ಷಿದಾರ ಬಾಲಕೃಷ್ಣ ಭಟ್ ಅವರನ್ನು ಪಾಟೀ ಸವಾಲಿಗೆ ಗುರಿಪಡಿಸಿದರು. ಸಂತೋಷ್‌ರಾವ್ ನಾನು ಕೆಲಸ ಮಾಡುತ್ತಿದ್ದ ಹೊಟೇಲಿಗೆ ಕ್ಲೀನಿಂಗ್ ಕೆಲಸಕ್ಕೆ ಬಂದಾಗ ಆತನ ಬಗ್ಗೆ ಯಾವುದೇ ವಿಚಾರ ಮಾಡಿರಲಿಲ್ಲ. ಆತನ ವಿದ್ಯಾಭ್ಯಾಸದ ಬಗ್ಗೆ ನಾನು ತಿಳಿದುಕೊಳ್ಳಲಿಲ್ಲ. ಕೆಲಸ ಮಾಡುವಾಗ ಆತ ಅಸಭ್ಯ ವರ್ತನೆ ಮಾಡಿರಲಿಲ್ಲ. ಕೊನೆ ಕೊನೆಗೆ ಆತನಲ್ಲಿ ಕೆಲಸದ ಬಗ್ಗೆ ಆಸಕ್ತಿ ಕಡಿಮೆಯಾಯಿತು. ಆತ ಉಳಕೊಳ್ಳುತ್ತಿದ್ದಂತಹ ಹೊಟೇಲಿನ ಮೇಲ್ಗಡೆ ಇದ್ದಂತಹ ಕೊಠಡಿಗೆ ಹೋಗಿ ನೋಡಿರಲಿಲ್ಲ. ಸಂತೋಷ್‌ರಾವ್‌ಗೆ ಹೊಟೇಲ್ ನಲ್ಲಿ ಮಧ್ಯಾಹ್ನ 12.00 ಗಂಟೆಯಿಂದ 3.00 ಗಂಟೆಯವರೆಗೆ ಊಟದ ವಿಶ್ರಾಂತಿ ಇತ್ತು. ಆಗ ಆತ ಮಠಕ್ಕೆ ಹೋಗುತ್ತಿದ್ದ. ಆತ ಹೆಚ್ಚಾಗಿ ಯಾರ ಬಳಿಯೂ ಮಾತನಾಡುತ್ತಿರಲಿಲ್ಲ. ಸಂತೋಷ್‌ರಾವ್ ವಿರುದ್ಧ ಯಾವುದೇ ಸಾರ್ವಜನಿಕರು ಆತ ಅಸಭ್ಯ ರೀತಿಯಲ್ಲಿ ವರ್ತನೆ ಮಾಡುತ್ತಿದ್ದ ಎಂದು ದೂರು ಹೇಳಿರಲಿಲ್ಲ ಎಂದು ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಬಾಲಕೃಷ್ಣ ಭಟ್ ಉತ್ತರಿಸಿದರು.



ಸಂತೋಷ್ ರಾವ್

ಶಾರದಾ ಹೊಟೇಲಿನಲ್ಲಿ ಸಂತೋಷ್‌ರಾವ್ ಅಕ್ಟೋಬರ್ 2012 ರವರೆಗೆ ಕೆಲಸ ಮಾಡುತ್ತಿದ್ದ ಎಂಬುದು ಸರಿಯಲ್ಲ ಎಂದು ಸ್ಪಷ್ಟಪಡಿಸಿದ ಬಾಲಕೃಷ್ಣ ಭಟ್ ಅವರು ಸಂತೋಷ್‌ರಾವ್ ನಮ್ಮ ಹೊಟೇಲಿನ ಮಾಲೀಕರಾದ ಚಂದ್ರಶೇಖರ್ ಭಟ್ ಅವರಿಗೆ ನಾನು ಸುಬ್ರಹ್ಮಣ್ಯಕ್ಕೆ ಹೋಗುತ್ತೇನೆ ಎಂದು ಹೇಳಿ ಅಕ್ಟೋಬರ್ 10ರಂದು ಹೋಗಿದ್ದ ಎಂದರೆ ಸರಿಯಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿದರು. ಸಂತೋಷ್‌ರಾವ್‌ಗೆ ದಿನನಿತ್ಯ 80ರೂ. ಸಂಬಳ ಕೊಡುತ್ತಿದ್ದು ಆತ ಮಾಲೀಕ ಚಂದ್ರಶೇಖರ್ ಭಟ್‌ರೊಂದಿಗೆ ಯಾವುದೇ ಗಲಾಟೆ ಮಾಡುತ್ತಿರಲಿಲ್ಲ ಎಂದು ನ್ಯಾಯಾಲಯದ ಮುಂದೆ ಆರೋಪಿ ಪರ ವಕೀಲರ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.

ಶಾರದಾ ಹೊಟೇಲಿನ ಎದುರು ಎಸ್‌ಬಿಎಂ ಬ್ಯಾಂಕಿನ ಬ್ರಾಂಚ್ ಇದೆ. ಅದರಲ್ಲಿ ಸಿಸಿಟಿವಿ ಇರುತ್ತದೆ. ಆದರೆ ಆಗ ಸಿಸಿಟಿವಿ ಇರಲಿಲ್ಲ ಎಂದು ಹೇಳಿದ ಬಾಲಕೃಷ್ಣ ಭಟ್ ಅವರು ಸಂತೋಷ್‌ರಾವ್ 2010 ಅಕ್ಟೋಬರ್ ತಿಂಗಳವರೆಗೆ ಶಾರದಾ ಹೊಟೇಲಿನಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ ಎಂದು ಸ್ಪಷ್ಟಪಡಿಸಿದರು.

ಸಂತೋಷ್‌ರಾವ್ 2010 ಜುಲೈ ತಿಂಗಳಲ್ಲಿ ಶೃಂಗೇರಿಯ ಶಾರದಾ ಹೊಟೇಲಿಗೆ ಸಪ್ಲೈಯರ್ ಆಗಿ ಕೆಲಸಕ್ಕೆ ಸೇರಿದ್ದ. ಆ ಸಂದರ್ಭದಲ್ಲಿ ತನ್ನ ನಿಜ ಹೆಸರನ್ನು ಮರೆಮಾಚಿ ರವಿ ಎಂಬ ಹೆಸರಿನಲ್ಲಿ ಕೆಲಸಕ್ಕೆ ಸೇರಿದ್ದ. ಕೆಲಸಕ್ಕೆ ಸೇರುವ ಸಂದರ್ಭದಲ್ಲಿ ಆತ ತನ್ನ ವಿಳಾಸದ ದೃಢೀಕರಣಕ್ಕಾಗಿ ಯಾವುದೇ ದಾಖಲೆಗಳನ್ನು ನೀಡಿರಲಿಲ್ಲ ಎನ್ನುವುದು ಹೊಟೇಲಿನ ಮಾಲೀಕರ ಮಗ ಹಾಗೂ ಸಹೋದ್ಯೋಗಿಯ ವಿಚಾರಣೆಯಿಂದ ಸ್ಪಷ್ಟವಾಗಿತ್ತು. ಯಾವುದೇ ಒಬ್ಬ ವ್ಯಕ್ತಿ ಯಾವುದೋ ದುರುದ್ದೇಶವಿಲ್ಲದೇ ಜೀವನ ಉದ್ದೇಶದಿಂದ ಕೆಲಸಕ್ಕೆ ಸೇರುವಂತಹ ಸಂದರ್ಭದಲ್ಲಿ ತನ್ನ ನಿಜ ಹೆಸರನ್ನು ನೀಡುತ್ತಾನೆ. ಆದರೆ ಸಂತೋಷ್‌ರಾವ್ ಆ ಹೊಟೇಲಿನಲ್ಲಿ ಕೆಲಸಕ್ಕೆ ಸೇರುವ ಸಂದರ್ಭದಲ್ಲಿ ತನ್ನ ನಿಜ ಹೆಸರನ್ನು ಮರೆಮಾಚಿ ರವಿ ಎನ್ನುವ ಹೆಸರನ್ನು ಹೇಳಿರುವುದು ಆತನಲ್ಲಿ ದುಷ್ಕೃತ್ಯ ನಡೆಸುವ ಸಂಚು ಇತ್ತು ಎನ್ನುವುದಕ್ಕೆ ಸಾಕ್ಷಿಯಾಗುತ್ತಿದೆ. ಸಂತೋಷ್‌ರಾವ್ ಶೃಂಗೇರಿ ಪರಿಸರದಲ್ಲಿಯೇ ಇಂತಹ ಕೃತ್ಯ ನಡೆಸಲು ಉದ್ದೇಶಿಸಿದ್ದ ಎಂಬ ಬಗ್ಗೆಯೂ ಅನುಮಾನಗಳು ಹುಟ್ಟುತ್ತಿವೆ. ಆ ಹೊಟೇಲಿನಿಂದ ಕೆಲಸ ಬಿಟ್ಟ ನಂತರ ಸುಬ್ರಹ್ಮಣ್ಯಕ್ಕೆ ಹೋಗಿ ಅಲ್ಲಿಂದ ಪುತ್ತೂರಿಗೆ ಬಂದು ಅಲ್ಲಿ ವಿದ್ಯಾರ್ಥಿನಿಯೊಬ್ಬಳ ಮಾನಭಂಗಕ್ಕೆ ಯತ್ನಿಸಿ ಸಾರ್ವಜನಿಕರ ಕೈಗೆ ಸಿಕ್ಕಿಬಿದ್ದು, ಒದೆ ತಿಂದು ಪೊಲೀಸ್ ಠಾಣೆಗೆ ಹೋಗಿ ಬಿಡುಗಡೆಗೊಂಡ ಬಳಿಕ ನೇತ್ರಾವತಿ ಸ್ನಾನಘಟ್ಟದ ಬಳಿ ಬಂದು ಅಲ್ಲಿನ ಕಾಡ ಮಧ್ಯದಲ್ಲಿ ಟೆಂಟ್ ಹಾಕಿಕೊಂಡು ಇದ್ದ ಎನ್ನುವುದು ಪೊಲೀಸ್ ತನಿಖೆಯಲ್ಲಿ ಸಾಬೀತಾಗಿತ್ತು. ತದನಂತರ ಸೌಜನ್ಯಳನ್ನು ಅತ್ಯಾಚಾರ ಮಾಡಿ ಕೊಲೆಗೈದು ಪೊಲೀಸರ ಕೈಗೆ ಸಿಕ್ಕಿಹಾಕಿಕೊಂಡಿದ್ದ. ಆದರೂ ನ್ಯಾಯಾಲಯದಲ್ಲಿ ಸಾಕ್ಷ್ಯಾಧಾರಗಳ ಕೊರತೆಯಿಂದ ಆತ ಬಿಡುಗಡೆಗೊಂಡಿದ್ದ. ಇನ್ನಷ್ಟು ಸಾಕ್ಷಿಗಳ ವಿಚಾರಣೆಯ ವಿವರಗಳು ಮುಂದಿನ ವಾರಗಳಲ್ಲಿ.

**ಮುಂದುವರಿಯುವುದು.....**

---

10 ☞

ಕುಮಾರ್, ತನ್ನ ಕೋಪ ಹಾಗೂ ಅನುಮಾನವನ್ನು ನಿಯಂತ್ರಿಸಲು ಸಂಪೂರ್ಣವಾಗಿ ವಿಫಲನಾಗಿದ್ದಾನೆ. ಇದೇ ಮಾನಸಿಕ ಅಸ್ಥಿರತೆ, ಆತನನ್ನು ಕೊಲೆ ಎಂಬ ಭೀಕರ ನಿರ್ಧಾರಕ್ಕೆ ತಳ್ಳಿದೆ ಎಂದು ತನಿಖಾಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಘಟನೆಯ ಬಳಿಕ ಮಧ್ಯರಾತ್ರಿ ಯಾವುದೇ ದೊಡ್ಡ ಗದ್ದಲ ಅಥವಾ ಕಿರುಚಾಟ ಕೇಳಿಬಾರದ ಕಾರಣ, ಕೊಲೆ ನಡೆದ ವಿಷಯ ಬೆಳಗಿನ ಜಾವಕ್ಕೆ ಮಾತ್ರ ಬೆಳಕಿಗೆ ಬಂದಿದೆ ಎನ್ನಲಾಗಿದೆ. ಮನೆಯಲ್ಲಿ ರಕ್ತದ ಗುರುತುಗಳನ್ನು ಕಂಡ ಸ್ಥಳೀಯರು ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿದ ಕೂಡಲೇ ಗೋವಿಂದರಾಜನಗರ ಠಾಣೆಯ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ. ಹತ್ಯೆಗೆ ಬಳಸಿದ ಮಚ್ಚನ್ನು ವಶಕ್ಕೆ ಪಡೆಯಲಾಗಿದ್ದು, ವೈಜ್ಞಾನಿಕ ಪರೀಕ್ಷೆಗಾಗಿ ಕಳುಹಿಸಲಾಗಿದೆ.

ಪತ್ನಿಯನ್ನು ಹತ್ಯೆ ಮಾಡಿದ ನಂತರ ಆರೋಪಿ ಕುಮಾರ್ ತೀವ್ರ ಗಾಬರಿಗೊಂಡಿದ್ದು, ಆತ್ಮಹತ್ಯೆಗೆ ಯತ್ನಿಸಿದ್ದಾನೆ ಎಂಬ ಮಾಹಿತಿಯೂ ಲಭ್ಯವಾಗಿದೆ. ಆದರೆ ಸಮಯಕ್ಕೆ ಸರಿಯಾಗಿ ಸ್ಥಳೀಯರು ಮತ್ತು ಪೊಲೀಸರು ಮಧ್ಯಪ್ರವೇಶಿಸಿದ ಕಾರಣ, ಆತನ ಪ್ರಾಣ ಉಳಿದಿದೆ. ಪ್ರಾಥಮಿಕ ಚಿಕಿತ್ಸೆ ನೀಡಿದ ನಂತರ ಆತನನ್ನು ಪೊಲೀಸ್ ವಶಕ್ಕೆ ಪಡೆಯಲಾಗಿದ್ದು, ತೀವ್ರ ವಿಚಾರಣೆ ನಡೆಸಲಾಗುತ್ತಿದೆ. ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆಯ ಸಂಬಂಧಿತ ಗಂಭೀರ ಕಲಂಗಳು ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ದಾರುಣ ಘಟನೆ ಸ್ಥಳೀಯ ನಿವಾಸಿಗಳಲ್ಲಿ ಭಾರೀ ಆಘಾತ ಮತ್ತು ಆತಂಕವನ್ನು ಮೂಡಿಸಿದೆ. 'ಇಷ್ಟು ವರ್ಷಗಳ ದಾಂಪತ್ಯ ಜೀವನದ ನಂತರ ಕೇವಲ ಅನುಮಾನಕ್ಕೆ ಈ ರೀತಿ ಕೊಲೆ ನಡೆಯುತ್ತದೆ ಎನ್ನುವುದು ನಂಬಲು ಸಾಧ್ಯವಿಲ್ಲ' ಎಂದು ನೆರೆಹೊರೆಯವರು ಅಚ್ಚರಿ ಹಾಗೂ ದುಃಖ ವ್ಯಕ್ತಪಡಿಸಿದ್ದಾರೆ. ಶೀಲ ಶಂಕೆ ಎಂಬ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ಹಿಂಸಾಚಾರಕ್ಕೆ ಇದು ಮತ್ತೊಂದು ಉದಾಹರಣೆಯಾಗಿದ್ದು, ಮಹಿಳಾ ಸುರಕ್ಷತೆ, ಮಾನಸಿಕ ಆರೋಗ್ಯ ಮತ್ತು ಕುಟುಂಬ ಸಂಬಂಧಗಳ ಕುರಿತು ಗಂಭೀರ ಚರ್ಚೆಗೆ ಕಾರಣವಾಗಿದೆ.

ಪೊಲೀಸರು ಪ್ರಕರಣವನ್ನು ಎಲ್ಲಾ ಆಯಾಮಗಳಿಂದ ತನಿಖೆ ನಡೆಸುತ್ತಿದ್ದಾರೆ. ಆರೋಪಿಯ ಮಾನಸಿಕ ಸ್ಥಿತಿ, ದಾಂಪತ್ಯ ಜೀವನದ ಹಿನ್ನೆಲೆ, ಪ್ರವಾಸದ ಸಂದರ್ಭ ನಡೆದ ಘಟನೆಗಳು, ಕುಟುಂಬದ ಇತರ ಸದಸ್ಯರ ಹೇಳಿಕೆಗಳು ಸೇರಿದಂತೆ ಎಲ್ಲ ಅಂಶಗಳನ್ನು ಪರಿಶೀಲಿಸಲಾಗುತ್ತಿದೆ. ಕಾನೂನು ಕ್ರಮದ ಜೊತೆಗೆ, ಇಂತಹ ಘಟನೆಗಳು ಮರುಕಳಿಸದಂತೆ ಸಮಾಜದಲ್ಲೇ ಜಾಗೃತಿ ಮೂಡಿಸುವ ಅಗತ್ಯವಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಕೇವಲ ಸಂಶಯ ಮತ್ತು ಅಸಹನಶೀಲತೆ ಹೇಗೆ ಒಂದು ಅಮೂಲ್ಯ ಜೀವವನ್ನು ಕಸಿದುಕೊಳ್ಳಬಲ್ಲದು ಎಂಬುದಕ್ಕೆ ಈ ಪ್ರಕರಣ ನೋವಿನ, ಆದರೆ ಎಚ್ಚರಿಕೆಯ ಪಾಠವಾಗಿ ಪರಿಣಮಿಸಿದೆ.

# ಜಿಮ್ ಮತ್ತು ಡ್ಯಾನ್ಸ್ ತರಬೇತುದಾರರಿಂದ ಮಹಿಳೆಯರ ಶೋಷಣೆ!



**ಆರೋಗ್ಯ ಮತ್ತು ಫಿಟ್ನೆಸ್ ಎಂಬ ನಂಬಿಕೆಯಿಂದ ಮಹಿಳೆಯರು ಜಿಮ್ ಮತ್ತು ಡ್ಯಾನ್ಸ್ ತರಬೇತಿ ಕೇಂದ್ರಗಳಿಗೆ ಹೋಗುತ್ತಾರೆ, ಆದರೆ ಈ ಸುರಕ್ಷಿತವೆಂದು ಭಾಸವಾಗುವ ಸ್ಥಳಗಳಲ್ಲೇ ಕೆಲವೊಮ್ಮೆ ಭಾವನಾತ್ಮಕ ಮತ್ತು ಆರ್ಥಿಕ ಶೋಷಣೆ ಮೌನವಾಗಿ ನಡೆಯುತ್ತದೆ. ಸೌಜನ್ಯ, ಕಾಳಜಿ ಮತ್ತು ನಕಲಿ ಪ್ರೀತಿಯ ಮೂಲಕ ಆರಂಭವಾಗುವ ಈ ಶೋಷಣೆ ಮಹಿಳೆಯರ ಮೌನ ಮತ್ತು ಸಮಾಜದ ಭಯವನ್ನು ಆಯುಧವನ್ನಾಗಿ ಮಾಡಿಕೊಂಡಿರುತ್ತದೆ. ಈ ಜಾಗೃತಿ ಅಭಿಯಾನದ ಉದ್ದೇಶ ಭಯ ಹುಟ್ಟಿಸುವುದಲ್ಲ, ಬದಲಾಗಿ ಮಹಿಳೆಯರು ಎಚ್ಚರಿಕೆಯಿಂದ ಇರಲು, ಶೋಷಣೆಯ ಲಕ್ಷಣಗಳನ್ನು ಸಮಯಕ್ಕೆ ಸರಿಯಾಗಿ ಗುರುತಿಸಲು ಮತ್ತು ಅಗತ್ಯವಿದ್ದಾಗ ಧೈರ್ಯವಾಗಿ ಸಹಾಯ ಕೇಳಲು ಪ್ರೇರೇಪಿಸುವುದಾಗಿದೆ, ಏಕೆಂದರೆ ಆರೋಗ್ಯ ಮುಖ್ಯವಾದರೂ ಮಹಿಳೆಯರ ಗೌರವ, ಘನತೆ ಮತ್ತು ಸುರಕ್ಷತೆ ಎಲ್ಲಕ್ಕಿಂತ ಮೇಲು.**


**ಒಂದು ಎಚ್ಚರಿಕೆಯ ವರದಿ**

ಇಂದಿನ ವೇಗದ ಜೀವನಶೈಲಿಯಲ್ಲಿ ದೈಹಿಕ ಫಿಟ್ನೆಸ್ ಒಂದು ಐಷಾರಾಮಿ ಅಲ್ಲ, ಅವಶ್ಯಕತೆಯಾಗಿದೆ. ಆರೋಗ್ಯವನ್ನು ಕಾಪಾಡಿಕೊಳ್ಳಲು, ದೇಹವನ್ನು ಸದೃಢವಾಗಿಟ್ಟುಕೊಳ್ಳಲು ಮತ್ತು ಮಾನಸಿಕ ಒತ್ತಡದಿಂದ ಮುಕ್ತಿ ಪಡೆಯಲು ಅನೇಕ ಮಹಿಳೆಯರು ಜಿಮ್, ಡ್ಯಾನ್ಸ್,



ಜುಂಬಾ ಮತ್ತು ಯೋಗ ತರಬೇತಿ ಕೇಂದ್ರಗಳತ್ತ ಮುಖ ಮಾಡುತ್ತಿದ್ದಾರೆ. ಫಿಟ್ನೆಸ್ ಚಟುವಟಿಕೆಗಳು ಮಹಿಳೆಯರಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜೊತೆಗೆ ಆರೋಗ್ಯಕರ ಜೀವನದ ದಾರಿಯನ್ನು ತೆರೆದಿಡುತ್ತವೆ. ಆದರೆ ಈ ಆರೋಗ್ಯದ ಹುಡುಕಾಟದ ನಡುವೆಯೇ, ಕೆಲವೊಂದು ದುರುದ್ದೇಶಿತ ವ್ಯಕ್ತಿಗಳು ಮಹಿಳೆಯರ ನಂಬಿಕೆಯನ್ನು ದುರ್ಬಳಕೆ ಮಾಡಿಕೊಂಡು ಅವರನ್ನು ಶೋಷಣೆಯ ಬಲೆಗೆ ಬೀಳಿಸುತ್ತಿರುವುದು ಗಂಭೀರ ಮತ್ತು ಆತಂಕಕಾರಿ ಸಂಗತಿಯಾಗಿದೆ.

ಜಿಮ್ ಮತ್ತು ಡ್ಯಾನ್ಸ್ ತರಬೇತುದಾರರೆಲ್ಲರೂ ಕೆಟ್ಟವರು ಎಂಬ ಸಾಮಾನ್ಯೀಕರಣ ಸರಿಯಲ್ಲ. ಬಹುತೇಕ ತರಬೇತುದಾರರು ವೃತ್ತಿಪರ ನೈತಿಕತೆ ಮತ್ತು ಗೌರವದೊಂದಿಗೆ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಆದರೂ ಕೆಲವೊಂದು ವಿಕೃತ ಮನಸ್ಸಿನವರು ಈ



ವೃತ್ತಿಯಲ್ಲಿರುವ ಅವಕಾಶವನ್ನು ತಮ್ಮ ವೈಯಕ್ತಿಕ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಇವರು ತರಬೇತಿಯ ಹೆಸರಿನಲ್ಲಿ ಮಹಿಳೆಯರೊಂದಿಗೆ ನಿಕಟ ಸಂಪರ್ಕ ಸಾಧಿಸುವ ಅವಕಾಶವನ್ನು ಶೋಷಣೆಯ ಸಾಧನವಾಗಿ ಪರಿವರ್ತಿಸುತ್ತಿದ್ದಾರೆ. ಇವರ ಕಾರ್ಯವೈಖರಿ ಬಹಳ ಸೂಕ್ಷ್ಮವಾಗಿದ್ದು, ಮೊದಲ ನೋಟಕ್ಕೆ ಗುರುತಿಸುವುದು ಕಷ್ಟಕರವಾಗಿರುತ್ತದೆ.

ಈ ರೀತಿಯ ಶೋಷಕರು ಸಾಮಾನ್ಯವಾಗಿ 35 ರಿಂದ 45 ವರ್ಷದೊಳಗಿನ ಮಧ್ಯವಯಸ್ಕ ಮಹಿಳೆಯರನ್ನು ತಮ್ಮ ಮುಖ್ಯ ಗುರಿಯಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಈ ವಯಸ್ಸಿನ ಮಹಿಳೆಯರು ಹೆಚ್ಚಾಗಿ ಕೌಟುಂಬಿಕ ಹೊಣೆಗಾರಿಕೆಗಳು, ದಾಂಪತ್ಯ ಜೀವನದ ಏರುಪೇರುಗಳು, ಮಕ್ಕಳ ಜವಾಬ್ದಾರಿಗಳು ಮತ್ತು ಕೆಲಸದ ಒತ್ತಡದಿಂದ ಮಾನಸಿಕವಾಗಿ ದಣಿದಿರುತ್ತಾರೆ. ಕೆಲವರು ಭಾವನಾತ್ಮಕ ಒಂಟಿತನವನ್ನು ಅನುಭವಿಸುತ್ತಿರುತ್ತಾರೆ. ಇಂತಹ ಮಹಿಳೆಯರು ತಮ್ಮ ಮಾತನ್ನು ಕೇಳುವ, ತಮ್ಮ ಬಗ್ಗೆ ಕಾಳಜಿ ತೋರುವ ವ್ಯಕ್ತಿಗಳತ್ತ ಸಹಜವಾಗಿ ಆಕರ್ಷಿತರಾಗುತ್ತಾರೆ. ಈ ದುರ್ಬಲತೆಯನ್ನು ಶೋಷಕರು ನಿಖರವಾಗಿ ಗುರುತಿಸಿ ನಿಧಾನವಾಗಿ ತಮ್ಮ ಬಲೆಯನ್ನು ಬೀಸುತ್ತಾರೆ.



ಆರಂಭದಲ್ಲಿ ಈ ತರಬೇತುದಾರರು ಅತ್ಯಂತ ಸೌಜನ್ಯದಿಂದ, ವೃತ್ತಿಪರವಾಗಿ ವರ್ತಿಸುತ್ತಾರೆ. ಮಹಿಳೆಯರ ಪ್ರಗತಿಯನ್ನು ಶ್ಲಾಘಿಸುವುದು, ಅವರ ದೇಹದ ಬದಲಾವಣೆಗಳನ್ನು ಮೆಚ್ಚುವುದು, ವಿಶೇಷ ಗಮನ ನೀಡುತ್ತಿರುವಂತೆ ತೋರಿಸುವುದು ಇವರ ಮೊದಲ ಹೆಜ್ಜೆಗಳು. 'ನೀವು ತುಂಬಾ ಡೆಡಿಕೇಟೆಡ್', 'ನಿಮ್ಮ ಮೇಲೆ ನನಗೆ ವಿಶೇಷ ಗಮನವಿದೆ', 'ನಿಮ್ಮಂಥ ಕ್ಲೈಂಟ್ ಅಪರೂಪ' ಎಂಬ ಮಾತುಗಳ ಮೂಲಕ ಮಹಿಳೆಯರ ಆತ್ಮವಿಶ್ವಾಸವನ್ನು ಹೆಚ್ಚಿಸುವಂತೆ ಕಾಣಿಸುತ್ತಾರೆ. ಆದರೆ ಇದರ ಹಿಂದಿರುವ ಉದ್ದೇಶ ನಂಬಿಕೆ ಸಂಪಾದನೆ ಎಂಬುದು ಬಹುಶಃ ಮಹಿಳೆಗೆ ಅರಿವಾಗುವುದೇ ಇಲ್ಲ.


ನಂಬಿಕೆ ಒಮ್ಮೆ ಸ್ಥಾಪಿತವಾದ ನಂತರ, ಸಂಭಾಷಣೆ ನಿಧಾನವಾಗಿ ವೈಯಕ್ತಿಕ ವಿಷಯಗಳತ್ತ ತಿರುಗುತ್ತದೆ. ಕುಟುಂಬದ ಪರಿಸ್ಥಿತಿ, ದಾಂಪತ್ಯ ಜೀವನ, ಸಮಸ್ಯೆಗಳು, ನೋವುಗಳು ಇವೆಲ್ಲವನ್ನೂ ಶೋಷಕರು ಗಮನವಿಟ್ಟು ಕೇಳಿಸಿಕೊಂಡು ತಮ್ಮನ್ನು 'ಅರ್ಥಮಾಡಿಕೊಳ್ಳುವ ಏಕೈಕ ವ್ಯಕ್ತಿ'ಯಂತೆ ತೋರಿಸಿಕೊಳ್ಳುತ್ತಾರೆ. ಈ ಹಂತದಲ್ಲಿ ಮಹಿಳೆ ತನ್ನ ಮನದಾಳದ ಮಾತುಗಳನ್ನು ಹಂಚಿಕೊಳ್ಳಲು ಆರಂಭಿಸುತ್ತಾಳೆ. ಇದುವೇ ಶೋಷಣೆಯ ಮುಂದಿನ ಹಂತಕ್ಕೆ ದಾರಿ ಮಾಡಿಕೊಡುತ್ತದೆ.

ತರಬೇತಿಯ ಸಂದರ್ಭದಲ್ಲಿ ಅಗತ್ಯವಿರುವ ದೈಹಿಕ ಸ್ಪರ್ಶವನ್ನು ಇಂತಹ ವಂಚಕರು ನಿಧಾನವಾಗಿ ಅಸಹಜ ಸ್ಪರ್ಶವಾಗಿ ಪರಿವರ್ತಿಸುತ್ತಾರೆ. ಆರಂಭದಲ್ಲಿ ಇದು ತರಬೇತಿಯ ಭಾಗವೆಂದು ಮಹಿಳೆ ಭಾವಿಸುತ್ತಾಳೆ. ಆದರೆ ಕಾಲಕ್ರಮೇಣ ಈ ಸ್ಪರ್ಶ ಉದ್ದೇಶಪೂರ್ವಕವಾಗಿದ್ದು, ಅಸೌಕರ್ಯ ಉಂಟುಮಾಡುವಂತಾಗುತ್ತದೆ. ಮಹಿಳೆ ವಿರೋಧ ವ್ಯಕ್ತಪಡಿಸದಿದ್ದರೆ, ಶೋಷಕರು ಅದನ್ನೇ ಮೌನ ಒಪ್ಪಿಗೆಯಂತೆ ಪರಿಗಣಿಸುತ್ತಾರೆ. ಗೊಂದಲ, ಲಜ್ಜೆ ಮತ್ತು ಸಾಮಾಜಿಕ ಭಯದಿಂದ ಅನೇಕ ಮಹಿಳೆಯರು ಮೌನವಾಗಿಯೇ ಸಹಿಸಿಕೊಳ್ಳುತ್ತಾರೆ.

ಭಾವನಾತ್ಮಕವಾಗಿ ಮಹಿಳೆಯನ್ನು ಸಂಪೂರ್ಣವಾಗಿ ತಮ್ಮ ಹಿಡಿತಕ್ಕೆ ತೆಗೆದುಕೊಂಡ ನಂತರ ಶೋಷಕರು ಮುಂದಿನ ಹಂತವಾದ ಆರ್ಥಿಕ ಶೋಷಣೆಗೆ ಮುಂದಾಗುತ್ತಾರೆ. ಇದು ಬಹಳ ನೇರವಾಗಿ ನಡೆಯುವುದಿಲ್ಲ. ಸಹಾನುಭೂತಿ ಹುಟ್ಟಿಸುವ ಮಾತುಗಳು, ಕಷ್ಟದ ಕಥೆಗಳು, ತಾತ್ಕಾಲಿಕ ಸಮಸ್ಯೆಗಳ ನೆಪ ಇವೆಲ್ಲವೂ ಹಣ ಅಥವಾ ದುಬಾರಿ ವಸ್ತುಗಳನ್ನು ಪಡೆಯುವ ಉಪಾಯಗಳಾಗುತ್ತವೆ. ಮೊಬೈಲ್ ಫೋನ್, ಬಟ್ಟೆ, ವಾಚ್, ಉಡುಗೊರೆಗಳು ಅಥವಾ ನಗದು ಇವುಗಳನ್ನು ಪ್ರೀತಿಯ ಹೆಸರಿನಲ್ಲಿ ಪಡೆದುಕೊಳ್ಳಲಾಗುತ್ತದೆ. ಕೆಲ ಸಂದರ್ಭಗಳಲ್ಲಿ ಮಹಿಳೆಯರು ತಮ್ಮ ಉಳಿತಾಯವನ್ನೇ ಕಳೆದುಕೊಳ್ಳುವ ಸ್ಥಿತಿ ಎದುರಿಸುತ್ತಾರೆ.

ಮಹಿಳೆ ಈ ಸಂಬಂಧದ ಬಗ್ಗೆ ಅನುಮಾನ ವ್ಯಕ್ತಪಡಿಸಿದಾಗ ಅಥವಾ ದೂರ ಸರಿಯಲು ಪ್ರಯತ್ನಿಸಿದಾಗ ಶೋಷಕರ ನಿಜವಾದ ಮುಖ ಬಹಿರಂಗವಾಗುತ್ತದೆ. ಪ್ರೀತಿಯ ಮಾತುಗಳು ಬೆದರಿಕೆಯಾಗಿ ಬದಲಾಗುತ್ತವೆ. ಖಾಸಗಿ ಕ್ಷಣಗಳಲ್ಲಿ ಪಡೆದ ಫೋಟೋಗಳು, ವಿಡಿಯೋಗಳು ಅಥವಾ ಆಡಿಯೋ ದಾಖಲೆಗಳನ್ನು ಬಳಸಿಕೊಂಡು ಬ್ಲ್ಯಾಕ್‌ಮೇಲ್ ಆರಂಭವಾಗುತ್ತದೆ. ಕುಟುಂಬಕ್ಕೆ, ಗಂಡನಿಗೆ ಅಥವಾ ಸಮಾಜಕ್ಕೆ ವಿಷಯ ಬಿಚ್ಚಿಡುವ ಬೆದರಿಕೆ ಮಹಿಳೆಯನ್ನು ಭೀತಿಗೆ ಒಳಪಡಿಸುತ್ತದೆ. ಈ ಭಯದಿಂದ ಅನೇಕ ಮಹಿಳೆಯರು ಮಾನಸಿಕವಾಗಿ ಕುಸಿದು ಹೋಗುತ್ತಾರೆ.

ಸಾಮಾಜಿಕ ಅವಮಾನ ಮತ್ತು ಕುಟುಂಬದ ಭಯದಿಂದ ಬಹುತೇಕ ಮಹಿಳೆಯರು ಪೊಲೀಸ್ ಸಹಾಯ ಪಡೆಯಲು ಹಿಂದೇಟು ಹಾಕುತ್ತಾರೆ. ಇದರಿಂದ ಶೋಷಕರ ಧೈರ್ಯ ಇನ್ನಷ್ಟು ಹೆಚ್ಚುತ್ತದೆ. ಆದರೆ ವಾಸ್ತವದಲ್ಲಿ ಬ್ಲ್ಯಾಕ್‌ಮೇಲ್ ಮತ್ತು ಶೋಷಣೆ ಗಂಭೀರ ಅಪರಾಧಗಳಾಗಿದ್ದು, ಕಾನೂನು ಮಹಿಳೆಯರ ಪರವಾಗಿ ನಿಂತಿದೆ ಎಂಬ ಅರಿವು ಸಮಾಜದಲ್ಲಿ ಇನ್ನೂ ಅಗತ್ಯವಾಗಿದೆ.



ಈ ರೀತಿಯ ಶೋಷಣೆಯಿಂದ ರಕ್ಷಿಸಿಕೊಳ್ಳಲು ಮಹಿಳೆಯರು ಕೆಲವೊಂದು ಮುನ್ನೆಚ್ಚರಿಕೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ತರಬೇತುದಾರರೊಂದಿಗೆ ಸಂಬಂಧವನ್ನು ಸಂಪೂರ್ಣವಾಗಿ ವೃತ್ತಿಪರ ಮಟ್ಟದಲ್ಲೇ ಇಟ್ಟುಕೊಳ್ಳಬೇಕು. ವೈಯಕ್ತಿಕ ಜೀವನದ ವಿಚಾರಗಳನ್ನು ಹಂಚಿಕೊಳ್ಳುವುದನ್ನು ತಪ್ಪಿಸಬೇಕು. ದುಬಾರಿ ಉಡುಗೊರೆಗಳು ಅಥವಾ ಹಣ ನೀಡುವ ಅಗತ್ಯವೇ ಇಲ್ಲ ಎಂಬುದನ್ನು ಮನಗಾಣಬೇಕು. ತರಬೇತಿಯ ಸಂದರ್ಭದಲ್ಲಿ ಅಸಹಜ ಸ್ಪರ್ಶ ಅಥವಾ ಅಸೌಕರ್ಯ ಅನುಭವವಾದರೆ ತಕ್ಷಣ ವಿರೋಧ ವ್ಯಕ್ತಪಡಿಸಬೇಕು. ಮೌನವೇ ಶೋಷಕರ ಅತಿ ದೊಡ್ಡ ಶಕ್ತಿ ಎಂಬುದನ್ನು ಮಹಿಳೆಯರು ಅರಿತುಕೊಳ್ಳಬೇಕು.

ಯಾವುದೇ ರೀತಿಯ ಬ್ಲ್ಯಾಕ್‌ಮೇಲ್ ಅಥವಾ ಬೆದರಿಕೆ ಎದುರಾದಲ್ಲಿ ಹೆದರದೇ ಪೊಲೀಸ್ ಅಥವಾ ಕಾನೂನು ನೆರವು ಪಡೆಯಬೇಕು. ಸಾಕ್ಷ್ಯಗಳನ್ನು ಉಳಿಸಿಕೊಂಡು ಸೂಕ್ತ ಕ್ರಮ ಕೈಗೊಂಡರೆ ಶೋಷಕರಿಂದ ಪಾರಾಗುವುದು ಸಾಧ್ಯ. ಮಹಿಳೆಯರು ಒಬ್ಬರಿಗೊಬ್ಬರು ಬೆಂಬಲ ನೀಡುವ ವಾತಾವರಣ ನಿರ್ಮಾಣವಾಗುವುದು ಈ ರೀತಿಯ ಅಪರಾಧಗಳನ್ನು ತಡೆಯುವಲ್ಲಿ ಅತ್ಯಂತ ಮುಖ್ಯವಾಗಿದೆ.

ಫಿಟ್ನೆಸ್ ಆರೋಗ್ಯಕ್ಕಾಗಿ ಅಗತ್ಯವಾದುದು ನಿಜ. ಆದರೆ ಯಾವುದೇ ತರಬೇತಿ, ಯಾವುದೇ ವ್ಯಕ್ತಿ ಮಹಿಳೆಯರ ಗೌರವ, ಘನತೆ ಮತ್ತು ಸುರಕ್ಷತೆಗಿಂತ ಮೇಲು ಅಲ್ಲ. ಆಕರ್ಷಕ ಮಾತುಗಳು ಮತ್ತು ನಕಲಿ ಕಾಳಜಿಯ ಹಿಂದೆ ಅಡಗಿರುವ ಅಪಾಯವನ್ನು ಗುರುತಿಸಿ ಎಚ್ಚರಿಕೆಯಿಂದ ನಡೆದುಕೊಳ್ಳುವುದು ಇಂದಿನ ಅಗತ್ಯವಾಗಿದೆ. ಜಾಗೃತಿಯೇ ರಕ್ಷಣೆಯ ಮೊದಲ ಹೆಜ್ಜೆ ಎಂಬುದನ್ನು ಪ್ರತಿಯೊಬ್ಬ ಮಹಿಳೆಯೂ ಮನಗಂಡಾಗ ಮಾತ್ರ ಈ ರೀತಿಯ ಶೋಷಣೆಗೆ ತಡೆಯೊಡ್ಡಲು ಸಾಧ್ಯವಾಗುತ್ತದೆ.



# ಮದುವೆಗೆ ಒಪ್ಪದ ಸ್ಟಾಫ್ ನರ್ಸ್ ಕೊಲೆ!

5 ☞

ನಮ್ಮಿಬ್ಬರ ಸಂಬಳದಲ್ಲಿ ಸುಖವಾಗಿ ಜೀವನ ಸಾಗಿಸಬಹುದೆಂದು ಯೋಚಿಸಿದ್ದೆನು. ಮೂರು ತಿಂಗಳ ಹಿಂದೆ ನಾನು ಮತ್ತು ಚಿರಂಜೀವಿ ಬಂಗಾರಪೇಟೆಯಲ್ಲಿ ಪಾನಿಪೂರಿ ತಿನ್ನುತ್ತಿದ್ದಾಗ ನೇರಳೆಕೆರೆ ಗ್ರಾಮದ ಸ್ನೇಹಿತೆ ಸುನಂದ ಸಹ ಅಲ್ಲಿಗೆ ಬಂದಿದ್ದಳು. ಆಗ ನನ್ನ ಜೊತೆ ಇದ್ದ




ಆರೋಪಿ ಚಿರಂಜೀವಿಯನ್ನು ವಿಚಾರಣೆ ಮಾಡುತ್ತಿರುವ ಸಾರ್ವಜನಿಕರು

ಚಿರಂಜೀವಿ ಬಗ್ಗೆ ಕೇಳಿದಳು. ನಾನು ಅವನ ಬಗ್ಗೆ ವಿಷಯ ತಿಳಿಸಿದ್ದೆನು. ನಂತರ ಅವಳು ಹೊರಟುಬಿಟ್ಟಳು. ಮರುದಿನ ನನಗೆ ಫೋನ್ ಮಾಡಿದ ಸುನಂದಳ ಚಿರಂಜೀವಿ ಬಗ್ಗೆ ವಿಷಯ ತಿಳಿಸಿದಳು. ಅಲ್ಲಿಂದ ನಾನು ಚಿರಂಜೀವಿಯಿಂದ ದೂರವಾಗುತ್ತಾ ಇದ್ದಾಗ ಅವನು ನನಗೆ ಹತ್ತಿರವಾಗಲು ಪ್ರಯತ್ನಿಸುತ್ತಿದ್ದನು. ಒಂದು ದಿನ ಏಕೆ ನನ್ನಿಂದ ದೂರ ಇರುತ್ತೀಯಾ ಎಂದು ಕೇಳಿದನು. ಅದಕ್ಕೆ ನಾನು ನಿನಗೆ ಮದುವೆಯಾಗಿ ಹೆಂಡತಿ, ಇಬ್ಬರು ಮಕ್ಕಳಿದ್ದರೂ ಆ ವಿಚಾರವನ್ನು ತಿಳಿಸದೆ ಮೋಸ ಮಾಡಿರುವೆ. ನಿನಗೆ ಮದುವೆಯಾಗಿರುವ ವಿಷಯನಮ್ಮ ಮನೆಯವರಿಗೆ ತಿಳಿದರೆ ನಿನ್ನ ಜೊತೆ ಮದುವೆಯಾಗುವುದಕ್ಕೆ ಒಪ್ಪುವುದಿಲ್ಲವೆಂದು ಹೇಳಿದೆ.

ಅದಕ್ಕೆ ಚಿರಂಜೀವಿಯು ನಿನ್ನನ್ನು ಮದುವೆಯಾದ ಮೇಲೆ ಅವರನ್ನು ಬಿಟ್ಟು ನಿನ್ನ ಜೊತೆಯಲ್ಲಿಯೇ ಇದ್ದುಬಿಡುತ್ತೇನೆಂದು ಹೇಳಿದನು. ಅದಕ್ಕೆ ನಾನು ನನ್ನನ್ನು ಎರಡನೇ ಮದುವೆಯಾಗುವ ಬದಲು ನಿನ್ನ ಹೆಂಡತಿ, ಮಕ್ಕಳೊಂದಿಗೆ ಚೆನ್ನಾಗಿ ಜೀವನ ಮಾಡಿಕೊಂಡಿರುವಂತೆ ಹೇಳಿದ್ದೆನು. ಆದರೆ ಅವನು ನನ್ನ ಹಿಂದೆ ಬಿದ್ದು ಮದುವೆಯಾಗುವಂತೆ ಒತ್ತಾಯಿಸುತ್ತಾ ಇದ್ದನು. ನನ್ನ ಹಿಂದೆ ಬರಬೇಡವೆಂದು ಹೇಳಿದ್ದಕ್ಕೆ, ನೀನು ನನಗೆ ಸಿಗದಿದ್ದರೆ ನನ್ನ ಬಾಳು ಶೂನ್ಯವೆಂದು ಹೇಳಿ ಚಾಕುವಿನಿಂದ ನನ್ನ ಮೈಮೇಲೆ ಕೊಯ್ದು ಗಾಯಗೊಳಿಸಿದನಲ್ಲದೆ ಅವನು ಸಹ ಮೈಮೇಲೆ ಕೊಯ್ದುಕೊಳ್ಳುವ ನಾಟಕವಾಡಿದನು. ಇಲ್ಲಿಯೇ ಇದ್ದರೆ ನನ್ನನ್ನು ಮುಗಿಸಿಬಿಡುತ್ತಾನೆಂದು ಮನೆಗೆ ಬಂದಿರುವುದಾಗಿ ತಿಳಿಸಿದಳು. ನಂತರ ನಾನು ಮಗಳು ಸುಜಾತಳನ್ನು ಬಂಗಾರಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿ ದಾಖಲೆಯೊಂದಿಗೆ ಪೊಲೀಸ್ ಠಾಣೆಗೆ ಬಂದಿರುವುದಾಗಿ ತಿಳಿಸಿದರು. ಪಿಐ ದಯಾನಂದರವರು ಪ್ರಕರಣವನ್ನು ದಾಖಲಿಸಿಕೊಂಡರು. ಆದರೆ ಚಿರಂಜೀವಿ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ, ನಂತರ ಕೆಲವು ದಿನ ಬಿಟ್ಟು ಠಾಣೆಗೆ ಹೋಗಿ ವಿಚಾರಿಸಲಾಗಿ ಅವನನ್ನು ಹುಡುಕಿಕೊಂಡು ಯಲವಳ್ಳಿಯಲ್ಲಿರುವ ಅವನ ಮನೆಗೆ ಹುಡುಕಿಕೊಂಡು ಹೋಗಿದ್ದು, ಚಿರಂಜೀವಿ ಮನೆಯಲ್ಲಿ ಇರಲಿಲ್ಲ. ಅವನ ತಂದೆ, ತಾಯಿ ಇದ್ದರು. ಮಗನ ಬಗ್ಗೆ ಕೇಳಿದಕ್ಕೆ ಅವನು ಮನೆಗೆ ಬಂದು ಒಂದು ತಿಂಗಳಾಗಿದೆ. ಅವನನ್ನು ಹುಡುಕಿ ಕರೆದುಕೊಂಡು ಬಂದು ನಿಮಗೆ ಒಪ್ಪಿಸುವುದಾಗಿ ಹೇಳಿದ್ದಾರೆಂದು ಪೊಲೀಸರು ಹೇಳಿದರು. ಮತ್ತೆ ಒಂದು ವಾರ ಬಿಟ್ಟು ಠಾಣೆಗೆ ಹೋಗಿ ವಿಚಾರಿಸಲಾಗಿ ಪೊಲೀಸರು ಚಿರಂಜೀವಿಯನ್ನು ಕರೆದುಕೊಂಡು ಬಂದು ವಿಚಾರಿಸಲಾಗಿ ನಾನು ಹಣ ವಸೂಲಿಗೆ ಹೋಗುತ್ತಿದ್ದೆನು. ಅಷ್ಟೇ ಸುಜಾತ ಹಾಗೂ ನನ್ನ ನಡುವೆ ಯಾವುದೇ ಸಂಬಂಧವಿಲ್ಲವೆಂದು ಹೇಳಿದ್ದಾನೆಂದು ತಿಳಿಸಿದರಲ್ಲದೆ ನೀನು ಕೊಟ್ಟಿರುವ ಅರ್ಜಿಯನ್ನು ರದ್ದು ಮಾಡಲಾಗಿದೆ ಎಂದು ಹೇಳಿಬಿಟ್ಟರು.

ನನ್ನನ್ನು ಮದುವೆಯಾಗು ಇಲ್ಲವಾದರೆ ನನ್ನ ಜೊತೆ ಸಂಬಂಧ ಬೆಳೆಸುವಂತೆ ಒತ್ತಾಯಿಸುತ್ತಾ ಮಗಳು ಸುಜಾತ ಹಿಂದೆ ಬಿದ್ದ ಚಿರಂಜೀವಿಯು ಈಗಾಗಲೇ ಎರಡು ಬಾರಿ ಅಟ್ಯಾಕ್ ಮಾಡಿದ್ದಾನೆ. ದೂರು ನೀಡಿದ್ದರೂ ಪೊಲೀಸರು ನೆಪಮಾತ್ರಕ್ಕೆ ಅವನನ್ನು ಠಾಣೆಗೆ ಕರೆಸಿ ಹೇಳಿಕೆ ಪಡೆದು ಕಳುಹಿಸಿದ್ದಾರೆ. ಅವನ ಮೇಲೆ ಸೂಕ್ತ ಕ್ರಮ ತೆಗೆದುಕೊಂಡಿದ್ದರೆ ನನ್ನ ಮಗಳು ಸಾಯುತ್ತಿರಲಿಲ್ಲ. ಈಗಲಾದರೂ ಅವನ ಮೇಲೆ ಕ್ರಮ ತೆಗೆದುಕೊಳ್ಳುವ ಮೂಲಕ ಉಗ್ರಶಿಕ್ಷೆಯಾಗುವಂತೆ ಮಾಡಬೇಕೆಂದು ಒತ್ತಾಯಿಸಿದರು. ಕೋಲಾರ ನಗರ ಪೊಲೀಸ್ ಠಾಣೆಯ ಪಿಐ ಸದಾನಂದರವರು ದೂರು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡರು. ಕೃತ್ಯ ನಡೆದ ಸ್ಥಳಕ್ಕೆ ಎಸ್ಪಿ ಶ್ರೀಮತಿ ಕನ್ನಿಕಾ ಸುಕ್ರಿವಾಲ, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್ ಮುಂತಾದವರು ಆಗಮಿಸಿ ಪರಿಶೀಲಿಸಿದ ನಂತರ ಎಸ್‌ಎನ್‌ಆರ್ ಆಸ್ಪತ್ರೆಯ ಶವಾಗಾರಕ್ಕೆ ಆಗಮಿಸಿ ಪಂಚರ ಸಮಕ್ಷಮದಲ್ಲಿ ಪಂಚನಾಮೆ ನಡೆಸಿದ ಮೇಲೆ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತದೇಹದ ಪರೀಕ್ಷೆ ನಡೆಸಿದ ನಂತರ ಶವವನ್ನು ವಾರಸುದಾರರಿಗೆ ನೀಡಲಾಯಿತು.



ಸುಜಾತಳ ತಂದೆ ಕೃಷ್ಣಮೂರ್ತಿ



ಕೃತ್ಯ ನಡೆದ ಸ್ಥಳದಲ್ಲಿ ಸೇರಿರುವ ಸಾರ್ವಜನಿಕರು

**ಮದುವೆಗೆ ಒಪ್ಪದಿದ್ದಕ್ಕೆ ಕೊಲೆ ಮಾಡಿದೆ...**

ಆರೋಪಿ ಚಿರಂಜೀವಿಯನ್ನು ವಿಚಾರಿಸಲಾಗಿ ಕತ್ತಿಹಳ್ಳಿ ಗ್ರಾಮದ ಕೃಷ್ಣಮೂರ್ತಿರವರ ಮಗಳು ಸುಜಾತ ನಮ್ಮ ಕಂಪನಿಯಿಂದ ಸಾಲ ತೆಗೆದುಕೊಂಡಿದ್ದರು. ಕಂತಿನ ಹಣ ವಸೂಲಿಗೆ ನಾನೇ ಅವರ ಮನೆ ಬಳಿಗೆ ಹೋಗಿ ಸಂಘದ ಸದಸ್ಯರಿಂದ ಹಣ ವಸೂಲಿ ಮಾಡಿಕೊಂಡು ಬರುತ್ತಿದ್ದೆನು. ಒಂದು ವರ್ಷದಿಂದ ಅವರ ಮನೆ ಬಳಿ ಹೋಗಿ ಬರುತ್ತಾ ಇದ್ದಾಗ ಲವ್ ಆಗಿ ಅವಳನ್ನು ನನ್ನ ಬಲೆಗೆ ಬೀಳಿಸಿಕೊಂಡು ಮದುವೆಯಾಗುವವರೆಗೂ ಇಬ್ಬರು ಮುಂದುವರೆದಿದ್ದೆವು. ಕಂಪನಿಯಲ್ಲಿ ಸಾಲ ಪಡೆದ ಹಣದ ಜೊತೆಗೆ ನನ್ನ ಸ್ವಂತ ಹಣವನ್ನು ಕೊಟ್ಟಿದ್ದೆನು. ನಾನು ಅವಳು ತುಂಬಾ ಚೆನ್ನಾಗಿ ಇದ್ದೆವು. ಆದರೆ ಕೆಲವು ತಿಂಗಳಿಂದ ಸುಜಾತ ನನ್ನಿಂದ ದೂರ ಇರಲು ಪ್ರಯತ್ನಿಸುತ್ತಿದ್ದಳು. ನಾನು ಯಾಕೆ ನನ್ನಿಂದ ದೂರ ಹೋಗುತ್ತಿರುವೆಂದು ಕೇಳಿದಕ್ಕೆ ನಿನಗೆ ಮದುವೆಯಾಗಿ ಹೆಂಡತಿ ಮತ್ತು ಇಬ್ಬರು ಮಕ್ಕಳಿದ್ದರು. ನನಗೆ ಸುಳ್ಳು ಹೇಳಿ ಲವ್ ಮಾಡಿ ಮದುವೆಯಾಗಲು ಪ್ರಯತ್ನಿಸಿದ್ದು ಎಷ್ಟು ಸರಿ ಎಂದು ಹೇಳಿದಳು. ಅದಕ್ಕೆ ನಾನು ಹೆಂಡತಿ, ಮಕ್ಕಳನ್ನು ಬಿಟ್ಟು ಬಂದು ಬಿಡುತ್ತೇನೆಂದು ಹೇಳಿದಕ್ಕೆ ಅವಳು ನನ್ನನ್ನು ಎರಡನೇ ಮದುವೆಯಾಗುವ ಬದಲಿಗೆ ಅವರ ಜೊತೆ ನೆಮ್ಮದಿಯಾಗಿ ಸಂಸಾರ ಮಾಡಿಕೊಂಡು ಇರುವಂತೆ ಹೇಳಿಬಿಟ್ಟಳು. ಅವಳ ಮಾತಿನಿಂದ ಬೇಸರವಾಗಿದ್ದು, ನೀನು ನನ್ನನ್ನು ಮದುವೆಯಾಗುವುದು ಬೇಡ. ಅದರ ಬದಲಿಗೆ ಲಿವಿಂಗ್ ಟುಗೆದರ್‌ನಲ್ಲಿದ್ದು ಬಿಡೋಣ. ಇದರಿಂದ ಯಾರಿಗೂ ತೊಂದರೆಯಾಗುವುದಿಲ್ಲವೆಂದು ಹೇಳಿದಕ್ಕೆ ನನ್ನ ಮೇಲೆ ಕೋಪ ಮಾಡಿಕೊಂಡು ಮಾತು ಬಿಟ್ಟು ನನ್ನಿಂದ ದೂರವಾದಳು. ನಾನೇ ಅವಳು ಎಲ್ಲಿ ಹೋದರೂ ಹಿಂದೆಯೇ ಬಿದ್ದು ಪೀಡಿಸುತ್ತಾ ಇದ್ದೆನು. ಅವಳ ಮೇಲಿನ ಕೋಪದಿಂದ ಎರಡು ಬಾರಿ ಅಟ್ಯಾಕ್ ಮಾಡಿದೆ. ಆ ಸಂದರ್ಭದಲ್ಲಿ ಮೈಮೇಲೆ ಗಾಯಗಳಾಗಿದ್ದು, ಕ್ಷಮಿಸುವಂತೆ ಕೇಳಿಕೊಂಡಿದ್ದೆನು. ಜನವರಿ 12ರಂದು ಕೋಟಿಲಿಂಗೇಶ್ವರ ದೇವಸ್ಥಾನಕ್ಕೆ ಹೋಗಿ ತಾಳಿ ಕಟ್ಟಿಕೊಂಡು ಬರೋಣವೆಂದು ಹೇಳಿದ್ದೆ. ಅದಕ್ಕೆ ಅವಳು ನನ್ನ ಹಿಂದೆ ಬರುವುದಾಗಲಿ, ರಸ್ತೆಯಲ್ಲಿ ಮಾತನಾಡಿಸುವುದಾಗಲಿ ಮಾಡಬಾರದೆಂದು ನನಗೆ ಎಚ್ಚರಿಕೆ ಕೊಟ್ಟಿದ್ದಳು. ಸುಜಾತಳ ಮೇಲಿನ ಅತಿಯಾದ ಆಸೆಯಿಂದ ಅವಳು ನನ್ನವಳಾಗಬೇಕೆಂದು ಪ್ರಯತ್ನಿಸಿದೆ. ಆದರೆ ಅವಳು ನನ್ನಿಂದ ದೂರವಾಗುತ್ತಾ ಇದ್ದಳು.



ಆರೋಪಿ ಚಿರಂಜೀವಿ

ಇದರಿಂದ ಅವಳ ಮೇಲೆ ದ್ವೇಷ ಬೆಳೆಯುತ್ತಾ ಹೋಯಿತು. ನನಗೆ ಸಿಗದವಳು, ಬೇರೆ ಯಾರಿಗೂ ಸಿಗಬಾರದೆಂದು ಪ್ಲಾನ್ ಮಾಡಿಕೊಂಡು ಜನವರಿ 12ರಂದು ಬೆಳಿಗ್ಗೆ ಊರಿನಿಂದ ಹೊರಟು ಕೋಲಾರ ಬೈಪಾಸ್‌ನ ಬ್ರಿಡ್ಜ್ ಬಳಿ ಸುಜಾತಳಿಗಾಗಿ ಕಾದಿದ್ದೆನು. ಎಂದಿನಂತೆ ಬೆಳಿಗ್ಗೆ 7.30 ಗಂಟೆಗೆ ಬೈಪಾಸ್ ಬ್ರಿಡ್ಜ್‌ನ ಬಸ್ ಸ್ಟಾಪ್‌ನಲ್ಲಿ ಸುಜಾತ ಬಸ್ ಇಳಿದು ಕ್ಯಾಬ್‌ಗಾಗಿ ಕಾಯುತ್ತಿದ್ದಳು. ಆಗ ನಾನು ಅವಳ ಹತ್ತಿರಕ್ಕೆ ಹೋಗಿ ನಿನ್ನ ಬಳಿ ಮಾತನಾಡಬೇಕೆಂದು ಸ್ವಲ್ಪ ದೂರ ಕರೆದುಕೊಂಡು ಹೋಗಿ ನಮ್ಮಿಬ್ಬರ ನಡುವಿನ ಸಂಬಂಧದ ಬಗ್ಗೆ ಕೇಳಿದಕ್ಕೆ ಚಪ್ಪಲಿ ತೋರಿಸಿ ನನ್ನ ಹಿಂದೆ ಬರಬೇಡವೆಂದು ಹೇಳಿದಳು. ಇದರಿಂದ ನನಗೆ ಕೋಪ ಬಂದು ಚಾಕುವನ್ನು ತೆಗೆದು ಮನ ಬಂದಂತೆ ಚುಚ್ಚಿ, ಕತ್ತು ಕೊಯ್ದು ಅಲ್ಲಿಂದ ಪರಾರಿಯಾಗಲು ಯತ್ನಿಸಿದ್ದಾಗ ಸುಜಾತಳ ಕಿರುಚಾಟವನ್ನು ಕೇಳಿಸಿಕೊಂಡ ಸಾರ್ವಜನಿಕರು ನನ್ನನ್ನು ಹಿಡಿದು ಧರ್ಮದೇಟು ಕೊಟ್ಟು ಪೊಲೀಸರಿಗೆ ಒಪ್ಪಿಸಿದರು ಎಂದು ಹೇಳಿದನು.

ಆರೋಪಿ ಚಿರಂಜೀವಿಯಿಂದ ಹೇಳಿಕೆ ಪಡೆದ ನಂತರ ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಮಹಜರ್ ನಡೆಸಿದ ಮೇಲೆ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ☯




ಮೃತ ಸುಜಾತ ಕೆಲಸ ಮಾಡುತ್ತಿದ್ದ ಕಂಪನಿ

## ನಗು ತರಿಸುವ ಮನೆಯ ಕಥೆ

ಒಬ್ಬ ಅಪ್ಪ ಬೆಳಿಗ್ಗೆ ಆಫೀಸ್‌ಗೆ ಹೊರಡುವಾಗ ಮಗನಿಗೆ ಹೇಳಿದ, 'ನಾನು ದೊಡ್ಡ ಮ್ಯಾನೇಜರ್ ಆಗಬೇಕು ಅಂತಾ ತುಂಬಾ ಓದಿದ್ದೀನಿ.'

ಮಗ ತಕ್ಷಣ ಕೇಳಿದ, 'ಅಪ್ಪಾ, ಹಾಗಾದ್ರೆ ಇನ್ನೂ ಯಾಕೆ ಬಾಸ್‌ಗೇ ಫೋನ್ ಮಾಡಿ 'ಸಾರ್, ಇಂದು ಲೇಟಾಗುತ್ತೆ' ಅಂತಾ ಹೇಳ್ತೀರಾ?'

ಅಪ್ಪ ಮಾತು ತಪ್ಪಿಸಿ, 'ಅದು ಅನುಭವ ಅಂತಾ' ಅಂದ. ಅಷ್ಟರಲ್ಲಿ ಅಮ್ಮ ಅಡಿಗೆ ಮನೆಯಿಂದ ಕೂಗಿ, 'ಅನುಭವ ಅಂದ್ರೆ ಏನು? ನಿನ್ನೆ ಚಹಾ ಕುಡಿದ ಕಪ್ ಸಿಂಕ್‌ನಲ್ಲಿ ಇಟ್ಟು ಹೋದ್ರಲ್ಲಾ, ಅದೂ ಅನುಭವನಾ?'

ಅಪ್ಪ ನಗ್ತಾ, 'ಅದು ಪ್ರಾಯೋಗಿಕ ಪರೀಕ್ಷೆ!' ಅಂದ.

ಮಗ ಮತ್ತೆ, 'ಅಪ್ಪಾ, ನಿಮ್ಮ ವಾಟ್ಸಾಪ್ ಸ್ಟೇಟಸ್‌ಲ್ಲಿ 'ಬಿಸಿ ಚಹಾ ಜೀವನಕ್ಕೆ ಶಕ್ತಿ' ಅಂತಾ ಹಾಕಿದ್ದೀರಾ, ಆದ್ರೆ ಅಮ್ಮ ಮಾಡಿರೋ ಚಹಾ ಕುಡಿದ್ರೆ, ಯಾಕೆ ಮುಖ ಮಾಡ್ತೀರಾ?'

ಅಪ್ಪ ಗಂಭೀರವಾಗಿ, 'ಅದು ತತ್ವ, ಅನುಭವ ಬೇರೆ!' ಅಂದ. ಇಷ್ಟರಲ್ಲಿ ಅಜ್ಜ ಬಂದು, 'ನಿಮ್ಮ ಎಲ್ಲ ತತ್ವಗಳನ್ನೂ ಬಿಟ್ಟು, ಮೊದಲು ಟಿವಿ ರಿಮೋಟ್ ಕೊಡಿ; ಸುದ್ದಿ ನೋಡಬೇಕು' ಅಂದರು.

ಎಲ್ಲರೂ ರಿಮೋಟ್ ಹುಡುಕುತ್ತಾ ಇರುವಾಗ ಅಪ್ಪ ಹೇಳಿದ, 'ಈ ಮನೆಲ್ಲಿ ರಿಮೋಟ್ ಯಾವಾಗಲೂ ಕಳೆದು ಹೋಗೋದು ಇಲ್ಲ, ಅದು ಸ್ವತಃ ವಿಶ್ರಾಂತಿಗೆ ಹೋಗಿರುತ್ತೆ!' ಅಂತಾ ಮನೆಯಲ್ಲಿದ್ದ ಎಲ್ಲರೂ ನಗ್ತಾ ನಗ್ತಾ ಚಹಾ ಮತ್ತೆ ಬಿಸಿ ಮಾಡಿಸಿಕೊಂಡರು ☯


# ಬಾಗಲಕೋಟೆಯಲ್ಲಿ ಬಂಗಾರ ಕಳ್ಳ ಹಾಗೂ ಅಂತರ್ ಜಿಲ್ಲಾ ಬೈಕ್ ಕಳ್ಳರ ಜಾಲ ಪತ್ತೆ

ಬಾಗಲಕೋಟೆ
✍ ಮಂಜುನಾಥ ಕರೋಳಿ

ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸರಣಿ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿರುವುದು ಸಾರ್ವಜನಿಕರಲ್ಲಿ ಆತಂಕಕ್ಕೆ ಕಾರಣವಾಗಿದೆ. ನಗರ ಪ್ರದೇಶಗಳಷ್ಟೇ ಅಲ್ಲದೆ ಗ್ರಾಮೀಣ ಭಾಗಗಳಲ್ಲೂ ಕಳ್ಳತನದ ಹಾವಳಿ ಹೆಚ್ಚಾಗಿದ್ದು, ವಿಶೇಷವಾಗಿ ಮಹಿಳೆಯರು ಬಂಗಾರದ ಆಭರಣಗಳನ್ನು ಧರಿಸಿ ಹೊರಗೆ ಹೋಗಲು ಹಿಂಜರಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೃಷಿ ಕೆಲಸ, ಹೊಲದ ಕೆಲಸ, ಮಾರುಕಟ್ಟೆ ಹಾಗೂ ದಿನನಿತ್ಯದ ಚಟುವಟಿಕೆಗಳಿಗೆ ತೆರಳುವ ಸಂದರ್ಭದಲ್ಲೇ ಮಹಿಳೆಯರನ್ನು ಗುರಿಯಾಗಿಸಿಕೊಂಡು ಕಳ್ಳತನ ನಡೆಸುತ್ತಿರುವ ಘಟನೆಗಳು ಪೊಲೀಸ್ ಇಲಾಖೆಗೆ ದೊಡ್ಡ ಸವಾಲಾಗಿ ಪರಿಣಮಿಸಿವೆ. ಈ ಹಿನ್ನೆಲೆ ನಡುವೆ ಬಾಗಲಕೋಟೆ ಜಿಲ್ಲೆಯಲ್ಲಿ ನಡೆದ ಎರಡು ಪ್ರತ್ಯೇಕ ಪ್ರಕರಣಗಳನ್ನು ಭೇದಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದು, ಸಾರ್ವಜನಿಕ ವಲಯದಲ್ಲಿ ಪೊಲೀಸ್ ಕಾರ್ಯಕ್ಷಮತೆಗೆ ಮೆಚ್ಚುಗೆ ವ್ಯಕ್ತವಾಗಿದೆ.


ಎಸ್ಪಿ ಸಿದ್ಧಾರ್ಥ್ ಗೋಯಲ್


ಅ|| ಎಸ್ಪಿ ಪ್ರಸನ್ನ ದೇಸಾಯಿ


ಡಿವೈಎಸ್ಪಿ ರೋಷನ್ ಜಮೀರ್


ಪಿಎಸ್‌ಐ ಶಿವರಾಜ ದರಿಗೋಣ

ಬಾಗಲಕೋಟೆ ಜಿಲ್ಲೆಯ ಬನಹಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಬಂಗಾರ ಕಳ್ಳತನ ಪ್ರಕರಣವು ಗ್ರಾಮೀಣ ಭಾಗದ ಮಹಿಳೆಯರಲ್ಲಿ ಭಯ ಹುಟ್ಟಿಸುವಂತದ್ದು. ದಿನಾಂಕ 10022026ರಂದು ಅಕ್ಕವ್ವ ಹೂಗಾರ ಎಂಬ ಮಹಿಳೆ ತಮ್ಮ ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ತರಕಾರಿ ತರಲು ಹೊಲಕ್ಕೆ ತೆರಳಿದ್ದರು. ಕೆಲಸ ಮಾಡುವ ಸಂದರ್ಭ ಬಂಗಾರದ ಆಭರಣಗಳು ಕಳೆದುಹೋಗುವ ಭೀತಿಯಿಂದಾಗಿ ಅವರು ಕೊರಳಲ್ಲಿದ್ದ 10 ಗ್ರಾಂ ತೂಕದ ಮಂಗಲ್ಯ ಸರ ಹಾಗೂ 5 ಗ್ರಾಂ ತೂಕದ ಏಕಸರವನ್ನು ಚೀಲದಲ್ಲಿ ಇಟ್ಟು ಹೊಲದ ಬದುವಿನಲ್ಲಿ ಸುರಕ್ಷಿತವಾಗಿ ಇಟ್ಟಿದ್ದರು. ಕೆಲಸ ಮುಗಿಸಿ ಮರಳಿ ಬಂದು ನೋಡಿದಾಗ ಚೀಲವೇ ಕಾಣೆಯಾಗಿದ್ದು, ಬಂಗಾರ ಕಳವು ಆಗಿರುವುದು ತಿಳಿದು ಬಂದಿದೆ. ಈ ಘಟನೆ ಗ್ರಾಮೀಣ ಭಾಗದಲ್ಲಿ ಮಹಿಳೆಯರ ಸುರಕ್ಷತೆ ಹಾಗೂ ಆಸ್ತಿ ರಕ್ಷಣೆಯ ಕುರಿತಾಗಿ ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದೆ.

ಘಟನೆಗೆ ಸಂಬಂಧಿಸಿದಂತೆ ಅಕ್ಕವ್ವ ಹೂಗಾರ ಅವರು ಬನಹಟ್ಟಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ಸಂಖ್ಯೆ 18/2026ರ ಅಡಿಯಲ್ಲಿ ಕಲಂ 303(2) ಆಫೆಖ ಪ್ರಕಾರ ಪ್ರಕರಣ ದಾಖಲಿಸಲಾಗಿದೆ. ಪ್ರಕರಣದ ಗಂಭೀರತೆಯನ್ನು ಅರಿತ ಪೊಲೀಸರು ತಕ್ಷಣವೇ ತನಿಖೆ ಕೈಗೊಂಡಿದ್ದು, ಸ್ಥಳ ಪರಿಶೀಲನೆ, ಸಿಸಿಟಿವಿ ದೃಶ್ಯಾವಳಿ ಸಂಗ್ರಹ, ಮಾಹಿತಿ ಜಾಲ ವಿಸ್ತರಣೆ ಸೇರಿದಂತೆ ಹಲವು ಹಂತಗಳಲ್ಲಿ ತನಿಖೆ ನಡೆಸಿದರು. ಕಳ್ಳತನದ ರೀತಿಯನ್ನು ಗಮನಿಸಿದಾಗ ಇದು ಪೂರ್ವಯೋಜಿತ ಕೃತ್ಯವಾಗಿರುವ ಸಾಧ್ಯತೆ ಕಂಡು ಬಂದಿದ್ದು, ಆರೋಪಿಯ ಚಲನವಲನಗಳ ಮೇಲೆ ಪೊಲೀಸರು ನಿಗಾ ವಹಿಸಿದ್ದರು.

ತನಿಖೆಯ ಮುಂದುವರೆದ ಹಂತದಲ್ಲಿ ಬನಹಟ್ಟಿ ಪೊಲೀಸ್ ಠಾಣೆಯ ಕ್ರೈಂ ವಿಭಾಗದ ಅಧಿಕಾರಿಗಳು ಆರೋಪಿತನಾದ ಅಬೂಬಕರ ರಮಜಾನ್ ಸಾಬ್ ಮುಲ್ಲಾ ಎಂಬುವನನ್ನು ದಸ್ತಗಿರಿ ಮಾಡುವಲ್ಲಿ ಯಶಸ್ವಿಯಾದರು. ಆರೋಪಿತ ಹೊಸೂರು, ರಬಕವಿ ಬನಹಟ್ಟಿ ತಾಲ್ಲೂಕಿನ ನಿವಾಸಿಯಾಗಿದ್ದು, ವಿಚಾರಣೆ ವೇಳೆ ಕಳ್ಳತನದ ಕೃತ್ಯವನ್ನು ಒಪ್ಪಿಕೊಂಡಿದ್ದಾನೆ. ಆರೋಪಿತನಿಂದ ಕಳವು ಮಾಡಲಾಗಿದ್ದ ಒಟ್ಟು 15 ಗ್ರಾಂ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದ್ದು, ಇದರ ಅಂದಾಜು ಮೌಲ್ಯ ಸುಮಾರು 2.25 ಲಕ್ಷ ರೂಪಾಯಿಗಳಾಗಿದೆ. ಜೊತೆಗೆ ಕೃತ್ಯಕ್ಕೆ ಉಪಯೋಗಿಸಿದ್ದ ಒಂದು ಬೈಕ್‌ನ್ನೂ ಪೊಲೀಸರು ಜಪ್ತಿ ಮಾಡಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಮುಂದಿನ ತನಿಖೆ ಮುಂದುವರಿದಿದೆ.

ಇದೇ ವೇಳೆ ಜಿಲ್ಲೆಯ ಮತ್ತೊಂದು ಭಾಗವಾದ ಹುನಗುಂದ ತಾಲ್ಲೂಕಿನಲ್ಲಿ ನಡೆದ ಅಂತರಜಿಲ್ಲಾ ಬೈಕ್ ಕಳ್ಳತನ ಪ್ರಕರಣವು ಪೊಲೀಸ್ ಇಲಾಖೆಯ ಸಂಘಟಿತ ತನಿಖಾ ಕಾರ್ಯದ ಯಶಸ್ಸನ್ನು ತೋರಿಸುತ್ತದೆ. ಹುನಗುಂದ ಪಟ್ಟಣ ಪೊಲೀಸ್ ಠಾಣೆಯಲ್ಲಿ ಕಳೆದ ವರ್ಷ ದಾಖಲಾಗಿದ್ದ ಬೈಕ್ ಕಳ್ಳತನ ಪ್ರಕರಣಗಳ ಸರಣಿಯನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು, ಅಂತರಜಿಲ್ಲಾ ಕಳ್ಳರ ಜಾಲವೊಂದರ ಸುಳಿವು ಪತ್ತೆಹಚ್ಚಿದ್ದರು. ಈ ಜಾಲವು ಕರ್ನಾಟಕ ಹಾಗೂ ತೆಲಂಗಾಣ ರಾಜ್ಯಗಳ ವಿವಿಧ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕಳ್ಳತನ ಮಾಡಲಾದ ಬೈಕ್‌ಗಳನ್ನು ಬೇರೆ ಜಿಲ್ಲೆಗಳಿಗೆ ಸಾಗಿಸಿ ಮಾರಾಟ ಮಾಡಲಾಗುತ್ತಿತ್ತು ಎಂಬುದು ತನಿಖೆಯಿಂದ ಬೆಳಕಿಗೆ ಬಂದಿದೆ.

ತನಿಖೆಯ ಭಾಗವಾಗಿ, ಈ ಹಿಂದೆ ಅಮೀನಗಡ ಪೊಲೀಸ್ ಠಾಣೆಯಲ್ಲಿ ಬಂಧಿತನಾಗಿದ್ದ ಹುಲಗಪ್ಪ ಹನಮಂತ ಮೋಡಕೇರ ಎಂಬ ಯುವಕನನ್ನು ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಯಿತು. ವಿಚಾರಣೆ ವೇಳೆ ಆತ ತನ್ನ ಸಹಚರರ ಕುರಿತು ಮಾಹಿತಿ ನೀಡಿದ್ದು, ಆತನ ಹೇಳಿಕೆಯ ಆಧಾರದ ಮೇಲೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮಾಳಗಡ್ಡಿ ಗ್ರಾಮದ ಹನಮಂತ ರಾಮಪ್ಪ ಮೋಡಕೇರ ಹಾಗೂ ಆಂಜನೇಯ ಹನಮಂತರಾಯ ಗಾಲಿ ಎಂಬವರನ್ನು ಪೊಲೀಸರು ಬಂಧಿಸಿದರು. ಈ ಮೂವರಿಂದ ಒಟ್ಟು 27 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಅವುಗಳ ಒಟ್ಟು ಮೌಲ್ಯ ಸುಮಾರು 16 ಲಕ್ಷ ರೂಪಾಯಿಗಳಾಗಿದೆ.


ಪೊಲೀಸ್ ಕಸ್ಟಡಿಯಲ್ಲಿ ಆರೋಪಿ

ವಶಪಡಿಸಿಕೊಂಡ ಬೈಕ್‌ಗಳಲ್ಲಿ ಬಜಾಜ್ ಪಲ್ಸರ್, ಹೊಂಡಾ ಶೈನ್, ಹೊಂಡಾ ಯುನಿಕಾರ್ನ್, ಹೀರೋ ಹೊಂಡಾ ಪ್ಯಾಶನ್ ಹಾಗೂ ಹೀರೋ ಹೊಂಡಾ ಸ್ಟೆಂಡರ್ ಮಾದರಿಗಳಿವೆ. ಈ ಬೈಕ್‌ಗಳಲ್ಲಿ ಹುನಗುಂದ ಮತ್ತು ಇಳಕಲ್ ವ್ಯಾಪ್ತಿಯಲ್ಲಿ ಕಳವು ಆಗಿದ್ದ ಐದು ಬೈಕ್‌ಗಳೂ ಸೇರಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಈ ಜಾಲದ ಇನ್ನಷ್ಟು ಸಂಪರ್ಕಗಳ ಕುರಿತು ತನಿಖೆ ಮುಂದುವರಿಸುತ್ತಿದ್ದಾರೆ.

ಈ ಎರಡು ಪ್ರತ್ಯೇಕ ಆದರೆ ಗಂಭೀರ ಪ್ರಕರಣಗಳನ್ನು ಯಶಸ್ವಿಯಾಗಿ ಭೇದಿಸಿದ ತನಿಖಾ ತಂಡದ ಕಾರ್ಯವನ್ನು ಬಾಗಲಕೋಟೆ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಪ್ರಶಂಸಿಸಿದ್ದಾರೆ. ಸಾರ್ವಜನಿಕರ ಆಸ್ತಿ ಹಾಗೂ ಸುರಕ್ಷತೆಯನ್ನು ಕಾಪಾಡುವಲ್ಲಿ ಪೊಲೀಸ್ ಇಲಾಖೆ ಸದಾ ಬದ್ಧವಾಗಿದ್ದು, ಕಳ್ಳತನ ಪ್ರಕರಣಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂಬ ಸಂದೇಶವನ್ನು ಈ ಕಾರ್ಯಾಚರಣೆ ಸ್ಪಷ್ಟಪಡಿಸಿದೆ. ಬಾಗಲಕೋಟೆ ಜಿಲ್ಲೆಯಲ್ಲಿನ ಈ ಪೊಲೀಸ್ ಯಶಸ್ಸು ಸಾರ್ವಜನಿಕರಲ್ಲಿ ವಿಶ್ವಾಸ ಹೆಚ್ಚಿಸುವಂತಿದ್ದು, ಮುಂದಿನ ದಿನಗಳಲ್ಲಿ ಕಳ್ಳತನ ಪ್ರಕರಣಗಳ ನಿಯಂತ್ರಣಕ್ಕೆ ಸಹಕಾರಿಯಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.


ವಶಪಡಿಸಿಕೊಂಡ ಚಿನ್ನ ಹಾಗೂ ಬೈಕ್‌ನೊಂದಿಗೆ ತನಿಖಾ ತಂಡದವರು



ವಶಪಡಿಸಿಕೊಂಡ ಬೈಕ್‌ಗಳೊಂದಿಗೆ ಹುನಗುಂದ ಠಾಣೆಯ ಪೊಲೀಸರು

# ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಬೆಂಗಳೂರು ಘಟಕಕ್ಕೆ ಎಸ್. ಸೋಮಶೇಖರ್ ಗಾಂಧಿ ಅಧ್ಯಕ್ಷರಾಗಿ ಆಯ್ಕೆ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಬೆಂಗಳೂರು ನಗರ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಹಿರಿಯ ಪತ್ರಕರ್ತ ಎಸ್. ಸೋಮಶೇಖರ ಗಾಂಧಿ ಅವರು ಆಯ್ಕೆಯಾಗಿದ್ದಾರೆ. ಈ ಕುರಿತು ಮುಖ್ಯ ಚುನಾವಣಾಧಿಕಾರಿ ರವಿಟೆಲಕ್ಸ್ ಹಾಗೂ ನಗರ ಜಿಲ್ಲಾ ಚುನಾವಣಾಧಿಕಾರಿ ನಂಜುಡಪ್ಪ ಅವರು ಪತ್ರಿಕಾ ಪ್ರಕಟಣೆ ಮೂಲಕ ಮಾಹಿತಿ ನೀಡಿದ್ದಾರೆ.

ಸಂಘದ ಉಪಾಧ್ಯಕ್ಷರಾಗಿ ಹೆಚ್.ಎಸ್. ಪರಿಮಳ, ಹೆಚ್.ಕೆ. ಬಸವರಾಜ, ಕೆ.ಎಸ್. ಸ್ವಾಮಿ ಆಯ್ಕೆಯಾಗಿದ್ದು, ಪ್ರಧಾನ ಕಾರ್ಯದರ್ಶಿಯಾಗಿ ಜಯಕುಮಾರಗೌಡ, ಖಜಾಂಚಿಯಾಗಿ ಟಿ. ಮೋಹನ್ ಅವರು ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿಗಳಾಗಿ ಡಿ.ಎಸ್. ಗೋದಾವರಿ, ಕೆ. ಹರೀಶ್ ಹಾಗೂ ಕೆ.ಎಲ್. ಲೋಕೇಶ್ ನೇಮಕಗೊಂಡಿದ್ದಾರೆ.

ರಾಜ್ಯ ಕಾರ್ಯಕಾರಿ ಸಮಿತಿಗೆ ಹೆಚ್.ಆರ್. ರವೀಶ್ ಆಯ್ಕೆಯಾಗಿದ್ದಾರೆ. ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾಗಿ ರವಿಕಾಂತ ಕುಂದಾಪುರ, ಗಂಡಸಿ ಸದಾನಂದಸ್ವಾಮಿ, ಗಂಗರಾಜು, ಬಿ.ಪಿ. ನಟರಾಜು, ಬಿ.ಎನ್. ಮೋಹನ್‌ಕುಮಾರ್, ರಮಾಕಾಂತ ಗುಗಿರಿ, ಆರ್. ರಾಜಗಿರಿ ಪ್ರದೀಪ್, ಬಿ.ಎನ್. ರಾಮಚಂದ್ರ, ಲಿಂಗರಾಜು ಡಿ., ಶರಣಬಸಪ್ಪ,



ಎನ್. ಶಿವಾನಂದ, ಡಿ.ಎಲ್. ಹರೀಶ್, ಎಸ್. ಶ್ಯಾಮ್, ಡಿ.ಕೆ. ಸುಂದರೇಶ್, ಬಿ.ಕೆ. ಹನುಮಂತರಾಜು ಸೇರಿದಂತೆ ಅನೇಕ ಹಿರಿಯ ಹಾಗೂ ಅನುಭವಿ ಪತ್ರಕರ್ತರು ಆಯ್ಕೆಯಾಗಿದ್ದಾರೆ.

ನೂತನ ಪದಾಧಿಕಾರಿಗಳ ಆಯ್ಕೆಯಿಂದ ಬೆಂಗಳೂರು ನಗರದಲ್ಲಿನ ಪತ್ರಕರ್ತರ ಹಿತಾಸಕ್ತಿ, ವೃತ್ತಿಪರ ಮೌಲ್ಯಗಳ ರಕ್ಷಣೆ ಹಾಗೂ ಸಂಘಟನೆಯ ಬಲವರ್ಧನೆಗೆ ಹೊಸ ಚೈತನ್ಯ ಸಿಗಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ.


## ಹೇಳಿಕೆಗೆ ಹಿಂಜರಿಕೆ: ಕೈ ಮುಗಿದು ಕ್ಷಮೆ





ನಿರ್ಮಾಪಕ ಕನಕಪುರ ಶ್ರೀನಿವಾಸ್ ಅವರು, ನಟರು ಪುನೀತ್ ರಾಜ್‌ಕುಮಾರ್, ಶಿವರಾಜ್‌ಕುಮಾರ್ ಹಾಗೂ ದರ್ಶನ್ ಕುರಿತು ಮಾಡಿದ ವಿವಾದಾತ್ಮಕ ಹೇಳಿಕೆಗಳಿಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಬಹಿರಂಗವಾಗಿ ಕ್ಷಮೆ ಕೋರಿದ್ದಾರೆ. ಆರ್ಥಿಕ ಸಂಕಷ್ಟ ಮತ್ತು ಸಿನಿಮಾ ಬಿಡುಗಡೆಯ ಒತ್ತಡದಿಂದ ಭಾವೋದ್ರೇಕದಲ್ಲಿ ಮಾತನಾಡಿದ್ದೆ ಎಂದು ಒಪ್ಪಿಕೊಂಡ ಅವರು, 'ಅಪ್ಪು ಸರ್ ದೇವರಿದ್ದಂತೆ' ಎಂದು ಭಾವುಕರಾಗಿ ಹೇಳಿದರು. ಮಂಡಳಿ ಅಧ್ಯಕ್ಷೆ ಜಯಮಾಲಾ ಅವರ ಸಮ್ಮುಖದಲ್ಲಿ ಮಾತನಾಡಿದ ಶ್ರೀನಿವಾಸ್, ತಮ್ಮ ಮಾತುಗಳನ್ನು ಹಿಂಪಡೆಯುತ್ತಾ, ಎಲ್ಲ ಕಲಾವಿದರ ಸಹಕಾರವನ್ನು ಮನವಿ ಮಾಡಿಕೊಂಡಿದ್ದಾರೆ. ☯

## ದರ್ಶನ್ ಇದ್ದರೆ ಮಾತ್ರ 'ಸಿಂಧೂರ ಲಕ್ಷ್ಮಣ'





ರೇಣುಕಾಸ್ವಾಮಿ ಪ್ರಕರಣದ ಹಿನ್ನೆಲೆಯಲ್ಲಿ ನಟ ದರ್ಶನ್ ಸಂಕಷ್ಟಕ್ಕೆ ಸಿಲುಕಿದ್ದು, ಅವರ ಮುಂದಿನ ಸಿನಿಮಾಗಳಿಗೆ ಅಡ್ಡಿಯಾಗಿವೆ. ಹೈಕೋರ್ಟ್ ಜಾಮೀನಿನ ಬಳಿಕ ಸುಪ್ರೀಂ ಕೋರ್ಟ್‌ನಿಂದ ಬಂದ ಆದೇಶದಿಂದಾಗಿ ದರ್ಶನ್ ಮತ್ತೆ ಜೈಲು ಸೇರಬೇಕಾಯಿತು. ಈ ಬೆಳವಣಿಗೆಯಿಂದ ದರ್ಶನ್ ನಟಿಸಬೇಕಿದ್ದ ಕೆಲವು ಸಿನಿಮಾಗಳು ತಡವಾಗಿದ್ದು, ಕೆಲ ಯೋಜನೆಗಳು ಸಂಪೂರ್ಣವಾಗಿ ನಿಂತು ಹೋಗಿವೆ. ಆದರೂ ಶೀಘ್ರದಲ್ಲೇ ಅವರು ಜಾಮೀನಿನಲ್ಲಿ ಹೊರಬರಬಹುದು ಎಂಬ ನಿರೀಕ್ಷೆ ಅಭಿಮಾನಿಗಳು ಹಾಗೂ ಆಪ್ತರಲ್ಲಿ ಮುಂದುವರಿದಿದೆ.

ಇದೇ ಸಂದರ್ಭದಲ್ಲಿ ನಿರ್ದೇಶಕ ತರುಣ್ ಸುಧೀರ್ 'ಸಿಂಧೂರ ಲಕ್ಷ್ಮಣ' ಬಯೋಪಿಕ್ ಕುರಿತು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಈ ಚಿತ್ರಕ್ಕಾಗಿ ದರ್ಶನ್ ಸೂಚನೆಯಂತೆ ತಯಾರಿಸಿದ ಸ್ಕ್ರಿಪ್ಟ್ ಈಗಲೂ ಅವರಿಗೇ ಮೀಸಲು ಎಂದು ತಿಳಿಸಿದ್ದಾರೆ. 'ದರ್ಶನ್ ಸರ್ ನಟಿಸಿದರೆ ಮಾತ್ರ ನಾನು 'ಸಿಂಧೂರ ಲಕ್ಷ್ಮಣ' ಸಿನಿಮಾ ಮಾಡುತ್ತೇನೆ. ಬೇರೆ ಯಾರಿಗೂ ಈ ಸಿನಿಮಾ ಮಾಡುವುದಿಲ್ಲ' ಎಂದು ತರುಣ್ ಖಡಕ್ ಆಗಿ ಹೇಳಿದ್ದಾರೆ. ದರ್ಶನ್ ಯಾವಾಗ ಒಪ್ಪಿಗೆ ನೀಡುತ್ತಾರೋ, ಆಗಲೇ ಈ ಸಿನಿಮಾ ಶುರುವಾಗಲಿದೆ ಎಂದಿದ್ದಾರೆ. ☯


## ಸಿನಿಪ್ರಿಯರ ಮನಗೆದ್ದ 'ಸೀತಾರಾಮ್'



ಸಸ್ಪೆನ್ಸ್ ಥ್ರಿಲ್ಲರ್ ಅಭಿಮಾನಿಗಳಿಗೆ ರುಚಿಕಟ್ಟಾದ ಅನುಭವ ನೀಡುವ ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಚಿತ್ರ ತೆರೆ ಕಂಡಿದೆ. ವಿಜಯ ರಾಘವೇಂದ್ರ ಅಭಿನಯದ, ದೇವಿ ಪ್ರಸಾದ್ ಶೆಟ್ಟಿ ನಿರ್ದೇಶನದ ಈ ಸಿನಿಮಾ ಮಲೆನಾಡಿನ ಹಿನ್ನೆಲೆಯಲ್ಲಿನ ಸರಣಿ ಕೊಲೆಗಳ ತನಿಖೆಯನ್ನು ಕೇಂದ್ರವಾಗಿಟ್ಟುಕೊಂಡಿದೆ.

ಆನೆಗದ್ದೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆಯುವ ಮರ್ಡರ್ ಮಿಸ್ಟ್ರಿ ಕಥೆ, ಯಾವುದೇ ಅತಿರೇಕವಿಲ್ಲದೆ ನೈಜವಾಗಿ ಸಾಗುತ್ತದೆ. ಇನ್ಸ್‌ಪೆಕ್ಟರ್ ಸೀತಾರಾವ್ ಪಾತ್ರದಲ್ಲಿ ವಿಜಯ ರಾಘವೇಂದ್ರ, ಸಂಯಮಿತ ಹಾಗೂ ಬುದ್ಧಿವಂತ ಪೊಲೀಸ್ ಅಧಿಕಾರಿಯಾಗಿ ಮನಗೆಲ್ಲುತ್ತಾರೆ. ಕೊಲೆಗಾರನ ರಹಸ್ಯವನ್ನು ಬಿಚ್ಚುವ ಪ್ರಕ್ರಿಯೆಯಲ್ಲಿ ಬರುತ್ತಿರುವ ಅನಿರೀಕ್ಷಿತ ಟ್ವಿಸ್ಟ್‌ಗಳು ಚಿತ್ರದ ದೊಡ್ಡ ಪ್ಲಸ್.

ಚಿತ್ರಕಥೆ ಪೊಲೀಸ್ ತನಿಖೆಯ ವಾಸ್ತವಿಕ ಅಂಶಗಳನ್ನು ಚೆನ್ನಾಗಿ ಹಿಡಿದಿಟ್ಟಿದ್ದು, ಪ್ರೇಕ್ಷಕರ ಊಹೆಯನ್ನು ಮರುಮರು ತಲೆಕೆಳಗಾಗಿಸುತ್ತದೆ. ಮೊದಲಾರ್ಧಕ್ಕಿಂತ ಎರಡನೇಯರ್ಧ ಹೆಚ್ಚು ರೋಚಕವಾಗಿದ್ದು, ಅಚ್ಚುಕಟ್ಟಾದ ನಿರೂಪಣೆ ಮತ್ತು ಹಿಡಿತವಿರುವ ಕಥೆ ಚಿತ್ರದ ಬಲವಾಗಿದೆ. ☯



## ಪ್ರೇಕ್ಷಕರ ನಿರಾಸೆ ; ರವಿಚಂದ್ರನ್ ಹತಾಶೆ

ನಟ ನಿರ್ದೇಶಕ ರವಿಚಂದ್ರನ್ ಅವರು ಇತ್ತೀಚೆಗೆ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗುತ್ತಿರುವ ಬಗ್ಗೆ ವ್ಯಕ್ತಪಡಿಸಿದ ಹತಾಶೆ ಸಾಕಷ್ಟು ಚರ್ಚೆಗೆ ಕಾರಣವಾಗಿದೆ. ಒಳ್ಳೆಯ ಸಿನಿಮಾಗಳು ಬಿಡುಗಡೆಯಾಗುತ್ತಿದ್ದರೂ ಜನರು ಚಿತ್ರಮಂದಿರಗಳಿಗೆ ಬಂದು ನೋಡುತ್ತಿಲ್ಲ, ನೂರು ರೂಪಾಯಿ ಖರ್ಚು ಮಾಡಿ ಸಿನಿಮಾ ನೋಡಿದರೆ ಏನೂ ನಷ್ಟವಾಗುವುದಿಲ್ಲ ಎಂಬ ಅವರ ಹೇಳಿಕೆಯನ್ನು ಕೆಲವರು ಅತಿರೇಕವೆಂದು ಕಂಡರೆ, ಇನ್ನೂ ಕೆಲವರು ಅದರ ಒಳಾರ್ಥವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ಅವರ ಮಾತಿನ ಸಾರಾಂಶ ಚಿತ್ರರಂಗ ಉಳಿಯಬೇಕಾದರೆ ಪ್ರೇಕ್ಷಕರ ಬೆಂಬಲ ಅನಿವಾರ್ಯ ಎಂಬುದಾಗಿದ್ದರೂ, ಇಂದಿನ ಪರಿಸ್ಥಿತಿಯಲ್ಲಿ ಆ ಬೆಂಬಲವನ್ನು ನಿರೀಕ್ಷಿಸುವ ರೀತಿ ಬದಲಾಗಬೇಕಾಗಿದೆ ಎಂಬ ಅಭಿಪ್ರಾಯಗಳು ಕೇಳಿಬಂದಿವೆ.

ವರ್ಷಕ್ಕೆ ಸುಮಾರು 200ಕ್ಕೂ ಹೆಚ್ಚು ಕನ್ನಡ ಸಿನಿಮಾಗಳು ಬಿಡುಗಡೆಯಾಗುವ ಸಂದರ್ಭದಲ್ಲಿ, ಎಲ್ಲ ಚಿತ್ರಗಳನ್ನು ಪ್ರೇಕ್ಷಕರು ಚಿತ್ರಮಂದಿರದಲ್ಲೇ ಹೋಗಿ ನೋಡುವುದು ವಾಸ್ತವವಾಗಿ ಕಷ್ಟಸಾಧ್ಯ. ಸಾಮಾನ್ಯವಾಗಿ ಸಿನಿಮಾ ಅಭಿಮಾನಿಗಳು ವರ್ಷಕ್ಕೆ 10 15 ಚಿತ್ರಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ನೋಡುವುದು ಸಹಜ. ಆ ಆಯ್ಕೆಯ ಹಿಂದೆ ಸಮಯ, ಹಣ ಮತ್ತು ಮನರಂಜನೆಯ ಮೌಲ್ಯ ಎಂಬ ಅಂಶಗಳು ಪ್ರಮುಖವಾಗಿರುತ್ತವೆ. ನಿರಂತರವಾಗಿ ಗುಣಮಟ್ಟವಿಲ್ಲದ ಚಿತ್ರಗಳು ಬಂದಾಗ, ಮಧ್ಯದಲ್ಲಿ ಒಳ್ಳೆಯ ಸಿನಿಮಾ ಬಂದರೂ ಅದು ಗಮನಕ್ಕೆ ಬಾರದೇ ಹೋಗುವುದು ಪ್ರೇಕ್ಷಕರ ನಿರಾಸೆಗೆ ಕಾರಣವಾಗುತ್ತದೆ ಎಂಬ ಮಾತುಗಳೂ ವ್ಯಕ್ತವಾಗಿವೆ.

ಇದಲ್ಲದೆ, ಒಟಿಟಿ ವೇದಿಕೆಗಳು ಪ್ರೇಕ್ಷಕರಿಗೆ ಮನೆಯಲ್ಲೇ ಕುಳಿತು ಸಿನಿಮಾವನ್ನು ಆಯ್ಕೆಮಾಡುವ ಸ್ವಾತಂತ್ರ್ಯ ನೀಡಿವೆ. ಒಂದು ಚಿತ್ರ ಇಷ್ಟವಾಗದಿದ್ದರೆ ತಕ್ಷಣವೇ ಬದಲಿಸುವ ಅವಕಾಶ ಇರುವಾಗ, ಚಿತ್ರಮಂದಿರಕ್ಕೆ ಹೋಗಿ ಸಮಯ ಹಾಗೂ ಹಣ ಹೂಡುವ ಮೊದಲು ಪ್ರೇಕ್ಷಕರು ಹೆಚ್ಚು ಎಚ್ಚರಿಕೆಯಿಂದ ನಿರ್ಧಾರ ಮಾಡುತ್ತಾರೆ. ಹೀಗಾಗಿ ಜನರನ್ನು ಚಿತ್ರಮಂದಿರದವರೆಗೆ ಕರೆತರುವುದಕ್ಕೆ ಉತ್ತಮ ಕಥಾವಸ್ತು, ತಾಂತ್ರಿಕ ಗುಣಮಟ್ಟ ಮತ್ತು ಪ್ರಬಲ ವರ್ಡ್ ಆಫ್ ಮೌತ್ ಅತ್ಯಗತ್ಯವಾಗಿದೆ.

ರವಿಚಂದ್ರನ್ ಅವರ ಹತಾಶೆಯ ಹಿಂದೆ ಇರುವ ನೋವು ಹಾಗೂ ಚಿತ್ರರಂಗದ ಬಗ್ಗೆ ಅವರ ಕಾಳಜಿಯ ಬಗ್ಗೆ ಸಹಾನುಭೂತಿ ಇದ್ದರೂ, ಭಾವನಾತ್ಮಕ ಮನವಿಗಳಿಗಿಂತ ಉತ್ತಮ ಮತ್ತು ಪ್ರಾಮಾಣಿಕ ಸಿನಿಮಾಗಳೇ ಪ್ರೇಕ್ಷಕರನ್ನು ಮತ್ತೆ ಚಿತ್ರಮಂದಿರಗಳತ್ತ ಸೆಳೆಯಬಲ್ಲವು ಎಂಬುದೇ ಕನ್ನಡಿಗರ ಒಟ್ಟಾರೆ ಅಭಿಪ್ರಾಯವಾಗಿದೆ. ☯

## ಬಾಲಿವುಡ್‌ನಲ್ಲಿ ಬೆಲೆಯಿಲ್ಲ, ಆದರೆ ಬದುಕಿನ ಪಾಠ ಕಲಿತೆ



ಬಾಲಿವುಡ್‌ನಲ್ಲಿ ಅವಕಾಶಗಳ ಹುಡುಕಾಟ ಸುಲಭವಾಗಿರಲಿಲ್ಲ ಎಂದು ನಟಿ ಹೇಳಿಕೊಂಡಿದ್ದಾರೆ. ಸುಮಾರು 40ಕ್ಕೂ ಹೆಚ್ಚು ವರ್ಷಗಳಿಂದ ಚಿತ್ರರಂಗದಲ್ಲಿರುವ ಅವರು, ತೆಲುಗು ಮತ್ತು ಹಿಂದಿ ಸಿನಿಮಾಗಳಲ್ಲಿ ನಟಿಸಲು ಸಾಕಷ್ಟು ಪ್ರಯತ್ನಪಟ್ಟರೂ ನಿರೀಕ್ಷಿತ ಯಶಸ್ಸು ದೊರಕಲಿಲ್ಲ. 2019ರಲ್ಲಿ 'ಎಫ್ ಲಿಸ್ಟ್' ಯೋಜನೆಯ ಮೂಲಕ ಮತ್ತೆ ಗಮನ ಸೆಳೆಯುವ ಯತ್ನ ನಡೆದರೂ, ಅವಕಾಶಗಳು ನಿರಂತರವಾಗಿರಲಿಲ್ಲ.

ಆದರೂ ಈ ಪಯಣದಿಂದ ಬದುಕಿನ ಅಮೂಲ್ಯ ಪಾಠಗಳನ್ನು ಕಲಿತಿದ್ದೇನೆ ಎಂದು ಅವರು ಹೇಳಿದ್ದಾರೆ. ಸೋಲು, ಹೋರಾಟ ಮತ್ತು ಅನುಭವಗಳೇ ನನ್ನನ್ನು ಬಲಿಷ್ಠಳನ್ನಾಗಿ ಮಾಡಿವೆ ಎನ್ನುವ ಅವರು, ಈಗ ಮತ್ತೆ ಕನ್ನಡ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದು, ಮುಂದಿನ ವರ್ಷ ಬಿಡುಗಡೆಯಾಗಲಿರುವ ಹೊಸ ಚಿತ್ರಗಳ ಮೂಲಕ ಪ್ರೇಕ್ಷಕರ ಮುಂದೆ ಕಾಣಿಸಿಕೊಳ್ಳಲು ಸಿದ್ಧರಾಗಿದ್ದಾರೆ. ☯

## ಧನುಷ್ ವದಂತಿಗೆ ತೆರೆ: ಮೃಣಾಲ್ ಸ್ಪಷ್ಟನೆ





ಮೃಣಾಲ್ ಠಾಕೂರ್ ತಮ್ಮ ವೈಯಕ್ತಿಕ ಜೀವನದ ಬಗ್ಗೆ ಹರಿದಾಡಿದ ವದಂತಿಗಳಿಗೆ ಸ್ಪಷ್ಟನೆ ನೀಡಿದ್ದಾರೆ. ಧನುಷ್ ಜೊತೆ ಮದುವೆ ಸುದ್ದಿ ಸುಳ್ಳು ಎಂದು ಹೇಳಿದ ಅವರು, ಇದನ್ನು ಏಪ್ರಿಲ್ ಫೂಲ್ಸ್ ರೀತಿಯ ಊಹಾಪೋಹವೆಂದು ತಿರಸ್ಕರಿಸಿದರು. ಇದೇ ವೇಳೆ, ಸೂಪರ್ 30 ಚಿತ್ರೀಕರಣದ ಸಮಯದಲ್ಲಿ ತಮ್ಮ ಮಾಜಿ ಪ್ರಿಯಕರ ತೀವ್ರ ಅಭದ್ರತೆಯಿಂದ ಬಳಲುತ್ತಿದ್ದನೆಂದು ಬಹಿರಂಗಪಡಿಸಿದರು. ಹೃತಿಕ್ ರೋಷನ್ ಜೊತೆ ಕೆಲಸ ಮಾಡುತ್ತಿದ್ದುದರಿಂದ ಅವನು ತನ್ನನ್ನು ಹೋಲಿಸಿಕೊಂಡು ದೈಹಿಕ ಬದಲಾವಣೆಗಳಿಗೆ ಮುಂದಾಗಿದ್ದನೆಂದು ಮೃಣಾಲ್ ಹೇಳಿದರು. ಸಂಬಂಧಗಳಲ್ಲಿ ಸಮಸ್ಯೆಗಳನ್ನು ಮುಚ್ಚಿಟ್ಟುಕೊಳ್ಳದೆ ತೆರೆಯಾಗಿ ಮಾತನಾಡಬೇಕು ಎಂಬುದೇ ತಮ್ಮ ನಿಲುವು ಎಂದು ಮೃಣಾಲ್ ಸ್ಪಷ್ಟಪಡಿಸಿದ್ದಾರೆ. ☯

Vol. 41 No. 38 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 policenewsreporter@gmail.com
http//policenews.news https://www.facebook.com/profile.php?id=61579674874846 https://www.instagram.com/police_news?igsh=MWJ6bHJwZDRmZDc1aQ==